23 November 2025 Sunday
SINCE 1957

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ

ಭವಿಷ್ಯದ ಮುನ್ನುಡಿ

**ಭಾವನಾಂತರಂಗ**

ಮಳೆಯು ಹನಿ ಹನಿಗಳು ಸೇರಿ ನದಿಗಳು ಹರಿದಂತೆ,
ಜೀವನದಲ್ಲಿ ಚಿಕ್ಕ, ಚಿಕ್ಕ ಸಂತೋಷಗಳು ಕ್ಷಣಗಳು ಸೇರಿ ಮನದಲ್ಲಿ ಸಾರ್ಥಕತೆಯ ಭಾವನೆಗಳನ್ನು ತುಂಬುತ್ತವೆ!
ಸ್ನೇಹಾ ಆನಂದ್

**ಒಂದೊಳ್ಳೆ ಮಾತು**

ಒಂದೊಳ್ಳೆ ಮಾತು
ಜೀವಂತ ಗೊಂಬೆಗಳನ್ನು
ತನ್ನ ತಾಳಕ್ಕೆ ಕುಣಿಸುವ
ಏಕೈಕ
ನಿರ್ಜೀವ ವಸ್ತು
ದುಡ್ಡು
ಮೈಲಾರ ಸಾವಿತ್ರಿಬಾಯಿ

info.varthaman@gmail.com

9742504916 | ಮೈಸೂರು | ಮಂಡ್ಯ | ಬೆಂಗಳೂರು | ಹಾಸನ | ಚಾಮರಾಜನಗರ | ರಾಮನಗರ | ಬೆಂಗಳೂರು ಗ್ರಾಮಾಂತರ | ಕೊಡಗು | ಕಾರ್ಯನಿರ್ವಾಹಕ ಸಂಪಾದಕ - ಕೆ.ಆರ್.ಮಿಹಿರ್ ಆಕಾಶ್

VARTHAMAN | Volume: 69 | Issue: 39 | Pages: 06 | KA/SK/MYS/1098/2023-2025 | R.N.I. No.3577/1957 | www.varthaman.in | Price-3

# ಶಾಸಕರ 'ಕುದುರೆ ವ್ಯಾಪಾರ': ಪ್ರಹ್ಲಾದ್ ಜೋಶಿ ಆರೋಪ

**ಹುಬ್ಬಳ್ಳಿ:** ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ನಡುವಿನ ಅಧಿಕಾರ ಹಂಚಿಕೆ ಸಂಘರ್ಷದಿಂದ ರಾಜ್ಯದಲ್ಲಿ ಕಾಂಗ್ರೆಸ್ ಶಾಸಕರ 'ಕುದುರೆ ವ್ಯಾಪಾರ' ನಡೆಯುತ್ತಿದೆ ಎಂದು ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಆರೋಪಿಸಿದರು.



ನಗರದಲ್ಲಿ ಸುದ್ದಿಗಾರರೊಂದಿಗೆ ಶನಿವಾರ ಮಾತನಾಡಿದ ಪ್ರಹ್ಲಾದ್ ಜೋಶಿ ಅವರು, ಜೈಲಿನಲ್ಲಿರುವ ಶಾಸಕರಾದ ವಿನಯ್ ಕುಲಕರ್ಣಿ ಮತ್ತು ಕೆ.ಸಿ.ವೀರೇಂದ್ರ ಅವರನ್ನು ಬೆಂಗಳೂರು ಕೇಂದ್ರ ಕಾರಾಗೃಹದಲ್ಲಿ ಭೇಟಿ ಮಾಡಿ ತಮ್ಮನ್ನು ಬೆಂಬಲಿಸುವಂತೆ ಕೇಳಿಕೊಳ್ಳುವುದು ನಾಚಿಕೆಗೇಡಿನ ಸಂಗತಿ ಎಂದು ಕಿಡಿಕಾರಿದರು.

ಕಾಂಗ್ರೆಸ್‌ನಲ್ಲಿ ಒಳಜಗಳವಿದೆ. ಸಿದ್ದರಾಮಯ್ಯ ಸಿಎಂ ಸ್ಥಾನ ಬಿಟ್ಟು ಕೊಡಲು ಒಪ್ಪುತ್ತಿಲ್ಲ. ಆದರೆ ಸಿದ್ದರಾಮಯ್ಯ ಸಿಎಂ ಆಗಿ ಮುಂದುವರಿಯುವುದನ್ನು ಶಿವಕುಮಾರ್ ಇಷ್ಟಪಡುವುದಿಲ್ಲ. ಇಂತಹ ಪರಿಸ್ಥಿತಿಯಿಂದ ಎರಡೂ ಬಣಗಳು ಈಗ ಶಾಸಕರನ್ನು ಖರೀದಿಸಲು ಪ್ರಯತ್ನಿಸುತ್ತಿವೆ. ಶಾಸಕರ ಬೆಂಬಲ ಪಡೆಯಲು ಮತ್ತು ಅವರಿಗೆ ಹಣ ಪಾವತಿಸಲು ಶಿವಕುಮಾರ್ ಜೈಲಿಗೆ ಹೋಗಿರುವುದನ್ನು ನೀವು ನೋಡಿರಬಹುದು ಎಂದು ವಾಗ್ದಾಳಿ ನಡೆಸಿದರು.

ಶಾಸಕರ ಕುದುರೆ ವ್ಯಾಪಾರದ ಹಂತಕ್ಕೆ ಕಾಂಗ್ರೆಸ್ ಪರಿಸ್ಥಿತಿ ತಲುಪಿದೆ. ಅಧಿಕಾರಕ್ಕಾಗಿ ಇವರು ಆಡಳಿತವನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿದ್ದಾರೆ. ಹೀಗಾಗಿ ಬೆಂಗಳೂರಿನದಲ್ಲಿ ಹಾಡಹಗಲೇ ದರೋಡೆಗಳು ನಡೆಯುತ್ತಿವೆ. ಸರ್ಕಾರ ಬ್ರಹ್ಮಾಂಡ ಭ್ರಷ್ಟಾಚಾರದಲ್ಲಿ ತೊಡಗಿದೆ ಎಂದು ಆರೋಪಿಸಿದರು.

ಈ ಸರ್ಕಾರ ಐದು ವರ್ಷ ಆಡಳಿತ ಮಾಡಲು ಜನ ಬಹುಮತ ನೀಡಿದ್ದಾರೆ. ಐದು ವರ್ಷ

## ಡಿಕೆಶಿ ಸಿಎಂ ಆಗಲಿ: ಗಣಿಗ ರವಿಕುಮಾರ್



**ಮಂಡ್ಯ:** ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿ ಆಗಬೇಕು ಎಂದು ನನ್ನ ಹೃದಯ ಬಯಸುತ್ತಿದೆ ಎಂದು ಮಂಡ್ಯ ಶಾಸಕ ಗಣಿಗ ರವಿಕುಮಾರ್ ಹೇಳಿದರು. ಡಿ.ಕೆ. ಶಿವಕುಮಾರ್ ಪಕ್ಷಕ್ಕಾಗಿ ದುಡಿದಿದ್ದಾರೆ. ಕಾಂಗ್ರೆಸ್ ಪಕ್ಷಕ್ಕಾಗಿ ಅವರು ಜೈಲಿಗೂ ಸಹ ಹೋಗಿದ್ದಾರೆ. ಡಿಕೆಶಿ ಅವರಿಗೆ ಸಿಎಂ ಸ್ಥಾನ ಸಿಗಬೇಕು. ನಮಗೆ ಸಿಎಂ ಸಿದ್ದರಾಮಯ್ಯ ಹಾಗೂ ಡಿ.ಕೆ.ಶಿವಕುಮಾರ್ ಇಬ್ಬರೂ ಸಮಾನರು. ಇಬ್ಬರ ಕೊಡುಗೆ ಪಕ್ಷಕ್ಕೆ ಅಪಾರವಾಗಿದೆ. 140 ಜನ ಶಾಸಕರು ಇಬ್ಬರ ಪರವಾಗಿ ಇದ್ದಾರೆ. ಆದಷ್ಟು ಬೇಗ ಎಲ್ಲವೂ ಒಳ್ಳೆಯದಾಗುತ್ತದೆ, ಹೈಕಮಾಂಡ್ ನಿರ್ಧಾರಕ್ಕೆ ಎಲ್ಲರೂ ಬದ್ಧರಾಗಿರುತ್ತಾರೆ ಎಂದರು.

# ರೈತರ ಸಮಸ್ಯೆ ಬಗೆಹರಿಸಲು ಸಿಎಂ ಆಗ್ರಹ

**ಮೆಕ್ಕೆಜೋಳ, ಹೆಸರುಕಾಳು ಬೆಲೆ ಕುಸಿತ | ಪ್ರಧಾನಿ ಮೋದಿಗೆ ಸಿದ್ದರಾಮಯ್ಯ ಪತ್ರ**

**ಬೆಂಗಳೂರು:** ರಾಜ್ಯದಲ್ಲಿ ಮೆಕ್ಕೆಜೋಳ ಮತ್ತು ಹೆಸರು ಕಾಳಿನ ಬೆಲೆಯಲ್ಲಿ ತೀವ್ರ ಕುಸಿತ ಉಂಟಾಗಿರುವ ಹಿನ್ನೆಲೆಯಲ್ಲಿ ರೈತರು ಎದುರಿಸುತ್ತಿರುವ ಸಮಸ್ಯೆಗಳ ಕುರಿತು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪತ್ರ ಬರೆದಿದ್ದಾರೆ.

ಕರ್ನಾಟಕದಲ್ಲಿ ಮೆಕ್ಕೆ ಜೋಳ ಮತ್ತು ಹೆಸರುಕಾಳು ಬೆಳೆಯ ಬೆಲೆಗಳ ತೀವ್ರ ಕುಸಿತದ ಬಗ್ಗೆ ಗಾಢ ಆತಂಕ ಮತ್ತು ತುರ್ತು ಗಮನ ಹರಿಸುವ ಉದ್ದೇಶದಿಂದ ನಿಮಗೆ ಈ ಪತ್ರ ಬರೆಯುತ್ತಿದ್ದೇನೆ. ಇವು ಲಕ್ಷಾಂತರ ರೈತರ ಜೀವನಕ್ಕೆ ಆಧಾರವಾಗಿರುವ ಬೆಳೆಗಳಾಗಿವೆ. ಭಾರತ ಸರ್ಕಾರ ಘೋಷಿಸಿರುವ ಕನಿಷ್ಠ ಬೆಂಬಲ ಬೆಲೆಗಿಂತ ಗಣನೀಯವಾಗಿ ಕಡಿಮೆಯಾದ ಮಾರುಕಟ್ಟೆ ಬೆಲೆಗಳು ರೈತರಲ್ಲಿ ದೊಡ್ಡ ಆತಂಕವನ್ನು ಸೃಷ್ಟಿಸಿವೆ. ಕೇಂದ್ರ ಸರ್ಕಾರ ಮಧ್ಯೆ ಪ್ರವೇಶಿಸಿ ಸಮಸ್ಯೆ ಬಗೆಹರಿಸಬೇಕೆಂದು ಸಿದ್ದರಾಮಯ್ಯ ಮನವಿ ಮಾಡಿದ್ದಾರೆ. ಪತ್ರದ ಪ್ರತಿಗಳನ್ನು ಅವರು ಸಾಮಾಜಿಕ ಮಾಧ್ಯಮ ಎಕ್ಸ್‌ನಲ್ಲಿ ಸಿಎಂ ಪೋಸ್ಟ್ ಮಾಡಿದ್ದಾರೆ.

ಈ ಖಾರಿಫ್ ಋತುವಿನಲ್ಲಿ ಕರ್ನಾಟಕದಲ್ಲಿ 17.94 ಲಕ್ಷ ಹೆಕ್ಟೇರಿಗೂ ಅಧಿಕ ಪ್ರದೇಶದಲ್ಲಿ ಮೆಕ್ಕೆ ಪುಟ 2ಕ್ಕೆ





### ಖರೀದಿ ಕೇಂದ್ರ ಆರಂಭಿಸಿ

ಕೇಂದ್ರ ಸರ್ಕಾರ ತಕ್ಷಣ ಎಂಎಸ್‌ಪಿ ದರದಲ್ಲಿ ಖರೀದಿ ಆರಂಭಿಸಲು ನಿರ್ದೇಶನ ನೀಡಬೇಕು. ಎಥೆನಾಲ್ ಪೂರೈಕೆಯ ಇಡಿ ವ್ಯವಸ್ಥೆಯಲ್ಲಿ ಕರ್ನಾಟಕದ ರೈತರ ನ್ಯಾಯಯುತ ಭಾಗವಹಿಸುವಿಕೆಯನ್ನು ಖಾತ್ರಿಪಡಿಸಿ. ಕರ್ನಾಟಕಕ್ಕೆ ಎಥೆನಾಲ್ ಹಂಚಿಕೆ ಪ್ರಮಾಣವನ್ನು ಹೆಚ್ಚಿಸಬೇಕು. ಮೆಕ್ಕೆಜೋಳ ಆಮದು ಕಡಿಮೆ ಮಾಡಿ. ಹೆಸರುಕಾಳು ಖರೀದಿಗೆ ಗುಣಮಟ್ಟದ ನಿಯಮಗಳಲ್ಲಿ ಸಡಿಲಿಕೆ ಮಾಡುವಂತೆ ಸಿಎಂ ಸಿದ್ದರಾಮಯ್ಯ ಆಗ್ರಹಿಸಿದ್ದಾರೆ.

## ಗಾಳ ಹಾಕಿ ಮೀನು ಹಿಡಿಯುವುದು ಗೊತ್ತು: ಡಿಕೆಶಿ ಮಾರ್ಮಿಕ ಮಾತು!

**ಬೆಂಗಳೂರು:** ಮೀನು ಹಿಡಿಯಲು ತಾಳ್ಮೆ ಬೇಕು. ಕೆಲವೊಮ್ಮೆ ವಾರವಾದರೂ ಮೀನು ಸಿಗಲ್ಲ. ಗಾಳ ಹಾಕಿ ಮೀನು ಹಿಡಿಯುವ ಕಲೆ ನನಗೆ ಗೊತ್ತಿದೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮಾರ್ಮಿಕವಾಗಿ ಮಾತನಾಡಿದ್ದಾರೆ.



ಪ್ರಸಕ್ತ ರಾಜಕೀಯ ಬೆಳವಣಿಗೆಗಳ ನಡುವೆ ಸಿಎಂ ಸಿದ್ದರಾಮಯ್ಯ ಸಮ್ಮುಖದಲ್ಲಿಯೇ ಡಿ.ಕೆ. ಶಿವಕುಮಾರ್ ಈ ರೀತಿ ಮಾತನಾಡಿರುವುದು ರಾಜಕೀಯ ವಲಯದಲ್ಲಿ ನಾನಾ ರೀತಿಯ ಚರ್ಚೆಗೆ ಗ್ರಾಸವಾಗಿದೆ.

ಮತ್ಸ್ಯಮೇಳದಲ್ಲಿ ಶನಿವಾರ ಮಾತನಾಡಿದ ಅವರು, ನಾನು ಮುಖ್ಯಮಂತ್ರಿಗಳಿಗೆ ಮಶೀರ್ ಫಿಶ್ ತೋರಿಸಿದೆ. ನಾನು ಬಾಲ್ಯದಲ್ಲಿ ಸಂಗಮಕ್ಕೆ ಹೋಗಿ ಮೀನುಗಳನ್ನು ಹಿಡಿಯುತ್ತಿದ್ದೆ. ಅದಕ್ಕೆ ಬಹಳ ತಾಳ್ಮೆ ಬೇಕು. ಈ ಮೀನು ವ್ಯವಹಾರ ಜಾತಿಯ ಮೇಲೆ ಇಲ್ಲ. ನೀತಿ, ಛಲ ಹಾಗೂ ಆಸಕ್ತಿಯ ಮೇಲಿದೆ ಎಂದು ತಿಳಿಸಿದರು.

ಮೀನು ಎಂದರೆ ಲಕ್ಷ್ಮಿ. ರೈತರು ಭೂಮಿಯಲ್ಲಿ ಕೃಷಿ ಮಾಡಿದರೆ, ಮೀನುಗಾರರು ನೀರಿನಲ್ಲಿ ಕೃಷಿ ಮಾಡುತ್ತಾರೆ. ನಿಮ್ಮ ಪ್ರಾಣವನ್ನು ಪಣಕ್ಕಿಟ್ಟು ಸಮುದ್ರದಲ್ಲಿ ಮೀನುಗಾರಿಕೆ ಮಾಡುತ್ತೀರಿ. ನಿಮಗೆ ಸೂರ್ಯ, ಚಂದ್ರ ಎರಡೇ ಕಾಣುವುದು. ಉಳಿದಂತೆ ನಿಮ್ಮ ಆತ್ಮಬಲದಿಂದ ಇದನ್ನು ಮಾಡಿಕೊಂಡು ಬರುತ್ತಿದ್ದೀರಿ. ಮೀನು ಹಿಡಿಯುವುದು ಬೇರೆ, ಮಾರಾಟ ಮಾಡುವುದು ಬೇರೆ. ಮೀನುಗಾರನಿಗೆ ನಿತ್ಯ ಮೀನು ಸಿಗುವುದಿಲ್ಲ. ಕೆಲವೊಮ್ಮೆ ವಾರವಾದರೂ ಒಂದು ಮೀನು ಸಿಗುವುದಿಲ್ಲ. ಅಂತಹ ತಾಳ್ಮೆ ವೃತ್ತಿ ನಡೆಸುತ್ತಿರುವ ನೀವು ಶ್ರಮಜೀವಿಗಳು ಎಂದು ಡಿಕೆಶಿ ಮಾರ್ಮಿಕವಾಗಿ ಹೇಳಿದರು.

## ರಾಜ್ಯಾಧ್ಯಕ್ಷ ಸ್ಥಾನ ಉಳಿವಿಗೆ ವಿಜಯೇಂದ್ರ ಕಸರತ್ತು

ಬೆಂಗಳೂರು: ರಾಜ್ಯ ಕಾಂಗ್ರೆಸ್‌ನಲ್ಲಿ ಅಧಿಕಾರ ಹಂಚಿಕೆಯ ಕದನ ತಾರಕಕ್ಕೇರಿರುವಾಗಲೇ ಬಿಜೆಪಿಯಲ್ಲೂ ರಾಜ್ಯಾಧ್ಯಕ್ಷರ ನೇಮಕ ಮುನ್ನಲೆಗೆ ಬಂದಿದೆ.



ದೆಹಲಿ ಯಾತ್ರೆ ನಡೆಸಿರುವ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರು ಶನಿವಾರ ಪಕ್ಷದ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಬಿ.ಎಲ್.ಸಂತೋಷ್ ಮತ್ತು ರಾಜ್ಯ ಉಸ್ತುವಾರಿ ರಾಧಾ ಮೋಹನ್ ದಾಸ್ ಅಗರ್ವಾಲ್ ಅವರನ್ನು ಭೇಟಿ ಮಾಡಿ ಚರ್ಚಿಸಿದರು. ಬಿಹಾರ ವಿಧಾನ ಸಭಾ ಚುನಾವಣೆಯ ಫಲಿತಾಂಶದ ನಂತರ ಬಿಜೆಪಿ ಹೈಕಮಾಂಡ್ ನೂತನ ರಾಷ್ಟ್ರೀಯ ಅಧ್ಯಕ್ಷರ ನೇಮಕಕ್ಕೆ ಮುಂದಾಗಿದೆ. ಅದಕ್ಕೂ ಮೊದಲು ಕರ್ನಾಟಕ ಸೇರಿದಂತೆ ಕೆಲವು ರಾಜ್ಯಗಳ ಅಧ್ಯಕ್ಷರ ನೇಮಕಕ್ಕೂ ಪುಟ 2ಕ್ಕೆ

# ಸಿದ್ದು ಭೇಟಿಗೆ ಶಾಸಕರ ಪೈಪೋಟಿ

**ಸಚಿವ ಸ್ಥಾನಕ್ಕಾಗಿ ದುಂಬಾಲು | ಶಕ್ತಿ ಕೇಂದ್ರವಾದ ಮುಖ್ಯಮಂತ್ರಿ ನಿವಾಸ**

ಬೆಂಗಳೂರು: ಸಿದ್ದರಾಮಯ್ಯ ಮತ್ತು ಡಿ.ಕೆ.ಶಿವಕುಮಾರ್ ಬಣಗಳ ನಡುವೆ ಸಂಪುಟ ಪುನರ್‌ರಚನೆ, ಅಧಿಕಾರ ಹಸ್ತಾಂತರದ ಹಗ್ಗಜಗ್ಗಾಟ ಬಿರುಸು ಪಡೆದಿರುವ ನಡುವೆಯೇ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನಿವಾಸಕ್ಕೆ ಸಚಿವರು, ಶಾಸಕರು ಗುಂಪುಗುಂಪಾಗಿ ಆಗಮಿಸುತ್ತಿದ್ದಾರೆ.

ಸಚಿವರು, ಶಾಸಕರು ಮುಖ್ಯಮಂತ್ರಿಗಳನ್ನು ಭೇಟಿ ಮಾಡಿ ಚರ್ಚೆ ನಡೆಸುತ್ತಿರುವುದು ರಾಜ್ಯ ರಾಜಕೀಯ ವಲಯದಲ್ಲಿ ಕುತೂಹಲ ಮೂಡಿಸಿದೆ. ಸಂಪುಟ ಪುನರ್ ರಚನೆಯಾದರೆ, ತಮ್ಮನ್ನು ಕೈಬಿಡಬಹುದೆಂಬ ಆತಂಕಕ್ಕೆ ಒಳಗಾಗಿರುವ ಸಚಿವ ಮಂಕಾಳ ವೈದ್ಯ ಅವರು ಕಾವೇರಿ ನಿವಾಸದಲ್ಲಿ ಮುಖ್ಯಮಂತ್ರಿ ಅವರನ್ನು ಶನಿವಾರ ಭೇಟಿ ಮಾಡಿ ಚರ್ಚೆ ನಡೆಸಿದರು.

ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರನ್ನು ಶುಕ್ರವಾರ ಸಂಜೆ ಭೇಟಿ ಮಾಡಿದ್ದ ಶಾಸಕರಾದ ಸಿ.ಪಿ. ಯೋಗೇಶ್ವರ್, ಶ್ರೀನಿವಾಸ ಮಾನೆ, ಯಾಸಿರ್ ಪಠಾಣ್, ಸಂಗಮೇಶ್ ಅವರು ಇಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ ಸಚಿವ ಸ್ಥಾನದ ಬೇಡಿಕೆ ಇಟ್ಟಿದ್ದಾರೆ.

ಸಚಿವ ಸಂಪುಟ ಪುನರ್ ರಚನೆ ಆದರೆ ಸಿದ್ದರಾಮಯ್ಯ ಅವರನ್ನು ಒಲೈಸುವ ಅಗತ್ಯವಿದೆ. ಅಥವಾ ನಾಯಕತ್ವ ಬದಲಾಗಿ ಡಿ.ಕೆ.ಶಿವಕುಮಾರ್ ಸಿಎಂ ಆದರೆ, ಆಗ ತಮ್ಮ ಪ್ರಯತ್ನ ವಿಫಲವಾಗಲಿದೆ. ಹೀಗಾಗಿ ಸಾಕಷ್ಟು ಶಾಸಕರು ಈಗ ಯಾವುದೇ ಬಣದ ಜೊತೆ ನೇರವಾಗಿ ಗುರುತಿಸಿಕೊಳ್ಳಲು ಇಷ್ಟಪಡುತ್ತಿಲ್ಲ. ಎಲ್ಲರೂ ಇಬ್ಬರೂ ನಮ್ಮ ನಾಯಕರು ಎನ್ನುತ್ತಿದ್ದಾರೆ. ಅಲ್ಲದೆ, ಸಿಎಂ ಮತ್ತು ಡಿಸಿಎಂ ಇಬ್ಬರನ್ನೂ ಭೇಟಿ ಮಾಡಿ ಸಚಿವ ಸ್ಥಾನಕ್ಕೆ ಮನವಿ ಮಾಡುತ್ತಿದ್ದಾರೆ.

### ಒಂದೇ ವೇದಿಕೆಯಲ್ಲಿ ಸಿಎಂ–ಡಿಸಿಎಂ

**ಬೆಂಗಳೂರು:** ಅಧಿಕಾರಿ ಹಸ್ತಾಂತರ ಮತ್ತು ಸಂಪುಟ ಪುನರ್ ರಚನೆ ಜಟಾಪಟಿ ನಡುವೆಯೇ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಡಿಸಿಎಂ ಡಿ.ಕೆ.ಶಿವಕುಮಾರ್ ಒಟ್ಟಿಗೆ ಒಂದೇ ವೇದಿಕೆಯಲ್ಲಿ ಕಾಣಿಸಿಕೊಂಡಿದ್ದಾರೆ.

ವಿಶ್ವ ಮೀನುಗಾರಿಕೆ ದಿನಾಚರಣೆ ಹಿನ್ನೆಲೆಯಲ್ಲಿ ಶನಿವಾರ ಹೆಬ್ಬಾಳದ ಪಶು ವೈದ್ಯಕೀಯ ಮಹಾವಿದ್ಯಾಲಯದ ಆವರಣದಲ್ಲಿ ಆಯೋಜಿಸಿದ್ದ ಮತ್ಸ್ಯಮೇಳ ಕಾರ್ಯಕ್ರಮಕ್ಕೆ ಸಿಎಂ ಹಾಗೂ ಡಿಸಿಎಂ ಒಟ್ಟಿಗೆ ಆಗಮಿಸಿದರು. ಅಲ್ಲದೇ ಮತ್ಸ್ಯಮೇಳದ ಸ್ಟಾಲ್‌ಗಳನ್ನು ಜೊತೆಯಾಗಿ ವೀಕ್ಷಿಸಿದ್ದಾರೆ. ಒಂದೇ ವೇದಿಕೆಯ ಮೇಲೆ ಅಕ್ಕಪಕ್ಕ ಕುಳಿತಿದ್ದ ಸಿಎಂ–ಡಿಸಿಎಂ ಪರಸ್ಪರ ಮಾತನಾಡಿದರು.

ರಾಜ್ಯ ಕಾಂಗ್ರೆಸ್‌ನಲ್ಲಿ ಅಧಿಕಾರ ಹಂಚಿಕೆ ಸಮರ ಭಾರೀ ಸದ್ದು ಮಾಡುತ್ತಿದೆ. ಸಿಎಂ ಸಿದ್ದರಾಮಯ್ಯ ಬಣ ಒಂದು ಕಡೆಯಾದರೆ, ಡಿಸಿಎಂ ಡಿ.ಕೆ.ಶಿವಕುಮಾರ್ ಬಣ ಮತ್ತೊಂದು ಕಡೆ ಇದೆ. ಡಿ.ಕೆ



ಶಿವಕುಮಾರ್ ಮುಖ್ಯಮಂತ್ರಿಯಾಗಬೇಕು ಎಂದು ಡಿಕೆಶಿ ಬಣದ ಶಾಸಕರು ಮತ್ತು ಸಚಿವರು ದೆಹಲಿ ಪರೇಡ್ ನಡೆಸಿದ್ದಾರೆ. ಇದೆಲ್ಲದರ ನಡುವೆ ಸಿಎಂ ಸಿದ್ದರಾಮಯ್ಯ ಹಾಗೂ ಡಿಕೆ ಬ್ರದರ್ಸ್ ಪ್ರತ್ಯೇಕವಾಗಿ ಕಾಂಗ್ರೆಸ್ ಹೈಕಮಾಂಡ್ ಅನ್ನು ಭೇಟಿ ಮಾಡಿ ಮಾತುಕತೆ ನಡೆಸಿದ್ದಾರೆ.

ಸಂಸತ್ ಅಧಿವೇಶನದ ಸಂದರ್ಭದಲ್ಲಿ ಎಲ್ಲ ನಾಯಕರು ಒಟ್ಟಿಗೆ ಸೇರಲಿದ್ದು, ಆ ಸಂದರ್ಭದಲ್ಲಿ ನಾಯಕತ್ವದ ವಿಚಾರದ ಬಗ್ಗೆಯೂ ಚರ್ಚಿಸಲಾಗುವುದು. ಪುಟ 2ಕ್ಕೆ

### ಡೀಸೆಲ್ ಸುರಿದುಕೊಂಡು ಶಾಸಕರ ಬೆಂಬಲಗರ ಹೈಡ್ರಾಮ

**ಗದಗ:** ರೋಣ ಕ್ಷೇತ್ರದ ಶಾಸಕ ಜಿ.ಎಸ್. ಪಾಟೀಲ ಅವರಿಗೆ ಸಚಿವ ಸ್ಥಾನ ನೀಡಬೇಕು ಎಂದು ಒತ್ತಾಯಿಸಿ ಪಟ್ಟಣದ ಕಾಲಕಾಲೇಶ್ವರ ವೃತ್ತದಲ್ಲಿ ನಡೆಯುತ್ತಿದ್ದ ಪ್ರತಿಭಟನೆ ಸಂದರ್ಭ ಇಬ್ಬರು ಕಾಂಗ್ರೆಸ್ ಕಾರ್ಯಕರ್ತರು ಮೈಮೇಲೆ ಡೀಸೆಲ್ ಸುರಿದುಕೊಂಡು ಹೈಡ್ರಾಮ ನಡೆಸಿದರು.

ಪ್ರತಿಭಟನೆ ನಡೆಯುತ್ತಿದ್ದ ಸಂದರ್ಭದಲ್ಲಿ ವೃತ್ತದ ಒಂದು ಬದಿಯಲ್ಲಿ ದಿಂಡೂರ ಗ್ರಾಮದ ಸಂಗಪ್ಪ ತೇಜಿ ಮೈಮೇಲೆ ಡೀಸೆಲ್ ಸುರಿದು ಕೊಂಡು ಆತ್ಮಹತ್ಯೆಗೆ ಯತ್ನಿಸಿದರು. ತಕ್ಷಣ ಕಾರ್ಯಕರ್ತರು ಹಾಗೂ ಪೊಲೀಸರು ಆತನಿಂದ ಡೀಸೆಲ್ ಕ್ಯಾನ್ ಕಸಿಕುದಕೊಂಡು ಸಮಾಧಾನಪಡಿಸಿದರು. ಪ್ರತಿಭಟನೆ ಮುಗಿದ ಬಳಿಕ ಮಾರನ ಬಸರಿ ಗ್ರಾಮದ ರವಿ ಅಬ್ಬಿಗೇರಿ ಪುಟ 2ಕ್ಕೆ



## ಐದಾರು ತಿಂಗಳಲ್ಲಿ 'ರಾಜಕೀಯ ಕ್ರಾಂತಿ'

**ಯಾರೂ ನಿರೀಕ್ಷೆ ಮಾಡದ ಬೆಳವಣಿಗೆ: ಎಚ್.ಡಿ.ಕುಮಾರಸ್ವಾಮಿ**

**ಬೆಂಗಳೂರು:** ರಾಜ್ಯ ರಾಜಕೀಯದಲ್ಲಿ ಇನ್ನು 5–6 ತಿಂಗಳಲ್ಲಿ ಯಾರೂ ನಿರೀಕ್ಷಿಸದ ರೀತಿ ಬೆಳವಣಿಗೆಗಳು ಆಗುವ ಸಾಧ್ಯತೆಯಿದೆ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ರಾಜಕೀಯ ಕ್ರಾಂತಿಯ ಬಾಂಬ್ ಸಿಡಿಸಿದರು.



ಜೆಡಿಎಸ್ ರಜತಮಹೋತ್ಸವದ ಅಂಗವಾಗಿ ಶನಿವಾರ ನಡೆದ ಸಮಾವೇಶದಲ್ಲಿ ಮಾತನಾಡಿದರು. ರಾಜ್ಯದ ಸಾಲ ಸದ್ಯ 7.5 ಲಕ್ಷ ರೂಪಾಯಿ ಇದೆ. ಇದರಲ್ಲಿ 5.5 ಲಕ್ಷ ಕೋಟಿ ಸಾಲ ಸಿದ್ದರಾಮಯ್ಯನವರೇ ಜನರ ಮೇಲೆ ಹೊರಿಸಿದ್ದಾರೆ. ರಾಜ್ಯದ ಜನರು ಈ ಸರ್ಕಾರವನ್ನ ಕಿತ್ತೊಗೆಯಬೇಕು ಎಂದು ಕಾಯಿತ್ತಿದ್ದಾರೆ. ಅಂತಹ ಸಂದರ್ಭ ಶೀಘ್ರ ಬರಲಿದೆ ಎಂದರು.

ಸಿದ್ದರಾಮಯ್ಯ ಅವರ ಗ್ಯಾರಂಟಿ ಜನರ ಜೀವನಕ್ಕೆ ಶಕ್ತಿ ತುಂಬುತ್ತಿಲ್ಲ. ಎಷ್ಟು ದಿನ 2 ಸಾವಿರ ಕೊಡೋಕೆ ಸಾಧ್ಯ? ಮತ್ತೊಂದೆಡೆ ಜನರ ಜೇಬಿಗೆ ಕೈಹಾಕಿ ದರೋಡೆ ಮಾಡ್ತಿದೆ ಸರ್ಕಾರ. ಎಣ್ಣೆ, ಸ್ಟಾಂಪ್ ಡ್ಯೂಟಿ ಸೇರಿ ಎಲ್ಲ ಕಡೆ ಹಣ ಲೂಟಿ ಮಾಡುತ್ತಿದ್ದಾರೆ. ಇದು ಯಾಕೆ ಜನರಿಗೆ ಅರ್ಥ ಆಗ್ತಿಲ್ಲ? ಇಂತಹ ಸರ್ಕಾರ ಬೇಕಾ ಅಂತ ಜನ ಯೋಚನೆ ಮಾಡಬೇಕು ಎಂದು ಪ್ರಶ್ನಿಸಿದರು.

2018ರ ಚುನಾವಣೆಯಲ್ಲಿ ಮೋದಿ ಅವರು ಒಂದೂವರೆ ಗಂಟೆ ಪುಟ 2ಕ್ಕೆ

## ಹೈಕಮಾಂಡ್ ಅಧಿಕಾರ ಹಂಚಿಕೆ ಗೊಂದಲ ಪರಿಹರಿಸಲಿ: ಬಾಲಕೃಷ್ಣ

**ಬೆಂಗಳೂರು:** ಅಧಿಕಾರ ಹಂಚಿಕೆ ಕುರಿತ ಗೊಂದಲವನ್ನು ಕಾಂಗ್ರೆಸ್ ಹೈಕಮಾಂಡ್ ಮಧ್ಯಪ್ರವೇಶ ಮಾಡಿ ಇತ್ಯರ್ಥ ಪಡಿಸಬೇಕು. ಇಲ್ಲದಿದ್ದರೆ ಪಕ್ಷದಲ್ಲಿ, ಕಾರ್ಯಕರ್ತರಲ್ಲಿ ಗೊಂದಲ ಉಂಟಾಗಲಿದೆ ಎಂದು ಶಾಸಕ ಮಾಗಡಿ ಬಾಲಕೃಷ್ಣ ಹೇಳಿದರು.



ಸುದ್ದಿಗಾರರ ಜೊತೆ ಶನಿವಾರ ಮಾತನಾಡಿದ ಅವರು ಶಾಸಕರು, ಕಾರ್ಯಕರ್ತರಿಗೆ ಸ್ಪಷ್ಟತೆ ಸಿಗಬೇಕು. ಶಾಸಕರು ದೆಹಲಿಗೆ ಗುಂಪು ಕಟ್ಟಿಕೊಂಡು ಹೋಗಿಲ್ಲ. ಕೇವಲ ಮೂರ್ನಾಲ್ಕು ಶಾಸಕರು ಹೋಗಿದ್ದಾರೆ. ಅವರವರ ಕೆಲಸಕ್ಕೆ ಹೋಗಿದ್ದಾರೆ. ಗುಂಪು ಕಟ್ಟಿಕೊಂಡು ಅಂದರೆ, 15 ಶಾಸಕರು ಇರಬೇಕು. ಶಾಸಕರೆಲ್ಲರೂ ಅವರ ಕೆಲಸಕ್ಕೆ ಹೋಗಿದ್ದಾರೆ. ಅಧಿಕಾರ ಹಂಚಿಕೆಯು ಶಾಸಕರ ನಂಬರ್ ಗೇಮ್ ಮೇಲೆ ನಿಂತಿಲ್ಲ. ಹೈಕಮಾಂಡ್ ತೀರ್ಮಾನದ ಮೇಲೆ ನಿಂತಿದೆ. ನಾನೂ ಕೂಡ ಮಲ್ಲಿಕಾರ್ಜುನ ಖರ್ಗೆಯವರನ್ನು ಭೇಟಿ ಮಾಡುತ್ತೇನೆ ಎಂದು ತಿಳಿಸಿದರು.

ಡಿಕೆ. ಶಿವಕುಮಾರ್ ಅವರು ಯಾರಿಗೂ ಬೆಂಬಲ ಕೊಡಿ ಎಂದು ಕೇಳಿಲ್ಲ. ಪುಟ 2ಕ್ಕೆ

## ನೂರು ವರ್ಷ ಬದುಕುವೆ: ಸಿಎಂ ಸಿದ್ದರಾಮಯ್ಯ

**ಮೈಸೂರು:** ನನಗೆ 78 ವರ್ಷ ತುಂಬಿ, 79ನೇ ವರ್ಷ ನಡೆಯುತ್ತಿದೆ. ನಾನಂತೂ ಕನಿಷ್ಠ ನೂರು ವರ್ಷ ಬದುಕುತ್ತೇನೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅಭಿಪ್ರಾಯಪಟ್ಟಿದ್ದಾರೆ.



ನಗರದಲ್ಲಿ ಮಾತನಾಡಿದ ಅವರು, ನನಗೆ ಈಗ 78 ವರ್ಷ 4 ತಿಂಗಳು ಆಗಿದೆ. ಗಾಂಧೀಜಿಗೆ ಒಬ್ಬರು ಪತ್ರ ಬರೆದು, 100 ವರ್ಷ ಬದುಕಿ ಅಂತ ಹೇಳಿದ್ದರು. ಆಗ ನಾನು 125 ವರ್ಷ ಬದುಕಬೇಕು ಅಂತಿದ್ದೇನೆ ಅಂತ ಗಾಂಧಿ ಉತ್ತರ ಕೊಟ್ಟಿದ್ದರು ಎಂದು ಸ್ಮರಿಸಿದ ಅವರು, ನಾನೂ ಕೂಡ 100 ವರ್ಷ ಬದುಕುತ್ತೇನೆ ಎಂದು ನಗುತ್ತಾ ಸಿದ್ದರಾಮಯ್ಯ ಹೇಳಿದರು.

ಜನರ ಆಶೀರ್ವಾದ ಇದ್ದಾಗಲಷ್ಟೇ ನಾವು ಅಧಿಕಾರದಲ್ಲಿರಲು ಸಾಧ್ಯ. ಒಟ್ಟು 16 ಚುನಾವಣೆ ಎದುರಿಸಿದ್ದು, ನಾಲ್ಕು ಬಾರಿ ಸೋತಿದ್ದೇನೆ. ಹಿಂದೆ ನನ್ನ ಕಾರಿನ ಮೇಲೆ ಕಾಗೆ ಕುಳಿತಿದ್ದಕ್ಕೆ, ಕೆಲ ಜ್ಯೋತಿಷಿಗಳು ಸಿ.ಎಂ ಸ್ಥಾನವೇ ಹೋಗುತ್ತದೆ ಎಂದಿದ್ದರು. ಆಗ ಐದು ವರ್ಷ ಅಧಿಕಾರ ಪೂರೈಸಿದೆ. ನಮ್ಮಲ್ಲಿನ ಮೂಢನಂಬಿಕೆಗಳನ್ನು ಬಿಡಬೇಕು ಎಂದರು. ನೀವೇ ಐದು ವರ್ಷ ಸಿ.ಎಂ ಆಗಿರಬೇಕು ಎಂದು ಅಭಿಮಾನಿಗಳು ಕೂಗಿದರು. ಇದಕ್ಕೆ ಪ್ರತಿಕ್ರಿಯಿಸಿ, ಅದನ್ನು ಹೈಕಮಾಂಡ್ ತೀರ್ಮಾನಿಸುತ್ತದೆ ಎಂದು ಸಿದ್ದರಾಮಯ್ಯ ಹೇಳಿದರು.

# 5 ರಾಜ್ಯಗಳಲ್ಲಿ 11 ತಂಡದಿಂದ ಶೋಧ

**ಎಟಿಎಂ ವಾಹನ ದರೋಡೆ ಪ್ರಕರಣ: 8 ಮಂದಿ ದರೋಡೆಕೋರರು ಭಾಗಿ**

**ಬೆಂಗಳೂರು:** ಬೆಂಗಳೂರಿನಲ್ಲಿ ನಡೆದ ಎಟಿಎಂ ವಾಹನ ದರೋಡೆ ಪ್ರಕರಣಕ್ಕೆ ಸಂಬಂಧಿಸಿದಂತೆ ತನಿಖೆಗೆ ಒಟ್ಟು 11 ತಂಡಗಳನ್ನು ರಚನೆ ಮಾಡಲಾಗಿದೆ. 5 ರಾಜ್ಯಗಳಲ್ಲಿ ಶೋಧ ನಡೆಸಲಾಗಿದ್ದು, ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸ್ ಕಾನ್‌ಸ್ಟೆಬಲ್ ಸೇರಿದಂತೆ ನಾಲ್ವರನ್ನು ಬಂಧಿಸಲಾಗಿದೆ. ಅವರಿಂದ ಸುಮಾರು 5.76 ಕೋಟಿ ಹಣ ಸೀಜ್ ಮಾಡಲಾಗಿದೆ ಎಂದು ನಗರ ಪೊಲೀಸ್ ಆಯುಕ್ತ ಸೀಮಂತ್ ಕುಮಾರ್ ಸಿಂಗ್ ತಿಳಿಸಿದರು.

ನಗರದಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಒಟ್ಟು 8 ಜನರ ಗುಂಪಿನಿಂದ ದರೋಡೆ ನಡೆದಿದೆ. 5.76 ಕೋಟಿ ಹಣ ಸೀಜ್ ಮಾಡಲಾಗಿದೆ. ಘಟನೆ ನಡೆದ ಒಂದೂವರೆ ಗಂಟೆ ಬಳಿಕ ಪೊಲೀಸರಿಗೆ ಮಾಹಿತಿ ನೀಡಲಾಗಿದೆ. ಆದರೂ ತಕ್ಷಣವೇ ಎಲ್ಲಾ ಭಾಗಗಳಲ್ಲಿ ನಾಕಾಬಂಧಿ ಹಾಕಲಾಗಿತ್ತು. ದರೋಡೆಕೋರರು ಮೊಬೈಲ್ ಬಳಸುತ್ತಿರಲಿಲ್ಲ. ಸಿಸಿಟಿವಿ ಕಾಣದ ಸ್ಥಳಗಳಲ್ಲಿ ವಾಹನ ನಿಲುಗಡೆ ಮಾಡಿದ್ದರು. ತನಿಖೆಯ ದಾರಿ ತಪ್ಪಿಸಲು ಬೇರೆ ಬೇರೆ ಭಾಷೆಗಳಲ್ಲಿ ಮಾತನಾಡಿದ್ದಾರೆ. ಘಟನೆ ನಡೆದ ದಿನ ಹಣ ಪುಟ 2ಕ್ಕೆ



### ದರೋಡೆಗೆ 3 ತಿಂಗಳಿಂದ ಸಂಚು

ಎಟಿಎಂ ವಾಹನ ದರೋಡೆಗೆ ಆರೋಪಿಗಳು 3 ತಿಂಗಳಿಂದ ಸಂಚು ಮಾಡಿದ್ದಾರೆ. 15 ದಿನದಿಂದ ರೇಖಿ ಮಾಡಿದ್ದರು. ಸಿಸಿಟಿವಿ ಇಲ್ಲದೇ ಇರೋ ಜಾಗವನ್ನು ನೋಡಿಕೊಂಡು ದಾಳಿ ಮಾಡಿದರು. ಇದರಲ್ಲಿ ಸಿಎಂಎಸ್ ಕಂಪನಿಯ ಲೋಪ ಕೂಡ ಇದೆ. ಸಿಎಂಎಸ್ ಕಂಪನಿಯು ರೂಲ್ಸ್ ವೈಲೇಷನ್ ಮಾಡಿದೆ. ವೆಹಿಕಲ್ ಇನ್‌ಚಾರ್ಜ್ ಶಾಮೀಲಾಗಿ ಕೃತ್ಯ ಎಸಗಿದ್ದಾರೆ. ವಾಹನದ ಪುಟ 2ಕ್ಕೆ

# ಬಂಡೀಪುರ ಅರಣ್ಯದಲ್ಲಿ ಅಡ್ಡಗಟ್ಟಿ ಕೇರಳ ಚಿನ್ನದ ವ್ಯಾಪಾರಿ ದರೋಡೆ

**ಮೂರು ಕಾರಿನಲ್ಲಿ ಬಂದು 1.2 ಕೆ.ಜಿ ಚಿನ್ನ ಕಿತ್ತುಕೊಂಡು ಪರಾರಿ**

**ಚಾಮರಾಜನಗರ:** ಬಂಡೀಪುರ ಅರಣ್ಯ ಪ್ರದೇಶದಲ್ಲಿ ದರೋಡೆಕೋರರು ಕೇರಳ ಮೂಲದ ಚಿನ್ನದ ವ್ಯಾಪಾರಿಯನ್ನು ಸಿನಿಮಾ ಸ್ಟೈಲ್‌ನಲ್ಲಿ ಅಡ್ಡಗಟ್ಟಿ ಕೋಟ್ಯಂತರ ರೂಪಾಯಿ ಬೆಲೆಯ ಚಿನ್ನ ದರೋಡೆ ಮಾಡಿದ್ದಾರೆ.

ರಾಜ್ಯದಿಂದ ಕೇರಳಕ್ಕೆ ಹೋಗುತ್ತಿದ್ದ ಸಂದರ್ಭದಲ್ಲಿ ಚಿನ್ನದ ವ್ಯಾಪಾರಿ ಕಾರಿಗೆ ಡಿಕ್ಕಿ ಹೊಡೆದು ಕಾರು ನಿಲ್ಲಿಸಿ ಹಲ್ಲೆ ಮಾಡಿದ್ದಾರೆ. ಕಾರಿನಲ್ಲಿದ್ದ 1.2 ಕೆಜಿ ತೂಕದ ಚಿನ್ನವನ್ನು ದರೋಡೆ ಮಾಡಿ ಪರಾರಿಯಾಗಿದ್ದಾರೆ. ಕಾರಿನ ನಂಬರ್ ಬೋರ್ಡ್ ಬಿದ್ದು ಹೋಗಿದೆ. ಮುಂಭಾಗ ಸ್ವಲ್ಪ ಭಾಗ ಜಖಂ ಆಗಿದೆ. ಪುಟ 2ಕ್ಕೆ





### 5 ತಂಡ ರಚನೆ: ಎಸ್ಪಿ

ಗುಂಡ್ಲುಪೇಟೆ: ಕೇರಳ ಮೂಲದ ವಿನು ಎಂಬವರಿಂದ ದೂರು ದಾಖಲಾಗಿದೆ. ಕಡಕೊಳದಿಂದ ಚಿನ್ನ ತೆಗೆದುಕೊಂಡು ಕೇರಳ ಕಡೆಗೆ ಹೋಗುತ್ತಿ ದ್ದರು. ಈ ವೇಳೆ ಮೂರು ಕಾರಿನಲ್ಲಿ ಬಂದವರು ದರೋಡೆ ಮಾಡಿದ್ದಾರೆ ಎಂದು ಎಸ್ಪಿ ಕವಿತಾ ಮಾತ ನಾಡಿ ತಿಳಿಸಿದರು. ಹಿಂದೆಯೂ ಕೂಡ ಗುಂಡ್ಲು ಪೇಟೆ ಭಾಗದಲ್ಲಿ ದರೋಡೆ ನಡೆದಿತ್ತು. ಅದೇ ಗ್ಯಾಂಗ್ ಈ ದರೋಡೆ ಮಾಡಿದೆಯೇ ಅನ್ನುವ ಪುಟ 2ಕ್ಕೆ

ಮೊದಲ ಪುಟದಿಂದ

### 5 ತಂಡ ರಚನೆ: ಎಸ್ಪಿ

ಬಗ್ಗೆ ಅನುಮಾನ ಇದೆ. ದರೋಡೆಕೋರರ ಪತ್ತೆಗೆ 5 ತಂಡಗಳ ರಚನೆ ಮಾಡಲಾಗಿದೆ. ಎಲ್ಲ ಕಡೆಯೂ ಸಿಸಿಟಿವಿ ಪರಿಶೀಲನೆ ನಡೆಸಲಾಗಿದೆ ಎಂದು ತಿಳಿಸಿದರು.

### ಚಿನ್ನದ ವ್ಯಾಪಾರಿ ದರೋಡೆ

ವಿನು, ಸಮೀರ್ ಚಿನ್ನ ಕಳೆದುಕೊಂಡ ವ್ಯಾಪಾರಿಗಳು. ಇವರು ಬ್ರಿಜಾ ಕಾರಿನಲ್ಲಿ ಚಿನ್ನ ತೆಗೆದುಕೊಂಡು ಹೋಗುತ್ತಿದ್ದರು. ಈ ವೇಳೆ ಮೂರು ಕಾರಿನಲ್ಲಿ ಬಂದ ದರೋಡೆಕೋರರು, ರಸ್ತೆಯಲ್ಲಿ ಹೋಗುತ್ತಿದ್ದ ವ್ಯಾಪಾರಿಗಳ ಕಾರಿಗೆ ಡಿಕ್ಕಿ ಹೊಡೆದಿದ್ದಾರೆ. ಕಾರಿನ ಹಿಂಭಾಗ, ಮುಂಭಾಗಕ್ಕೆ ಡಿಕ್ಕಿ ಹೊಡೆದು ಕಾರು ನಿಲ್ಲಿಸುವಂತೆ ಮಾಡಿದ್ದಾರೆ. ಕಾರಿನಿಂದ ಕೆಳಗಿಳಿದು ಬಂದು ಕಾರಿನಲ್ಲಿದ್ದ ಇಬ್ಬರಿಗೂ ಹಲ್ಲೆ ನಡೆಸಿ ಚಿನ್ನ ದರೋಡೆ ಮಾಡಿದ್ದಾರೆ. ಬಂಡೀಪುರದ ಮೂಲಕ ಹಾದು ಕೇರಳಕ್ಕೆ ಚಿನ್ನದ ವ್ಯಾಪಾರಿಗಳು ಹೊರಟಿದ್ದರು. ಕಾರಿನ ಹ್ಯಾಂಡ್ ಬ್ರೇಕ್ ಸ್ಥಳದ ಬಳಿ 1.2 ಕೆಜಿ ಚಿನ್ನವಿಟ್ಟಿದ್ದರು. ಗುರುವಾರ ರಾತ್ರಿ ದರೋಡೆ ನಡೆದಿದೆ. ಶನಿವಾರ ಗುಂಡ್ಲುಪೇಟೆ ಠಾಣೆಗೆ ಬಂದು ವ್ಯಾಪಾರಿಗಳು ದೂರು ಕೊಟ್ಟಿದ್ದಾರೆ. ಪ್ರಕರಣದ ತನಿಖೆ ನಡೆಸುತ್ತಿರುವ ಗುಂಡ್ಲುಪೇಟೆ ಪೊಲೀಸರು, ಸದ್ಯ ದರೋಡೆಗೆ ಒಳಗಾಗಿದ್ದ ಕಾರನ್ನು ವಶಕ್ಕೆ ಪಡೆದಿದ್ದಾರೆ. ಸ್ಥಳಕ್ಕೆ ಎಸ್ಪಿ ಕವಿತಾ, ಎಎಸ್ಪಿ ಶಶಿಧರ್ ಭೇಟಿ ನೀಡಿ ಪರಿಶೀಲನೆ ನಡೆಸಿದರು.

### 11 ತಂಡದಿಂದ ಶೋಧ

ತೆಗೆದುಕೊಂಡು ಹೋದ ವಾಹನ ಹಿಡಿಯಲಿಕ್ಕೆ ಆಗಿರಲಿಲ್ಲ. ಅನೇಕ ವಾಹನ ಬಳಸಿದ್ದಾರೆ. ವಾಹನಗಳ ನಂಬರ್ ಪದೇ ಪದೇ ಬದಲಿಸಿದ್ದಾರೆ ಎಂದು ಸೀಮಂತ್ ಕುಮಾರ್ ಮಾಹಿತಿ ನೀಡಿದರು. ಆರ್‌ಬಿಐ ಅಧಿಕಾರಿಗಳಂತೆ ನಟಿಸಿದ ಗ್ಯಾಂಗ್ ಹಣದೊಂದಿಗೆ ಪರಾರಿಯಾಗಿದ್ದ ಸಂವೇದನಾಶೀಲ ದರೋಡೆಯ ಕುರಿತು ವರದಿಗಾರರಿಗೆ ವಿವರಿಸಿದ ಸಿಂಗ್, ಇಲ್ಲಿಯವರೆಗೆ 5.76 ಕೋಟಿ ರೂ. ವಶಪಡಿಸಿಕೊಳ್ಳಲಾಗಿದೆ ಮತ್ತು ಉಳಿದ ಮೊತ್ತವನ್ನು ಪತ್ತೆಹಚ್ಚಲು ಪ್ರಯತ್ನಗಳು ನಡೆಯುತ್ತಿವೆ ಎಂದು ಹೇಳಿದರು. ಕೇರಳ, ತಮಿಳುನಾಡು, ಆಂಧ್ರ, ತೆಲಂಗಾಣ, ಗೋವಾದಲ್ಲಿ ಆರೋಪಿಗಳನ್ನು ಹುಡುಕಾಟ ನಡೆಸಿದ್ದಾರೆ. ಇನ್ನೂ ಹಣ ರಿಕವರಿ ಆಗಬೇಕು. 200 ಸ್ವಾಪ್ ಬಳಕೆ ಮಾಡಲಾಗಿದೆ. 30ಕ್ಕೂ ಹೆಚ್ಚು ಮಂದಿಯನ್ನ ವಿಚಾರಣೆ ಮಾಡಲಾಗಿದೆ ಎಂದು ಹೇಳಿದರು.

### ಶಾಸಕರ 'ಕುದುರೆ ವ್ಯಾಪಾರ'

ಈ ಸರ್ಕಾರ ನಡೆಯಲಿ ಎಂಬುದು ನಮ್ಮ ಆಶಯ. ಭ್ರಷ್ಟಾಚಾರದಲ್ಲಿ ತೊಡಗಿರುವ ಕಾಂಗ್ರೆಸ್ಸಿಗರ ಜೊತೆಗೆ ಸರ್ಕಾರ ರಚಿಸುವ ಇಂಗಿತ ನಮ್ಮ ಪಕ್ಷಕ್ಕೆ ಇಲ್ಲ. ಕಾಂಗ್ರೆಸ್ ನಿಂದ ಹೊರಬರುವವರ ಜೊತೆ ಬಿಜೆಪಿ ಸರ್ಕಾರ ರಚಿಸುತ್ತದೆ ಎಂಬುದು ದೂರದ ಮಾತು ಎಂದು ಸ್ಪಷ್ಟಪಡಿಸಿದರು.

### ಶಾಸಕರ ಬೆಂಬಲಿಗರ ಹೈಡ್ರಾಮ

ಕಾಲಕಾಲೇಶ್ವರ ವೃತ್ತದ ಮೇಲೆ ಹತ್ತಿ ಮೈಮೇಲೆ ಡೀಸೆಲ್ ಸುರಿದು ಕೊಂಡರು. ತಕ್ಷಣ ಪೊಲೀಸರು ಆತನನ್ನು ತಡೆದರು. ಆತ್ಮಹತ್ಯೆಗೆ ಯತ್ನಿಸಿದ ಸಂಗಪ್ಪ ಹಾಗೂ ರವಿ, ನಮ್ಮ ನಾಯಕರಾದ ಜಿ.ಎಸ್.ಪಾಟೀಲರಿಗೆ ಪದೇ ಪದೇ ಅನ್ಯಾಯವಾಗುತ್ತಿದೆ. ಈ ಬಾರಿ ಸಚಿವ ಸ್ಥಾನ ನೀಡದಿದ್ದರೆ ಅವರಿಗಾಗಿ ಪ್ರಾಣ ನೀಡಲು ಸಿದ್ಧರಿದ್ದೇವೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

### ದರೋಡೆಗೆ 3 ತಿಂಗಳಿಂದ ಸಂಚು

ಚಾಲಕ ಹೊರಗುತ್ತಿಗೆ ಡ್ರೈವರ್ ಆಗಿದ್ದ ಎಂದು ಸೀಮಂತ್ ಕುಮಾರ್ ಸಿಂಗ್ ತಿಳಿಸಿದ್ದಾರೆ.ಗೋವಿಂದಪುರ ಠಾಣೆ ಪೊಲೀಸ್ ಕಾನ್‌ಸ್ಟೇಬಲ್ ಬಂಧನ ಮಾಡಲಾಗಿದೆ. ಗೋಪಿ, ಕ್ಸೇವಿಯರ್, ಅಣ್ಣಪ್ಪನಾಯ್ಕ ಇತರ ಬಂಧಿತ ಆರೋಪಿಗಳಾಗಿದ್ದಾರೆ. ಕ್ಲೂ ಇಲ್ಲದೆ ಆರೋಪಿಗಳು ಕೆಲಸ ಮಾಡಿದ್ದಾರೆ. ತಾಂತ್ರಿಕ ಮಾಹಿತಿ ಹಾಗೂ ಸ್ಥಳೀಯರಿಂದ ಮಾಹಿತಿ ಪಡೆದು ಬಂಧನ ಮಾಡಲಾಗಿದೆ ಎಂದರು.

### 'ರಾಜಕೀಯ ಕ್ರಾಂತಿ'

ನನ್ನೊಂದಿಗೆ ಮಾತನಾಡಿದ್ದರು. ನೀನೇ ಸಿಎಂ ಆಗು ಅಂತ ಹೇಳಿದ್ದರು. ನಿತೀಶ್ ಕುಮಾರ್ ತರಹ ನಾನು ಆವತ್ತು ತೀರ್ಮಾನ ಮಾಡಿದ್ದಿದ್ದರೇ, ಅವರ ಅರ್ಧದಷ್ಟು ಸಿಎಂ ಆಗುತ್ತಿದ್ದೆ ಎಂದರು.

### ವೇದಿಕೆಯಲ್ಲಿ ಸಿಎಂ–ಡಿಸಿಎಂ

ಅಲ್ಲಿಯವರೆಗೆ ಸಂಪುಟ ಪುನಾರಚನೆಗೆ ಅವಕಾಶ ಸಿಗುವುದಿಲ್ಲ. ಹಾಗಾಗಿ, ಸಮಾಧಾನದಿಂದ ಇರುವಂತೆ ಡಿಕೆ ಸಹೋದರರಿಗೆ ಮಲ್ಲಿಕಾರ್ಜುನ ಖರ್ಗೆ ಅವರು ಸೂಚಿಸಿದ್ದಾರೆ ಎನ್ನಲಾಗಿದೆ. ಕುರ್ಚಿ ಕದನದ ನಡುವೆಯೇ ಸಿಎಂ–ಡಿಸಿಎಂ ಒಟ್ಟಿಗೆ ಕಾಣಿಸಿಕೊಂಡಿರುವುದು ಅಚ್ಚರಿ ಮೂಡಿಸಿದೆ.

### ರಾಜ್ಯಾಧ್ಯಕ್ಷ ಸ್ಥಾನ ಉಳಿವಿಗೆ ಕಸರತ್ತು

ತೀರ್ಮಾನ ಮಾಡಿದೆ. ಈ ಎಲ್ಲ ಬೆಳವಣಿಗೆಗಳ ನಡುವೆಯೇ ಎರಡು ದಿನಗಳ ಹಿಂದೆ ದೆಹಲಿಗೆ ತೆರಳಿದ್ದ ಬಿ.ವೈ.ವಿಜಯೇಂದ್ರ, ಅಲ್ಲಿಯೇ ಮೊಕ್ಕಾಂ ಮಾಡಿ ವರಿಷ್ಠ ನಾಯಕರನ್ನು ಭೇಟಿ ಮಾಡಿ ರಾಜ್ಯಾಧ್ಯಕ್ಷರಾಗಿ ತನ್ನನ್ನೇ ಮುಂದುವರಿಸುವಂತೆ ಮನವಿ ಮಾಡುತ್ತಿದ್ದಾರೆ.

ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ, ಗೃಹ ಸಚಿವ ಅಮಿತ್ ಶಾ ಅವರನ್ನೂ ವಿಜಯೇಂದ್ರ ಭೇಟಿ ಮಾಡಿ ಚರ್ಚಿಸಲಿದ್ದಾರೆ.

### ಹೈಕಮಾಂಡ್ ಅಧಿಕಾರ ಹಂಚಿಕೆ ಗೊಂದಲ ಪರಿಹರಿಸಲಿ: ಬಾಲಕೃಷ್ಣ

ಶಾಸಕರ ಬೆಂಬಲ ಕೋರುವ ಕೆಲಸ ನಡೆದಿಲ್ಲ. ಕೆಲವರು ವೈಯಕ್ತಿಕ ಹೇಳಿಕೆ ಕೊಡುತ್ತಿರಬಹುದು. ಅದಕ್ಕೂ ಇದಕ್ಕೂ ಸಂಬಂಧ ಇಲ್ಲ. ಡಿ.ಕೆ.ಶಿವಕುಮಾರ್ ಅವರಿಗೆ ಮುಖ್ಯಮಂತ್ರಿ ಆಗಲು ಅವರದ್ದೇ ಆದ ಶಕ್ತಿ ಇದೆ ಎಂದೂ ಮಾಗಡಿ ಬಾಲಕೃಷ್ಣ ಹೇಳಿದರು.

ವರ್ತಮಾನ
ಜಾಹಿರಾತಿಗೆ ಉತ್ತಮ ಮಾಧ್ಯಮ

# ಚನ್ನಯ್ಯ ಬ್ಲಾಕ್‌ನಿಂದ ವೋಟ್ ಚೋರಿ ವಿರುದ್ಧ ಸಹಿ ಸಂಗ್ರಹ




ಮೈಸೂರು: ನರಸಿಂಹರಾಜ ವಿಧಾನಸಭಾ ಕ್ಷೇತ್ರದ ಸಾಹುಕಾರ್ ಚನ್ನಯ್ಯ ಬ್ಲಾಕ್‌ನಲ್ಲಿ ಕಾಂಗ್ರೆಸ್ ಪಕ್ಷದಿಂದ ಬ್ಲಾಕ್ ಅಧ್ಯಕ್ಷ ಜಿ.ಎನ್.ಮಂಜುನಾಥ್ ನೇತೃತ್ವದಲ್ಲಿ ವೋಟ್ ಚೋರಿ ವಿರುದ್ಧ ಸಹಿ ಸಂಗ್ರಹ ಅಭಿಯಾನ ನಡೆಯಿತು.

ಶಾಸಕ ತನ್ವೀರ್ ಸೇಠ್ ಅವರು ಸಹಿ ಮಾಡುವ ಮೂಲಕ ಅಭಿಯಾನಕ್ಕೆ ಚಾಲನೆ ನೀಡಿದರು. ಬಳಿಕ ಅವರು ಮಾತನಾಡಿ, ದೇಶಾದ್ಯಂತ ಲೋಕಸಭೆ ಮತ್ತು ಇತ್ತೀಚೆಗೆ ನಡೆದ ವಿಧಾನಸಭಾ ಚುನಾವಣೆಗಳಲ್ಲಿ ಬಿಜೆಪಿ ವೋಟ್ ಚೋರಿ ಮೂಲಕ ಅಧಿಕಾರಕ್ಕೆ ಬಂದಿದ್ದು, ಚುನಾವಣಾ ಆಯೋಗ ಇದಕ್ಕೆ ಬೆಂಬಲ ನೀಡಿದೆ ಎಂದು ಆರೋಪಿಸಿದರು. ಈಗಾಗಲೇ ನಮ್ಮ ಪಕ್ಷದ ವರಿಷ್ಠ ನಾಯಕರಾದ ರಾಹುಲ್ ಗಾಂಧಿ ಅವರು, ದೇಶದಲ್ಲಿ ವೋಟ್ ಚೋರಿ ನಡೆದಿರುವುದು ಮತ್ತು ಇದನ್ನು ತಡೆಗಟ್ಟಲು ಚುನಾವಣಾ ಆಯೋಗದ ವೈಫಲ್ಯವನ್ನು ಪ್ರಾತ್ಯಕ್ಷಿಕೆ ಮೂಲಕ ದೇಶದ ಕೊಟ್ಯಾಂತರ ಮತದಾರರ ಗಮನಸೆಳೆದಿದ್ದಾರೆ. ರಾಹುಲ್ ಗಾಂಧಿ ಮತ್ತು ಕಾಂಗ್ರೆಸ್ ಪಕ್ಷವು ನಿರಂತರವಾಗಿ ಇದರ ವಿರುದ್ಧ ಹೋರಾಟ ಮಾಡುತ್ತಿದೆ.

ಚುನಾವಣಾ ಆಯೋಗವು ತನ್ನ ವಿಶ್ವಾಸಾರ್ಹತೆಯನ್ನು ಕಳೆದುಕೊಳ್ಳುತ್ತಿದೆ. ಬಿಹಾರ ವಿಧಾನ ಸಭಾ ಚುನಾವಣೆಯಲ್ಲಿ ಮತದಾನಕ್ಕೆ ಕೆಲವೇ ದಿನಗಳ ಮೊದಲು ಕೋಟ್ಯಾಂತರ ಮಹಿಳೆ ಯರ ಖಾತೆಗೆ ತಲಾ 10 ಸಾವಿರ ರೂ. ಹಾಕುವ ಮೂಲಕ ಮತದಾನಕ್ಕೆ ಆಮಿಷ ಒಡ್ಡಲಾಗಿದೆ. ಇದೂ ಕೂಡ ಮತಗಳ್ಳತನಕ್ಕೆ ಸಮನಾದ ಕೃತ್ಯ ಇದನ್ನು ತಪ್ಪಿಸಿ ಪ್ರಾಮಾಣಿಕ ವಾಗಿ ಚುನಾವಣೆ ನಡೆಸಲು ನಮ್ಮ ಪಕ್ಷ ಮತಗಳ್ಳತನದ ವಿರುದ್ಧ ಸಹಿ ಸಂಗ್ರಹ ಅಭಿಯಾನ ಕೈಗೊಂಡಿದೆ. ಎನ್‌ಆರ್ ಕ್ಷೇತ್ರದಲ್ಲಿ ಸುಮಾರು 80 ಸಾವಿರಕ್ಕೂ ಅಧಿಕ ಸಹಿಗಳನ್ನು ಸಂಗ್ರಹಿಸಿ ಕೆಪಿಸಿಸಿ ಕಚೇರಿಗೆ ಕಳಿಸಲಾಗಿದೆ. ಕರ್ನಾಟಕ, ಬಿಹಾರ ಮಾತ್ರವಲ್ಲದೇ, ದೇಶದ ಹಲವು ರಾಜ್ಯಗಳಲ್ಲಿ ಮತಗಳ್ಳತನ ನಡೆದಿದ್ದು, ಅದರ ವಿರುದ್ಧ ಜನಜಾಗೃತಿ ಮಾಡುವ ಉದ್ದೇಶದೊಂದಿಗೆ ರಾಜ್ಯದಲ್ಲಿ ಈವರೆಗೆ 1 ಕೋಟಿ 12 ಲಕ್ಷ ಜನರಿಂದ ಕಾಂಗ್ರೆಸ್ ಪಕ್ಷದಿಂದ ಸಹಿ ಸಂಗ್ರಹ ಮಾಡಿದ್ದೇವೆ. ಮತಗಳ್ಳತನದ ಬಗ್ಗೆ 'ನಾವು ಚುನಾವಣಾ ಆಯೋಗದಿಂದ ಪೂರಕ ದಾಖಲೆಗಳನ್ನು ಕೋರುತ್ತಿದ್ದೇವೆ, ಆದರೆ ಅವರು ನಮಗೆ ಅವುಗಳನ್ನು ಒದಗಿಸುತ್ತಿಲ್ಲ ಎಂದು ದೂರಿದರು.

ಈ ಸಂದರ್ಭದಲ್ಲಿ ಎಐಸಿಸಿ ಕಾರ್ಯದರ್ಶಿ ಸಂದೀಪ್, ಮಾಜಿ ಸಚಿವರಾದ ಕೋಟೆ ಶಿವಣ್ಣ, ನಗರ ಕಾಂಗ್ರೆಸ್ ಅಧ್ಯಕ್ಷರಾದ ಆರ್.ಮೂರ್ತಿ, ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷರಾದ ಅಯ್ಯೂಬ್ ಖಾನ್, ಕಾಂಗ್ರೆಸ್ ಪಕ್ಷದ ಹಿರಿಯ ಮುಖಂಡರಾದ ರಘುರಾಜೇ ಅರಸ್, ಶ್ರೀಧರ್‌ಮೂರ್ತಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಜಿ.ಎನ್.ಮಂಜುನಾಥ್, ಮುಖಂಡರಾದ ಶೌಕತ್ ಪಾಷ, ರಮೇಶ್, ಮೋಹನ್, ಅಬ್ರಾರ್ ಮೊಹಮ್ಮದ್ ಇತರರು ಇದ್ದರು.

# ಆರ್‌ಟಿಐ ಕಾಯಿದೆಯಿಂದ ತನಿಖಾ ಪತ್ರಿಕೋದ್ಯಮಕ್ಕೆ ಮರುಜೀವ ಸಾಧ್ಯ

## ರಾಜ್ಯ ಮಾಹಿತಿ ಆಯುಕ್ತ ರುದ್ರಣ್ಣ ಹರ್ತಿಕೋಟೆ ಕಿವಿಮಾತು



ಮೈಸೂರು: ಮಾಹಿತಿ ಹಕ್ಕು ಕಾಯ್ದೆಯನ್ನು ಸದುಪಯೋಗಪಡಿಸಿಕೊಂಡು ಉತ್ತಮ ಪತ್ರಕರ್ತರಾಗಲು, ಮೂಲೆ ಸೇರಿರುವ ತನಿಖಾ ಮತ್ತು ಅಭಿವೃದ್ಧಿ ಪತ್ರಿಕೋದ್ಯಮಕ್ಕೆ ಮರುಜೀವ ನೀಡಬೇಕು ಎಂದು ರಾಜ್ಯ ಮಾಹಿತಿ ಆಯುಕ್ತ ರುದ್ರಣ್ಣ ಹರ್ತಿಕೋಟೆ ಕಿವಿ ಮಾತು ಹೇಳಿದರು.

ನಗರದ ಜಿಲ್ಲಾ ಪತ್ರಕರ್ತರ ಭವನದಲ್ಲಿ ಶನಿವಾರ ಆಯೋಜಿಸಿದ್ದ ಮಾಹಿತಿ ಆಯುಕ್ತರು, ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರು ಮತ್ತು ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಿಗೆ ಅಭಿನಂದನಾ ಸಮಾರಂಭದಲ್ಲಿ ಮಾತನಾಡಿದರು. ನಾವು ಈಗ ಊಹಾ ಪತ್ರಿಕೋದ್ಯಮದಿಂದ ಹೊರಬಂದು, ನೈಜ ಪತ್ರಿಕೋದ್ಯಮದತ್ತ ಮುಖ ಮಾಡಬೇಕು. ಇತ್ತೀಚಿನ ದಿನಗಳಲ್ಲಿ ತನಿಖಾ ಪತ್ರಿಕೋದ್ಯಮ ಮತ್ತು ಅಭಿವೃದ್ಧಿ ಪತ್ರಿಕೋದ್ಯಮ ಮೂಲೆ ಸೇರಿದೆ. ಮಾಹಿತಿ ಹಕ್ಕು ಎಂಬ ಪ್ರಬಲ ಕಾಯ್ದೆ ಜಾರಿಗೊಳ್ಳಲು ಕೂಡ ಅನೇಕ ಹೋರಾಟ ನಡೆದಿದೆ. ಇಂತಹ ಕಾಯ್ದೆಯನ್ನು ಪತ್ರಕರ್ತರು ಬಳಸಿಕೊಳ್ಳಬೇಕು ಮತ್ತು ಅರ್ಜಿ ಸಲ್ಲಿಸುವಾಗ ಎಚ್ಚರಿಕೆಯಿಂದ ಇರಬೇಕು. ನಾನು ಆಯುಕ್ತನಾದ ಮೇಲೆ ಸುಮಾರು 5 ಸಾವಿರ ಪ್ರಕರಣಗಳನ್ನು ಇತ್ಯರ್ಥಪಡಿಸಿದ್ದೇನೆ. ಈ ಪೈಕಿ ಕಾರ್ಯನಿರತ ಪತ್ರಕರ್ತರು ಅರ್ಜಿ ಹಾಕಿರುವುದು ಕಡಿಮೆ. ಪತ್ರಕರ್ತರ ಹೆಸರಿನಲ್ಲಿ ಯಾರು ಯಾರೋ ಅರ್ಜಿ ಸಲ್ಲಿಸುತ್ತಾರೆ. ಆದರೆ ನೈಜ ಪತ್ರಕರ್ತರು ಅರ್ಜಿ ಸಲ್ಲಿಸುವಾಗ ದಿಕ್ಕು ತಪ್ಪಿಸುವುದುಂಟು. ಆ ಬಗ್ಗೆ ಎಚ್ಚರಿಕೆಯಿಂದ ಇರಬೇಕು ಎಂದರು.

ಕೇಂದ್ರದಲ್ಲಿ ಮನಮೋಹನ ಸಿಂಗ್ ಸರ್ಕಾರ ಮಾಹಿತಿ ಹಕ್ಕು ಕಾಯ್ದೆ ಜಾರಿಗೊಳಿಸಿದ ಕೂಡಲೇ ಆ ಕಾಯ್ದೆಯನ್ನು ಮೊದಲು ಅಳವಡಿಸಿಕೊಂಡಿದ್ದು ಕರ್ನಾಟಕ. ನಾವು ಮೊದಲು ಅರ್ಜಿಗಳ ವಿಲೇವಾರಿಗೆ ಕ್ರಮ ಕೈಗೊಳ್ಳುತ್ತಿದ್ದೇವೆ. ಸರ್ಕಾರದಿಂದ ಅನುದಾನ ಪಡೆಯುತ್ತಿರುವ ಯಾವುದೇ ಸಂಸ್ಥೆಯೂ ಕೂಡ ಮಾಹಿತಿ ಹಕ್ಕು ಕಾಯ್ದೆ ವ್ಯಾಪ್ತಿಗೆ ಬರುತ್ತದೆ ಎಂದು ಹೈ ಕೋರ್ಟ್ ಆದೇಶಿಸಿದೆ. ಮಾಹಿತಿ ಹಕ್ಕು ಕಾಯ್ದೆ ಕುರಿತು ಮಾತ್ರವಲ್ಲದೆ, ಈ ಸಂಬಂಧ ಜಾರಿಯಾದ ನ್ಯಾಯಾಲಯದ ಆದೇಶವನ್ನು ಪತ್ರಕರ್ತರು ಓದಿಕೊಳ್ಳಬೇಕು. ಇದರಲ್ಲಿ ಅಧ್ಯಯನ ಬಹಳ ಮುಖ್ಯ ಎಂದು ಹೇಳಿದರು.

ಅಭಿನಂದನೆ ಸ್ವೀಕರಿಸಿದ ಹಿರಿಯ ಪತ್ರಕರ್ತ ಹಾಗೂ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಅಂಶಿ ಪ್ರಸನ್ನಕುಮಾರ್ ಮಾತನಾಡಿ, ಮಾಹಿತಿ ಹಕ್ಕು ಕಾಯ್ದೆಯು ಪತ್ರಕರ್ತರಿಗೆ ಹೇಗೆ ಉಪಯೋಗವಾಗುತ್ತದೆ. ಆಯೋಗ ಹೇಗೆ ಕಾರ್ಯ ನಿರ್ವಹಿಸುತ್ತದೆ ಎಂಬ ಅರಿವನ್ನು ಬೆಳಸಿಕೊಳ್ಳಿ. ನೈತಿಕತೆ, ವಿಶ್ವಾಸಾರ್ಹಯೊಂದಿಗೆ ಸರ್ಕಾರ ಮತ್ತು ಸಮಾಜದ ಸೇತುವೆಯಾಗಿ ಪತ್ರಕರ್ತರು ಕೆಲಸ ಮಾಡಬೇಕು. ಯಾವುದೇ ಅರ್ಜಿ ಆಹ್ವಾನಿಸದೆ 7 ಕೋಟಿ ಜನಸಂಖ್ಯೆಯಲ್ಲಿ 70 ಮಂದಿ ಅರ್ಹರನ್ನು ಆಯ್ಕೆ ಮಾಡಿದ ರಾಜ್ಯ ಸರ್ಕಾರಕ್ಕೆ ಅಭಿನಂದನೆ ಸಲ್ಲಿಸುತ್ತೇನೆ. ಈ ಪ್ರಶಸ್ತಿಯನ್ನು ನಾನು ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಪತ್ರಕರ್ತರ ಪರವಾಗಿ ಸ್ವೀಕರಿಸಿದ್ದೇನೆ ಎಂದರು.

ಮಾಹಿತಿ ಆಯುಕ್ತರಾದ ಎಸ್. ರಾಜಶೇಖರ್, ಡಾ.ಹರೀಶ್ ಕುಮಾರ್ ಮಾತನಾಡಿದರು. ಈ ಸಾಲಿನ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ದಯಾಶಂಕರ ಮೈಲಿ, ಎಚ್.ಎಸ್. ದಿನೇಶ್ ಕುಮಾರ್, ಎಂ.ಟಿ.ಯೋಗೇಶ್ ಕುಮಾರ್, ಹಂಪಾ ನಾಗರಾಜ್, ಧರ್ಮಾಪುರ ನಾರಾಯಣ್, ಮಹೇಶ್ ಭಗೀರಥ, ಕೆ.ಬಿ.ರಮೇಶ್ ನಾಯಕ, ಸುಧೀಂದ್ರಕುಮಾರ್, ವೀರಭದ್ರಪ್ಪ ಬಿಸ್ಲಳ್ಳಿ, ಶೇಖರ್ ಕಿರುಗುಂದ, ಎಂ.ಎ.ಶ್ರೀರಾಮ್, ಈ.ಕಾರ್ತಿಕ್, ರಾಜ್ಯ ಸಮಿತಿಗೆ ಆಯ್ಕೆಯಾದ ಬಿ.ರಾಘವೇಂದ್ರರನ್ನು ಸನ್ಮಾನಿಸಲಾಯಿತು. ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಕೆ.ದೀಪಕ್, ನಗರ ಉಪಾಧ್ಯಕ್ಷ ರವಿ ಪಾಂಡವಪುರ, ಗ್ರಾಮಾಂತರ ಉಪಾಧ್ಯಕ್ಷ ದಾ.ರಾ. ಮಹೇಶ್ ಇದ್ದರು.

### ಕೆಲವರಿಗೆ ಅರಿವೇ ಇಲ್ಲ

ರಾಜ್ಯ ಮಾಹಿತಿ ಆಯುಕ್ತ ಬದ್ರುದ್ದೀನ್ ಮಾತನಾಡಿ, ಮಾಹಿತಿ ಹಕ್ಕು ಕಾಯ್ದೆ ಬೇರೆ ಬೇರೆ ಸ್ವರೂಪದಲ್ಲಿ ಸಹಾಯವಾಗುತ್ತದೆ. ನಮ್ಮ ವೃತ್ತಿಗೆ ಇದು ದೊಡ್ಡ ಅಸ್ತ್ರ. ಇದನ್ನು ಹೆಚ್ಚು ಹೆಚ್ಚು ಬಳಸಿಕೊಳ್ಳಬೇಕು. ಎಲ್ಲಾ ಕಾಯ್ದೆಯಂತೆ ಇದೂ ಕೂಡ ದುರ್ಬಳಕೆ ಆಗುತ್ತದೆ. ಅದನ್ನು ಹೇಗೆ ಸದ್ಬಳಕೆ ಮಾಡಿಕೊಳ್ಳುವುದು ಎಂಬುದು ಮುಖ್ಯ. ಸದುದ್ದೇಶದಿಂದ ಇದನ್ನು ಪ್ರಾಮಾಣಿಕವಾಗಿ ಬಳಸಿಕೊಳ್ಳಬೇಕು ಎಂದರು. ಮಾಹಿತಿ ಹಕ್ಕು ಮತ್ತು ಕಾಯ್ದೆ ಕುರಿತು ಕೆಲವರಿಗೆ ಅರಿವೇ ಇರುವುದಿಲ್ಲ. ಈ ಬಗ್ಗೆ ಸಂವಾದ ಮತ್ತು ಜಾಗೃತಿ ಕಾರ್ಯಕ್ರಮ ನಡೆಸಲಾಗುವುದು. ಅಧಿಕಾರಿ ವರ್ಗ ಪ್ರಜೆಗಳನ್ನು ಸತಾಯಿಸಬಹುದು. ಅಂತಹ ಅಧಿಕಾರಿಗಳ ನಿಯಮದ ವಿರುದ್ಧ ಕ್ರಮಕ್ಕೆ ಅವಕಾಶವಿದೆ. ನಷ್ಟ ಪರಿಹಾರಕ್ಕೂ ಅವಕಾಶವಿದೆ. ನಾವು ಸಮರೋಪಾದಿಯಲ್ಲಿ ಕೆಲಸ ಮಾಡ ಬೇಕಾಗುತ್ತದೆ. ನಾವು ಆಯುಕ್ತರಾದ ಮೇಲೆ ಸುಮಾರು 25 ಸಾವಿರ ಅರ್ಜಿ ವಿಲೇವಾರಿ ಮಾಡಿದ್ದೇವೆ. ಅಲ್ಲದೆ ಮಾಹಿತಿ ಹಕ್ಕು ಆಯೋಗವು ಹೆಚ್ಚು ಕ್ರಿಯಾಶೀಲವಾಗಿದೆ. ಕೆಲವೊಂದು ನ್ಯೂನ್ಯತೆಗಳನ್ನು ತಿಳಿಸಿದರೆ ತಿದ್ದುಪಡಿಗೆ ಶಿಫಾರಸ್ಸು ಮಾಡಲಾಗುವುದು ಎಂದರು. ಈ ಕಾಯ್ದೆಯನ್ನು ಅನೇಕ ಕಡೆಗಳಲ್ಲಿ ಗಂಭೀರವಾಗಿ ಪರಿಗಣಿಸುವುದಿಲ್ಲ. ಈ ಕುರಿತ ನಡಾವಳಿಯನ್ನು ಕೆಡಿಪಿ ಸಭೆಯಲ್ಲಿ ಕಾರ್ಯಸೂಚಿಯನ್ನಾಗಿ ಮಾಡಿದರೆ ಆಯೋಗಕ್ಕೆ ಇರುವ ಒತ್ತಡ ಕಡಿಮೆಯಾಗಿ ಸಾರ್ವಜನಿಕರ ದೂರಿಗೆ ಬೇಗ ಪರಿಹಾರ ದೊರಕಬಹುದು ಎಂದರು.

# ಪ್ರಿಯಾಂಕ ಖರ್ಗೆ ಜನ್ಮ ದಿನಾಚರಣೆ



ಮೈಸೂರು: ಗ್ರಾಮೀಣಾಭಿವೃಧಿ ಹಾಗೂ ಪಂಚಾಯತ್ ರಾಜ್ ಹಾಗೂ ಜೈವಿಕ ಮಾಹಿತಿ ತತ್ರಜ್ಞಾನ ಸಚಿವ ಪ್ರಿಯಾಂಕ್ ಖರ್ಗೆ 47ನೇ ಹುಟ್ಟುಹಬ್ಬವನ್ನು ಸೇವಾ ಕಾರ್ಯಕ್ರಮಗಳ ಮೂಲಕ ಆಚರಿಸಲಾಯಿತು.

ತಿಲಕ್ ನಗರದಲ್ಲಿ ಅಂದ ಮಕ್ಕಳ ಶಾಲೆಯಲ್ಲಿ ಬೆಳಗಿನ ಉಪಹಾರ ವಿತರಿಸಿದರು. ಕೃಷ್ಣರಾಜ ಆಸ್ಪತ್ರೆಯಲ್ಲಿ ರೋಗಿಗಳಿಗೆ ಹಣ್ಣು ಹಂಪಲು ವಿತರಿಸಿದರು. ಡಾ.ಮಲ್ಲಿಕಾರ್ಜುನ ಖರ್ಗೆ ಅಭಿಮಾನಿ ಬಳಗದ ರಾಜ್ಯಾಧ್ಯಕ್ಷ ಹಾಗೂ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ನರೇಂದ್ರ ನೇತೃತ್ವದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿ, ಬಾಬಾಸಾಹೇಬರ ಅನುಯಾಯಿ ಹಾಗೂ ಈ ನಾಡು ಕಂಡ ಅತ್ಯಂತ ಪ್ರಾಮಾಣಿಕ, ದಕ್ಷ ರಾಜಕಾರಣಿ ಪ್ರಿಯಾಂಕ ಖರ್ಗೆ ಅವರಾಗಿದ್ದಾರೆ. ಅವರ ಜನ್ಮ ದಿನವನ್ನು ಸರಳವಾಗಿ ಆಚರಿಸಲಾಯಿತು ಎಂದು ಹೇಳಿದರು. ಮೈಸೂರು ಜಿಲ್ಲಾ ಯುವ ಕಾಂಗ್ರೆಸ್ ಸಮಿತಿ ಮಾಜಿ ಅಧ್ಯಕ್ಷ ಹಿನಕಲ್ ಮಂಜು, ಪ.ಪಂ. ಜಿಲ್ಲಾಧ್ಯಕ್ಷ ಮಹೇಶ್, ಕೆಪಿಸಿಸಿ ಸಂಯೋಜಕ ವಿಜಯ್, ಕೆಪಿಸಿಸಿ ಕಾರ್ಯಕಾರಿಣಿ ಸದಸ್ಯ ಸಂತೋಷ್ ಚಿಕ್ಕನಹಳ್ಳಿ, ಐಎನ್‌ಟಿಯುಸಿ ಉಪಾಧ್ಯಕ್ಷ ನಾಗರಾಜು, ಪೈಲ್ವಾನ್ ಕೃಷ್ಣಪ್ಪ, ಯುವ ಕಾಂಗ್ರೆಸ್ ಉಪಾಧ್ಯಕ್ಷ ಧನಗಳ್ಳಿ ಪ್ರವೀಣ್, ಇಲವಾಲ ಹೋಬಳಿ ಡಾ.ಬಿ.ಆರ್. ಅಂಬೇಡ್ಕರ್ ಕ್ಷೇಮಾಭಿವೃದ್ಧಿ ಸಮಿತಿಯ ಗೌರವ ಅಧ್ಯಕ್ಷ ಬಿ.ಕೆ.ಈಶ್ವರ್, ಅಧ್ಯಕ್ಷ ಚೆಲುವರಾಜು, ಕಾರ್ಯಧ್ಯಕ್ಷ ಸಂತೋಷ, ಉಪಾಧ್ಯಕ್ಷ ಸೋಮಶೇಖರ್, ಬಿಡಿಎಂ ಕುಮಾರ್, ಕಾರ್ಯದರ್ಶಿ ಶಿವಕುಮಾರ್, ಖಜಾಂಚಿ ಮೊಗಣ್ಣ, ನಿರ್ದೇಶಕರಾದ ಚೆಲುವರಾಜು, ಮಂಜಣ್ಣ, ಸೋಮಶೇಖರ್, ಲೋಕೇಶ, ನಾಗವಾಲ ಗ್ರಾ.ಪಂ. ಸದಸ್ಯರಾದ ಮಂಜು, ಪಾಪಯ್ಯ ಇತರರು ಉಪಸ್ಥಿತರಿದ್ದರು.

ಮೊದಲ ಪುಟದಿಂದ

### ಸಮಸ್ಯೆ ಬಗೆಹರಿಸಲು ಸಿಎಂ ಆಗ್ರಹ

ಜೋಳ ಹಾಗೂ 4.16 ಲಕ್ಷ ಹೆಕ್ಟೇರಿಗೂ ಹೆಚ್ಚು ಪ್ರದೇಶದಲ್ಲಿ ಹೆಸರುಕಾಳು ಬೆಳೆಯಲಾಗಿದೆ. ರಾಜ್ಯದಲ್ಲಿ ಸುಮಾರು 54.74 ಲಕ್ಷ ಮೆಟ್ರಿಕ್ ಟನ್‌ಗಿಂತ ಹೆಚ್ಚು ಮೆಕ್ಕೆ ಜೋಳ ಮತ್ತು 1.983 ಲಕ್ಷ ಮೆಟ್ರಿಕ್ ಟನ್‌ಗೂ ಹೆಚ್ಚು ಹೆಸರುಕಾಳು ಉತ್ಪಾದನೆಯಾಗುವ ನಿರೀಕ್ಷೆಯಿದೆ. ಇದು ಸಮೃದ್ಧಿಯ ಅವಕಾಶವಾಗಬೇಕಿತ್ತು, ಆದರೆ ಪ್ರಸ್ತುತ ಮಾರುಕಟ್ಟೆ ಸ್ಥಿತಿಯು ಇದನ್ನು ಸಂಕಷ್ಟವನ್ನಾಗಿ ಪರಿವರ್ತಿಸಿದೆ. ಕೇಂದ್ರ ಸರ್ಕಾರ, ಮೆಕ್ಕೆ ಜೋಳಕ್ಕೆ ಪ್ರತಿ ಮೆಟ್ರಿಕ್ ಟನ್‌ಗೆ 2,400 ಹಾಗೂ ಹೆಸರುಕಾಳಿಗೆ 8,768 ಕನಿಷ್ಟ ಬೆಂಬಲ ಬೆಲೆ ಘೋಷಿಸಿದ್ದರೂ, ಕರ್ನಾಟಕದಲ್ಲಿ ಪ್ರಸ್ತುತ ಮಾರುಕಟ್ಟೆ ಬೆಲೆ ಜೋಳಕ್ಕೆ 1600–1800 ಮತ್ತು ಹೆಸರುಕಾಳಿಗೆ 5,400 ಆಸುಪಾಸಿನಲ್ಲಿರುವುದು ಬೆಲೆ ಕುಸಿತಕ್ಕೆ ಕಾರಣವಾಗಿದೆ. ಆಶ್ಚರ್ಯಕರ ಸಂಗತಿಯೆಂದರೆ, ಹಿಂದಿನ ಮೂರು ವರ್ಷಗಳ ಮಾದರಿ ಬೆಲೆಗಳು ಎಂಎಸ್‌ಪಿಗಿಂತ ಹೆಚ್ಚಿರುವಾಗ, ಈ ವರ್ಷ ಬಾಹ್ಯ ಒತ್ತಡಗಳ ಪರಿಣಾಮ ಮತ್ತು ಸರಬರಾಜು–ಬೇಡಿಕೆಗಳ ಅಸಮತೋಲನದಿಂದ ಬೆಲೆಗಳು ದಾಖಲೆಯ ಕನಿಷ್ಠ ಮಟ್ಟಕ್ಕೆ ಕುಸಿದಿವೆ. ಕರ್ನಾಟಕದಲ್ಲಿ ಸುಮಾರು 32 ಲಕ್ಷ ಮೆಟ್ರಿಕ್ ಟನ್ ಮೆಕ್ಕೆ ಜೋಳ ಮಾರುಕಟ್ಟೆಯಲ್ಲಿ ಹೆಚ್ಚುವರಿಯಾಗಿ ಲಭ್ಯವಿದ್ದು, ಸ್ಥಳೀಯ ಕೈಗಾರಿಕೆಗಳ ಬಳಕೆಯ ಸಾಮರ್ಥ್ಯಕ್ಕಿಂತ ಇದು ಹೆಚ್ಚಾಗಿದೆ. ಆದ್ದರಿಂದ ಭಾರತ ಸರ್ಕಾರವು ತಕ್ಷಣ ಮಧ್ಯಪ್ರವೇಶಿಸಿ, ಕ್ರಮ ಕೈಗೊಳ್ಳಬೇಕು ಎಂದು ಪತ್ರದಲ್ಲಿ ಮನವಿ ಮಾಡಿದ್ದಾರೆ. ನ್ಯಾಯಯುತ ಬೆಲೆ ಮತ್ತು ಸಮಾನ ಎಥೆನಾಲ್ ಹಂಚಿಕೆಯು ರೈತರ ಹಕ್ಕು ಮಾತ್ರವಲ್ಲ, ಅದು ರಾಷ್ಟ್ರೀಯ ಜವಾಬ್ದಾರಿಯು ಹೌದು. ಸಂಕಷ್ಟದಲ್ಲಿರುವ ಕರ್ನಾಟಕದ ರೈತರ ನೆರವಿಗೆ ತಕ್ಷಣ ಧಾವಿಸಬೇಕು ಎಂದಿದ್ದಾರೆ.

ಮೈಸೂರು ಅಭಿವೃದ್ಧಿ ಪ್ರಾಧಿಕಾರ, ಮೈಸೂರು
ಝೂನ್ಸಿಲಕ್ಷ್ಮೀಬಾಯಿ ರಸ್ತೆ, ಮೈಸೂರು – 570 005


ಸಂಖ್ಯೆ:ಮೈಅಪ್ರಾ:ನಯೋಶಾ:ಭೂಉಬ:ನಯೋ–1: :2025–26 ದಿನಾಂಕ: 21.11.2025

ಸಾರ್ವಜನಿಕ ಪ್ರಕಟಣೆ

**ಕರ್ನಾಟಕ ನಗರ ಮತ್ತು ಗ್ರಾಮ ಯೋಜನಾ ಕಾಯ್ದೆ 1961ರ ಪ್ರಕರಣ 69(2)(3) &(4)ರನ್ವಯ**

ಮೈಸೂರು ತಾಲ್ಲೂಕು, ಕಸಬಾ ಹೋಬಳಿ, **ಬೆಲವತ್ತ ಗ್ರಾಮದ** ಸ.ನಂ.117/4ರ 00ಎಕರೆ 12ಗುಂಟೆ ವಿಸ್ತೀರ್ಣದ ಜಮೀನನ್ನು ಕೆ.ಟಿ.ಸಿ.ಪಿ. ಕಾಯ್ದೆ 1961ರ ಪ್ರಕರಣ 69(2)(3) &(4) ರನ್ವಯ ಸಾರಿಗೆ ಮತ್ತು ಸಂಪರ್ಕ ವಲಯದಿಂದ ವಾಣಿಜ್ಯ ವಲಯಕ್ಕೆ ಭೂ ಉಪಯೋಗ ನಿಗಧಿಪಡಿಸುವಂತೆ ಶ್ರೀ ರಿತೇಶ್.ಹೆಚ್.ಆರ್ ಬಿನ್ ಹೆಚ್.ಎ.ರಮೇಶ್ ಇವರು ಅರ್ಜಿ ಸಲ್ಲಿಸಿರುತ್ತಾರೆ. ಭೂ ಉಪಯೋಗ ನಿಗಧಿಪಡಿಸುವುದರಿಂದ **"ಈ ಜಮೀನಿನಲ್ಲಿ ವಾಣಿಜ್ಯ ಚಟುವಟಿಕೆಯನ್ನು ಪ್ರಾರಂಭಿಸುವುದರಿಂದ ಸ್ಥಳೀಯರಿಗೆ ಉದ್ಯೋಗ ದೊರಕುವಂತಾಗುತ್ತದೆ. ವಾಣಿಜ್ಯ ಚಟುವಟಿಕೆ ಕಾಮಗಾರಿಗಳು ನಡೆಯುವ ಸಂಧರ್ಭದಲ್ಲಿ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ. ಈ ವಿನ್ಯಾಸ ಅಭಿವೃದ್ಧಿಯಿಂದ ಸುತ್ತಲಿನ ಪ್ರದೇಶದ ಅಭಿವೃದ್ಧಿಗೆ ಸಹಾಯವಾಗುತ್ತದೆ ಮತ್ತು ಯೋಜನಾಬದ್ಧವಾದ ವಿನ್ಯಾಸ ರಚನೆಯಿಂದ ಉತ್ತಮ ರಸ್ತೆಗಳು, ನಾಗರೀಕ ಸೌಲಭ್ಯದ ಪ್ರದೇಶಗಳು ಮತ್ತು ಉದ್ಯಾನವನಗಳು ಸಾರ್ವಜನಿಕರ ಉಪಯೋಗಕ್ಕೆ ಲಭ್ಯವಾಗುತ್ತವೆ"** ಎಂದು ಸಾರ್ವಜನಿಕ ಹಿತಾಸಕ್ತಿ ಕುರಿತು ಮನವಿಯಲ್ಲಿ ತಿಳಿಸಿರುತ್ತಾರೆ. ಸದರಿ ಜಮೀನಿನ ಭೂ ಉಪಯೋಗದ ನಿಗಧಿಪಡಿಸುವ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದಲ್ಲಿ ಸಾರ್ವಜನಿಕರು ಈ ಪ್ರಕಟಣೆಯ ಪತ್ರಿಕೆಯಲ್ಲಿ ಪ್ರಕಟವಾದ ದಿನಾಂಕದಿಂದ 15 ದಿನಗಳೊಳಗಾಗಿ ನಗರ ಯೋಜಕ ಸದಸ್ಯರು, ಅಭಿವೃದ್ಧಿ ಪ್ರಾಧಿಕಾರ, ಮೈಸೂರು–570005 ಇವರಿಗೆ ಮುದ್ದಾಂ ಅಥವಾ ನೋಂದಾಯಿತ ಅಂಚೆ ಮೂಲಕ ತಲುಪಿಸಬಹುದಾಗಿದೆ.

KEY PLAN




Land in Question

ಸಹಿ/– ನಗರ ಯೋಜಕ ಸದಸ್ಯರು,
ಮೈಸೂರು ಅಭಿವೃದ್ಧಿ ಪ್ರಾಧಿಕಾರ, ಮೈಸೂರು.

ವಾಸಾಸಂಇ/ಮೈಸೂರು/1267/ಎಸ್‌ಎಸ್‌ಸಿ/2025–26

# ನಗರದಲ್ಲಿ ನಡೆದ ಸಂಭ್ರಮದ ವಿವೇಕಯಾತ್ರೆ



ಮೈಸೂರು: ವಿವೇಕಾನಂದ ಜ್ಞಾನ, ಚಿಂತನೆ ಮೊದಲಾದವುಗಳನ್ನು ಸಾರಿ ತಿಳಿಸುವ ಸಂದೇಶವನ್ನು ಹೊತ್ತ ಅನೇಕ ಸ್ವಾಮೀ ಜಿಗಳು ಹಾಗೂ ವಿದ್ಯಾರ್ಥಿಗಳು ಯಾತ್ರೆಯಲ್ಲಿ ಭಾಗವಹಿಸಿ ವಿವೇಕಾಯಾತ್ರೆ ಯಶಸ್ವಿಗೊಳಿಸಿದರು.

ತದ್ಯಕ್ತಾನಂದಜಿ ಗಿರಿಜಾತ್ಮಾನಂದಜಿಯವರ, ಮುಕ್ತಿನಾಥಾನಂದಜಿ, ಲೋಕೋತ್ತರಾನಂದಜಿ ಮೊದಲಾದವರು ವಿವೇಕಾಯಾತ್ರೆಯಲ್ಲಿದ್ದರು. ಬೆಳಿಗ್ಗೆ 10ಕ್ಕೆ ಸದ್ವಿದ್ಯ ಪಾಠಶಾಲಾ, ವಿವೇಕ ಸ್ಮಾರಕ, ದೇವರಾಜ ಅರಸು ರಸ್ತೆ, ದಿವಾನ್ಸ್ ರಸ್ತೆ, ಶಿವಾರಂಪೇಟೆ, ಸಂತೆಪೇಟೆ, ದೇವರಾಜ ಅರಸು ರಸ್ತೆ, ಮರಿಮಲ್ಲಪ್ಪ ಕಾಲೇಜು, ಸದ್ವಿದ್ಯಾ ಕಾಲೇಜಿನಲ್ಲಿ ವಿವೇಕಾನಂದ ಯಾತ್ರೆ ಅಂತ್ಯವಾಯಿತು. ಬಳಿಕ ನಡೆದ ವೇದಿಕೆ ಕಾರ್ಯಕ್ರಮದಲ್ಲಿ ಶಾಸಕ ಟಿ.ಎಸ್.ಶ್ರೀವತ್ಸ ಮಾತನಾಡಿ ಇವತ್ತು ದೇಶಾದ್ಯಂತ ಸ್ವಾಮೀಜಿಗಳು ಬಂದಿದ್ದು ಹಿಂದೂ ಧರ್ಮ ಸನಾತನ ಧರ್ಮ ಗಟ್ಟಿಯಾಗಿದೆ ಎಂದು ಹೇಳುವುದಕ್ಕೆಈ ಕಾರ್ಯ ಕ್ರಮ ಸಾಕ್ಷಿಯಾಗಿದೆ. ವಿವೇಕಾನಂದರ ಬಗ್ಗೆ ಯಾತ್ರೆ ಮೂಲಕ ಪ್ರದರ್ಶನ ಮಾಡುವ ಕೆಲಸವನ್ನು ಮಾಡುತ್ತಿರುವುದು ನಿಜಕ್ಕೂ ಶ್ಲಾಘನೀಯ ಎಂದರು

ವಿಶ್ವ ಮಟ್ಟದಲ್ಲಿ ಭಾರತ ಹಾಗೂ ಭಾರತೀಯರ ಬಗ್ಗೆ ವಿಶಿಷ್ಟ ಗೌರವ ಮೂಡಿಸುವ ಕೆಲಸ ಸ್ವಾಮಿ ವಿವೇಕಾನಂದರಿಂದ ಆಗಿದೆ. ಇದು ಭಾರತೀಯರಾದ ನಮಗೆಲ್ಲ ಹೆಮ್ಮೆ ಹಾಗೂ ಗೌರವ ತರುವಲ್ಲಿ ಪ್ರಮುಖ ಪಾತ್ರ ವಹಿಸಿದೆ. ಹೀಗಾಗಿ ಭಾರತೀಯರಾದ ನಮಗೆಲ್ಲ ಸ್ವಾಮಿ ವಿವೇಕಾನಂದರ ಬದುಕು ಆದರ್ಶಮಯವಾಗಿದ್ದು, ನಿತ್ಯ ಅವರನ್ನು ಸ್ಮರಿಸುವುದು ನಮ್ಮ ಕರ್ತವ್ಯವೂ ಹೌದು ಎಂದರು.

ವಿಶ್ವ ಮಟ್ಟದಲ್ಲಿ ಭಾರತ ಹಾಗೂ ಭಾರತೀಯರ ಬಗ್ಗೆ ವಿಶಿಷ್ಟ ಗೌರವ ಮೂಡಿಸುವ ಕೆಲಸ ಸ್ವಾಮಿ ವಿವೇಕಾನಂದರಿಂದ ಆಗಿದೆ. ಇದು ಭಾರತೀಯರಾದ ನಮಗೆಲ್ಲ ಹೆಮ್ಮೆ ಹಾಗೂ ಗೌರವ ತರುವಲ್ಲಿ ಪ್ರಮುಖ ಪಾತ್ರ ವಹಿಸಿದೆ. ಹೀಗಾಗಿ ಭಾರತೀಯರಾದ ನಮಗೆಲ್ಲ ಸ್ವಾಮಿ ವಿವೇಕಾನಂದರ ಬದುಕು ಆದರ್ಶಮಯವಾಗಿದ್ದು, ನಿತ್ಯ ಅವರನ್ನು ಸ್ಮರಿಸುವುದು ನಮ್ಮ ಕರ್ತವ್ಯವೂ ಹೌದು ಎಂದರು.

ಮಾಜಿ ವಿಧಾನ ಪರಿಷತ್ ಸದಸ್ಯ ಗೋ ಮಧುಸೂದನ್ ಮಾತನಾಡಿ, ಯುವಕರಿಗೆ ನೈತಿಕ ಶಿಕ್ಷಣ ಎಷ್ಟರ ಮಟ್ಟಿಗೆ ಮುಖ್ಯ, ವಿವೇಕಾನಂದರು ಪ್ರತಿಪಾದಿಸಿದ ಚಿಂತನೆಗಳನ್ನು ಅರ್ಥ ಮಾಡಿಕೊಳ್ಳಲು ಇಂತಹ ಕಾರ್ಯಕ್ರಮಗಳು ಬಹುಮುಖ್ಯವಾಗಿದೆ. ವಿದ್ಯಾರ್ಥಿಗಳು ಮತ್ತು ಯುವಕರನ್ನೇ ಕೇಂದ್ರವಾಗಿಟ್ಟುಕೊಂಡು ಇಂತಹ ಕಾರ್ಯಕ್ರಮ ಆಯೋಜಿಸಿರುವುದು ವಿಶೇಷ. ಉತ್ತಮ ಅಭಿರುಚಿ, ನೈತಿಕತೆಯ ವಿಚಾರಗಳು ಸ್ವಾಮೀಜಿಗಳು ನೀಡಿದ್ದು ಅವರ ಮಾರ್ಗದರ್ಶನ ನಾವೆಲ್ಲ ಪಡೆಯೋಣ ಎಂದು ಹೇಳಿದರು

ವೇದಿಕೆಯ ಪಕ್ಕ ರಾಮಕೃಷ್ಣ ಆಶ್ರಮ, ಮಿಷನ್‌ಗಳು ಯುವಕರಿಗೆ, ಮಕ್ಕಳಿಗೆ ಪ್ರಕಟಿಸಿದ ಪುಸ್ತಕಗಳು, ಆಧ್ಯಾತ್ಮಿಕ ಪುಸ್ತಕಗಳು ಸೇರಿ ಸಾವಿರಾರು ಪುಸ್ತಕಗಳ ಪ್ರದರ್ಶನವನ್ನು ಆಯೋಜನೆ ಮಾಡಲಾಗಿತ್ತು. ಸಾಕಷ್ಟು ಜನರು ಈ ಪ್ರದರ್ಶನ ಮಳಿಗೆಗೆ ಭೇಟಿ ನೀಡಿ ವೀಕ್ಷಿಸಿದರು. ವಿಶೇಷವಾಗಿ ಯುವಕರು ಹೆಚ್ಚು ಉತ್ಸುಕತೆಯಿಂದ ಪುಸ್ತಕಗಳನ್ನು ನೋಡಿ ಖರೀದಿಸಿದರು.

# ಸಂವಿಧಾನ ಬದಲಾವಣೆಗೆ ಪ್ರಯತ್ನ: ಭನ್ವರ್ ಮೇಘವಂಶಿ

ಮೈಸೂರು: ಶೋಷಿತ ಸಮುದಾಯಗಳು ಸಂವಿಧಾನದ ಮೂಲಕ ಬದುಕು ಕಟ್ಟಿಕೊಂಡು ಬದಲಾವಣೆ ಆಗುತ್ತಿರುವುದನ್ನು ಸಹಿಸಲಾಗದೆ, ಸಂವಿಧಾನ ಬದಲಾವಣೆಗೆ ಪ್ರಯತ್ನಗಳು ನಡೆಯುತ್ತಿವೆ ಎಂದು ರಾಜಸ್ಥಾನದ ಸಾಮಾಜಿಕ ಕಾರ್ಯಕರ್ತ ಭನ್ವರ್ ಮೇಘವಂಶಿ ಪ್ರತಿಪಾದಿಸಿದರು.

ಮಾನಸ ಗಂಗೋತ್ರಿಯ ವಿಜ್ಞಾನ ಭವನದಲ್ಲಿ ಪ್ರಗತಿಪರ ಸಂಘಟನೆಗಳ ಒಕ್ಕೂಟ, ಗಾಂಧಿ ವಿಚಾರ ಪರಿಷತ್ತು, ಮೈಸೂರು ವಿಶ್ವವಿದ್ಯಾನಿಲಯ ವಿದ್ಯಾರ್ಥಿಗಳು ಮತ್ತು ಸಂಶೋಧಕರ ಸಹಯೋಗದಲ್ಲಿ ನಡೆದ ರಾಷ್ಟ್ರೀಯ ವಿಚಾರ ಸಂಕಿರಣವನ್ನು ಉದ್ಘಾಟಿಸಿ ಮಾತನಾಡಿದರು. ಸಂವಿಧಾನವು ಆದಿವಾಸಿ, ದಲಿತ, ಮಹಿಳೆಯರು ಹಾಗೂ ತೃತೀಯ ಲಿಂಗಿಗಳಿಗೆ ಸಮಾನ ಅವಕಾಶ ನೀಡುತ್ತಿದೆ. ಆದರೆ, ಇವರ ಬದಲಾದ ಬದುಕನ್ನು ಸಹಿಸಲಾಗದ ಮನುಸ್ಮೃತಿಗಳು, ಕೆಳ ವರ್ಗದ ಜನ ಗುಲಾಮರಾಗಿಯೇ ಉಳಿಯಬೇಕೆಂಬ ಆಶಯ ಹೊಂದಿದ್ದಾರೆ. ಜಾತ್ಯತೀತ, ಸಮಾಜವಾದಿ ಭಾರತವನ್ನು ಆಶಿಸದಿರುವ ಮನುವಾದಿಗಳು, ಬಾಬಾಗಳು ಹಿಂದೂ ರಾಷ್ಟ್ರ ನಿರ್ಮಿಸಲು ಪಣತೊಟ್ಟಿವೆ. ಇದೇ ಕಾರಣಕ್ಕಾಗಿ ಕುಂಭಮೇಳದಲ್ಲಿ ಹಿಂದಿನ ವರ್ಣ ಹಾಗೂ ಶ್ರೇಣೀಕೃತ ವ್ಯವಸ್ಥೆ ಹೊಂದಿರುವ 7 ಸಂವಿಧಾನವನ್ನು ಪ್ರಸ್ತಾಪ ಮಾಡಿದ್ದಾರೆ ಎಂದರು.

ಉತ್ತರ ಭಾರತದಲ್ಲಿ ಆರ್‌ಎಸ್‌ಎಸ್ ಸಣ್ಣ ಮಕ್ಕಳನ್ನು ಗುರಿಯಾಗಿಸಿ, ಅವರ ನಿಷ್ಕಲ್ಮಶ ಮನಸ್ಸಿಗೆ ವಿಷದ ವಿಚಾರಗಳನ್ನು ತುಂಬುವ ಕೆಲಸ ಮಾಡುತ್ತಿದೆ. ಪ್ರಾಥಮಿಕ ತರಗತಿಗಳ ಶಿಕ್ಷಕರೂ ಇದರಲ್ಲಿ ಭಾಗಿಗಳಾಗಿದ್ದಾರೆ. ಇದು ಅಪಾಯಕಾರಿ ಬೆಳವಣಿಗೆ. ನಾನು ಆರ್‌ಎಸ್‌ಎಸ್‌ನ ಮೌಲ್ಯಕ್ಕೂ ನಡವಳಿಕೆಗೂ ವ್ಯತ್ಯಾಸವಿರುವುದು ಕಂಡು ಅಲ್ಲಿಂದ ಹೊರಬಂದರೂ ಅನೇಕ ವರ್ಷ ಅವರು ತುಂಬಿದ ವಾಟ್ಸಾಪ್ ಯೂನಿವರ್ಸಿಟಿಯ ಚಿಂತನೆಗಳಿಂದ ಹೊರಬರಲಾಗಲಿಲ್ಲ ಎಂದು ನೆನಪಿಸಿಕೊಂಡರು.

ಪ್ರಭುತ್ವವು ಸಂವಿಧಾನ ಬದಲಾವಣೆಯ ದೃಷ್ಟಿಯಿಂದ ಕೆಲಸ ಮಾಡುತ್ತಿದೆ. ಸಾಮಾನ್ಯರಿಗಾಗಿ ಹೋರಾಡುವ ಕ್ರಾಂತಿಕಾರಿಗಳನ್ನು ಜೈಲಿಗಟ್ಟಿ, ಬಲಾತ್ಕಾರ ಮಾಡುವವರಿಗೆ ಜಾಮೀನು ನೀಡುತ್ತಿದೆ. ಉಮರ್ ಖಾಲಿದ್‌ನಂತಹ ಹೋರಾಟಗಾರರಿಗೆ ಜಾಮೀನು ಸಿಗದಂತೆ



ಜೈಲಿಗೆ ಹಾಕಿದರೆ, ಅತ್ಯಾಚಾರಿ ಬಾಬಾಗಳನ್ನು ಹೊರಗೆ ಬಿಟ್ಟಿದ್ದಾರೆ. ಎಸ್‌ಐಆರ್ ಮತದಾನದ ಹಕ್ಕನ್ನು ಕಸಿದುಕೊಳ್ಳುತ್ತಿದೆ. ಇದರಲ್ಲಿ ಒಂದು ಧರ್ಮ ಮತ್ತು ಸಮುದಾಯದ ಮತವನ್ನು ಕಿತ್ತುಕೊಳ್ಳಲು ಹೊಂಚು ಹಾಕುತ್ತಿದ್ದಾರೆ ಎಂದರು. ಭಾರತದ ನಾಗರಿಕರಲ್ಲ ಎಂದು ಹೊರಗೆ ಕಳುಹಿಸಿ ಮತ್ತೆ ಅವರನ್ನು ದೇಶಕ್ಕೆ ಕರೆದುಕೊಂಡಿದ್ದಾರೆ. 14 ಬುಡಕಟ್ಟು ಸಮುದಾಯಗಳಿಗೆ ಆಶ್ರಯಕ್ಕೆ ಮನೆ ಇಲ್ಲ. ಸರ್ಕಾರದ ಗುರುತಿನ ಚೀಟಿಗಳಿಲ್ಲ, ಇವರು ಹೇಗೆ ದೇಶದ ಪ್ರಜೆಗಳೆಂದು ಸಾಬೀತು ಪಡಿಸಿಕೊಳ್ಳುತ್ತಾರೆ. ಆದಿವಾಸಿ ಕುಟುಂಬಗಳಿಗೆ ಒಂದಿಂಚು ಭೂಮಿ ನೀಡಲು ಸಾಧ್ಯವಾಗದವರು, ಅವರು ಮನುವಾದದ ಪುಣ್ಯಭೂಮಿಯ ಚಿಂತನೆ ಪಾಲಿಸಬೇಕು ಎನ್ನುವುದು ಎಷ್ಟು ಸರಿ. ಗೋ ಮೂತ್ರ ಸೇವಿಸುವವರು, ದಲಿತರ ಮನೆಯ ಆಹಾರವನ್ನು ನಿರಾಕರಿಸುತ್ತಾರೆ. ಇಂತಹ ನಿಕೃಷ್ಟ ವ್ಯವಸ್ಥೆ ಪಾಲಿಸುವವರು ಪ್ರಜಾಪ್ರಭುತ್ವದ ಬಗ್ಗೆ ಮಾತನಾಡುತ್ತಿರುವುದು ಹಾಸ್ಯಾಸ್ಪದ ಎಂದು ಟೀಕಿಸಿದರು.

ಇನ್ನೂ ಬುಲ್ಡೋಜರ್ ನ್ಯಾಯ ಜಾರಿಗೆ ತಂದು ಒಂದು ಧರ್ಮ ಮತ್ತು ಸಮುದಾಯದವರ ಮೇಲೆ ಗದಾ ಪ್ರಹಾರ ನಡೆಸುತ್ತಿದೆ. ಸರ್ವೋಚ್ಚ ನ್ಯಾಯಾಲಯವೇ ಬುಲ್ಡೋಜರ್ ನ್ಯಾಯ ಸರಿಯಲ್ಲ ಎಂದು ಹೇಳಿದ್ದರೂ ಲೆಕ್ಕಿಸದೆ ಮುಂದುವರಿಸುತ್ತಿದ್ದಾರೆ ಎಂದು

> ಸಂವಿಧಾನ ನಮಗೆ ಹಕ್ಕು, ಭಾದ್ಯತೆ ಕೊಟ್ಟು ಸಮ ಸಮಾಜದ ಸ್ವರೂಪವನ್ನು ನೀಡಿದೆ. ಆದರೆ, ನಮ್ಮ ಧ್ವನಿಯನ್ನು ಕೇಳುವವರು ಮೂಕರಾಗಿದ್ದಾರೆ. ಅತ್ಯಾಚಾರಿ, ದುಷ್ಟ ಹಾಗೂ ವೈದಿಕ ಸಂಸ್ಕೃತಿಯನ್ನು ಕೋಮುವಾದಿಯ ವಿಕೃತ ಮುಖವಾಡಗಳೊಟ್ಟಿಗೆ ಆವರಿಸುತ್ತಿದೆ. ಇದು ಬಹಳ ದುಷ್ಟ ಸಮಯ. ಇಂತಹ ಸಮಯದಲ್ಲಿ ಪ.ಮಲ್ಲೇಶ ವಿಚಾರಗಳನ್ನು ನೆನೆಸಿಕೊಳ್ಳುವುದು ಅಗತ್ಯವಾಗಿದೆ.
>
> **ಡಾ.ಎಚ್.ಜನಾರ್ದನ್ (ಜನ್ನಿ)** ಹಿರಿಯ ರಂಗಕರ್ಮಿ

ಆಕ್ರೋಶ ವ್ಯಕ್ತಪಡಿಸಿದರು.

ಶಿಕ್ಷಣ, ಆರೋಗ್ಯ, ಆರ್ಥಿಕತೆಯ ಬಗ್ಗೆ ಕೆಲಸ ಮಾಡಬೇಕಾದ ಸರ್ಕಾರವು ನಮ್ಮ ವೈಯಕ್ತಿಕ ಜೀವನಕ್ಕೆ ಮೂಗು ತೂರಿಸುತ್ತಿದೆ. ನಾನು ಯಾರನ್ನು ಪ್ರೀತಿಸಬೇಕು, ಯಾವ ಆಹಾರ ಸೇವಿಸಬೇಕು ಎಂಬುದನ್ನು ಪ್ರಭುತ್ವ ನಿರ್ಧರಿಸಲು ಪ್ರಯತ್ನಿಸುತ್ತಿರುವುದು ಖಂಡನೀಯ. ಡಿಜಿಟಲ್ ವ್ಯವಸ್ಥೆಯ ಮೇಲೆ ಸರ್ಕಾರದ ನಿರ್ಬಂಧ ಹೆಚ್ಚುತ್ತಿದ್ದು, ರಾಷ್ಟ್ರೀಯ ಸುರಕ್ಷತೆ ನೆಪದಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯ ಕಿತ್ತುಕೊಳ್ಳಲಾಗುತ್ತಿದೆ. ಸಾಮಾಜಿಕ ಮಾಧ್ಯಮವನ್ನು ಪ್ರಗತಿಪರ ಚಿಂತನೆಗಳನ್ನು ಟೀಕಿಸಲು, ಬೆದರಿಕೆ ಹಾಕಲು ಬಳಸಿಕೊಳ್ಳುತ್ತಿದ್ದಾರೆ ಎಂದು ದೂರಿದರು.

ಪ್ರಸ್ತುತ ಇರುವ ಸಂದಿಗ್ಧ ಸ್ಥಿತಿಯಲ್ಲಿ ಗಾಂಧಿ, ಅಂಬೇಡ್ಕರ್, ಕಮ್ಯುನಿಸ್ಟ್ ಎಂಬ ಸಣ್ಣ ಬೇಧಗಳನ್ನು ಮರೆತು ವಿಚಾರವಾದಿಗಳು ಒಂದೇ ವೇದಿಕೆಯಲ್ಲಿ ಸೇರಿ ಭಾರತ ದೇಶವನ್ನು ರಕ್ಷಿಸುವ ಅವಶ್ಯಕತೆಯಿದೆ ಎಂದು ಅಭಿಪ್ರಾಯಪಟ್ಟರು. ಚಿಂತಕ ಸವಿತಾ ಪ. ಮಲ್ಲೇಶ್, ಮಹಿಳಾ ಹೋರಾಟಗಾರ್ತಿ ಸುಶೀಲ, ಹೋರಾಟಗಾರ ಎನ್.ಡಿ.ಸಿದ್ದಿಕ್, ಚಿಂತಕ ಶಿವಸುಂದರ್, ಸುಶೀಲ ಬಸವಲಿಂಗಯ್ಯ, ಧನಂಜಯ ಎಲಿಯೂರು, ಮೈಸೂರು ವಿವಿ ಸಂಶೋಧಕರ ಸಂಘದ ಅಧ್ಯಕ್ಷ ವರಹಳ್ಳಿ ಆನಂದ್, ಸಂಶೋಧನ ವಿದ್ಯಾರ್ಥಿ ನವೀನ್ ಅಳಗಂಚಿ ಇನ್ನಿತರರು ಕಾರ್ಯಕ್ರಮದಲ್ಲಿ ಹಾಜರಿದ್ದರು.

# ಸಮಾಜದ ಋಣ ತೀರಿಸುವ ಕೆಲಸ ಮಾಡಿ: ಸಿಎಂ ಸಿದ್ದರಾಮಯ್ಯ



ಮೈಸೂರು: ಎಲ್ಲರೂ ಕೂಡ ಅವಕಾಶ ಸಿಕ್ಕಾಗ ಸಮಾಜದ ಋಣ ತೀರಿಸುವ ಕೆಲಸವನ್ನು ಮಾಡಬೇಕು. ಅದರಲ್ಲೂ ಹಾಸ್ಟೆಲ್ ವಿದ್ಯಾರ್ಥಿಗಳು ಸಮಾಜದ ಋಣ ತೀರಿಸಲೇಬೇಕು. ಕರ್ನಾಟಕದಲ್ಲಿ ಕನ್ನಡದಲ್ಲೆ ಮಾತನಾಡುತ್ತೇನೆ ಅಂತ ಎಲ್ಲರೂ ಶಪಥ ಮಾಡಬೇಕು ಎಂದು ಸಿಎಂ ಸಿದ್ದರಾಮಯ್ಯ ಹೇಳಿದರು.

ಮೈಸೂರು ಜಿಲ್ಲಾ ಬಿಸಿಎಂ ವಿದ್ಯಾರ್ಥಿನಿಲಯಗಳ ಹಿರಿಯ ವಿದ್ಯಾರ್ಥಿಗಳ ಸಂಘ ಮೈಸೂರು ಇವರ ವತಿಯಿಂದ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಘಟಿ ಕೋತ್ಸವ ಭವನದಲ್ಲಿ ಆಯೋಜಿಸಲಾಗಿದ್ದ ಪ್ರಥಮ ವರ್ಷದ ವಾರ್ಷಿಕೋತ್ಸವ ಕನ್ನಡ ರಾಜ್ಯೋತ್ಸವ –2025 ಡಿ ದೇವರಾಜ ಅರಸು – ಎಲ್.ಜಿ ಹಾವನೂರು ಪ್ರಶಸ್ತಿ ಪ್ರಧಾನ ಸಮಾರಂಭವನ್ನು ಉದ್ಘಾಟನೆ ಮಾಡಿ ಪ್ರಶಸ್ತಿ ಪ್ರಧಾನ ಮಾಡಿ ನಂತರ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದರು.

ಸಿದ್ದರಾಮಯ್ಯ ಅವರ ಕಾರಿನ ಮೇಲೆ ಕಾಗೆ ಕುಳಿತಿದ್ದಕ್ಕೆ ಮುಖ್ಯಮಂತ್ರಿ ಸ್ಥಾನ ಕಳೆದುಕೊಳ್ಳುತ್ತಾರೆ ಅಂತ ಪುರೋಹಿತ ಹೇಳಿದರು. ಬಜೆಟ್ ಮಂಡನೆ ಮಾಡಲ್ಲ ಅಂತ ಟಿ.ವಿ ಚಾನಲ್ ನಲ್ಲಿ ಕುಳಿತು ಪುರೋಹಿತ ಹೇಳಿದರು. ಹೇಳಿದ ಮೇಲೆ ಬಜೆಟ್ ಮಂಡನೆ ಮಾಡಿದೆ. 2 ವರ್ಷ ಮುಖ್ಯಮಂತ್ರಿಯಾಗಿ ಆದೆ. ಈಗ ಎರಡೂವರೆ ವರ್ಷದಿಂದ ಮುಖ್ಯ ಮಂತ್ರಿಯಾಗಿದ್ದೇನೆ. ನಮ್ಮ ಮನೆಯವರು ಈ ಅಮಾವಾಸ್ಯೆ ರಾಹುಕಾಲ ಎಲ್ಲಾವನ್ನು ನಂಬುತ್ತಾರೆ. ಕೆಲವು ಜನರನ್ನು ಯಾಕಪ್ಪ ವಿದ್ಯೆ ಇಲ್ಲ, ಊಟ ಇಲ್ಲ ಅಂತ ಕೇಳಿದರೆ ಹಿಂದಿನ ಜನ್ಮದಲ್ಲಿ ಪಾಪ ಮಾಡಿದ್ದೆ ಅಂತ ಹೇಳುತ್ತಾರೆ. ಹಿಂದಿನ ಜನ್ಮನು ಇಲ್ಲ ಯಾವ ಜನ್ಮನೂ ಇಲ್ಲ ಈಗ ಏನು ಮಾಡುತ್ತೀವಿ ಅಷ್ಟೆ ಎಂದರು.

ಕರ್ನಾಟಕದಲ್ಲಿ ಮೂರು ಲಕ್ಷದ 88 ಸಾವಿರ ವಿದ್ಯಾರ್ಥಿಗಳು ಹಾಸ್ಟೆಲ್ ನಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ದಲಿತ ವಿದ್ಯಾರ್ಥಿಗಳಿಗೆ ಹಿಂದುಳಿದ ವಿದ್ಯಾರ್ಥಿಗಳಿಗೆ ನಮ್ಮ ಸರ್ಕಾರ ಯಾವತ್ತು ಸಹಾಯ ಮಾಡುತ್ತೆ. ದೇವರಾಜ್ ಅರಸು ಹಿಂದುಳಿದ ವರ್ಗದವರಿಗೆ ಶಕ್ತಿ ತುಂಬುವ ಕೆಲಸ ಮಾಡಿದರು. ನಾನು ಈ ಹಿಂದೆ ಅನೇಕ ಭಾಗ್ಯಗಳನ್ನು ನೀಡಿದ್ದೇನೆ. ಯಾಕೆಂದರೆ ಬಡವರಿಗೆ ಶಕ್ತಿ ತುಂಬುವ ಉದ್ದೇಶದಿಂದ ಮಾಡಿದ್ದೇನೆ. ಅಸಮಾನತೆ ಹೋಗದೆ ಇದ್ದರೆ ಜಾತಿ ವ್ಯವಸ್ಥೆ ಹೋಗುವದಿಲ್ಲ. ನಾವು ಸ್ವಾಭಿಮಾನ ಬೆಳಸಿಕೊಳ್ಳಬೇಕೆ ಹೊರತು ಗುಲಾಮಗಿರಿಯನ್ನು ಬೆಳೆಸಿಕೊಳ್ಳಬಾರದು. ಮೇಲ್ಜಾತಿ ಅವರು ಬಡವರಾಗಿದ್ದರೂ ಅವರನ್ನು ಸ್ವಾಮಿ,ಬುದ್ದಿ ಅಂತ ಮಾತನಾಡಿಸುತ್ತೇವೆ. ಒಬ್ಬ ದಲಿತ ಶ್ರೀಮಂತನಾಗಿದ್ದರೂ, ವಿದ್ಯಾವಂತನಾಗಿದರೂ ಅವನ್ನು ಏಕವಚನದಲ್ಲಿ ಮಾತನಾಡಿಸುತ್ತಾರೆ ಎಂದರು.

ಎಲ್ಲರೂ ಕೂಡ ಅವಕಾಶ ಸಿಕ್ಕಾಗ ಸಮಾಜದ ಋಣ ತೀರಿಸುವ ಕೆಲಸವನ್ನು ಮಾಡಬೇಕು. ಅದರಲ್ಲೂ ಹಾಸ್ಟೆಲ್ ವಿದ್ಯಾರ್ಥಿಗಳು ಸಮಾಜದ ಋಣ ತೀರಿಸಲೇಬೇಕು. ಕರ್ನಾಟಕದಲ್ಲಿ ಕನ್ನಡದಲ್ಲೆ ಮಾತನಾಡುತ್ತೇನೆ ಅಂತ ಎಲ್ಲರೂ ಶಪಥ ಮಾಡಬೇಕು. ಬೆಂಗಳೂರಿಗೆ ಹೋದರೆ ನಾವು ಕರ್ನಾಟಕದಲ್ಲಿ ಇದ್ದಿವೋ ಬೇರೆ ರಾಜ್ಯದಲ್ಲಿದೇವಾ ಅನ್ನೋ ರೀತಿ ಇದೆ. ರಾಜ್ಯದಲ್ಲಿ ಏಕೀಕರಣಕ್ಕೆ ಬಹಳ ಜನ ಹೋರಾಟ ಮಾಡಿದ್ದಾರೆ ಅವರನ್ನು ಸ್ಮರಿಸೋಣ. ನನಗೆ ಈಗ 79 ವರ್ಷ 4 ತಿಂಗಳು ಅಗಿದೆ. ನಾನಂತೂ ನೂರು ವರ್ಷ ಬದುಕುತ್ತೇನೆ. ಅದೇ ರೀತಿ ರವಿವರ್ಮ ಕೂಡ ಹೆಚ್ಚು ವರ್ಷ ಬದುಕಲಿ. ಗಾಂಧೀಜಿಗೆ ಒಬ್ಬರು ಪತ್ರ ಬರೆದಿದ್ದರು, 100 ವರ್ಷ ಬದುಕಿ ಅಂತ ಹೇಳಿದರು. ನಾನು 125 ವರ್ಷ ಬದುಕಬೇಕು ಅಂತಿದ್ದೇನೆ ಅಂತ ಗಾಂಧಿ ಉತ್ತರ ಕೊಟ್ಟಿದ್ದರು. ನಾನು 100 ವರ್ಷ ಬದುಕುತ್ತೇನೆ ಎಂದು ನಗುತ್ತಾ ಸಿಎಂ ಸಿದ್ದರಾಮಯ್ಯ ಭಾಷಣ ಮುಗಿಸಿದರು.

ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ.ಮಹದೇವಪ್ಪ ಮಾತನಾಡಿ, ಮೈಸೂರು ಜಿಲ್ಲೆಯಲ್ಲಿ ಎರಡು ಹಾಸ್ಟೆಲ್ ಇದ್ದವು. ನೀವು, ನಾವು ಪಟ್ಟಂತ ಕಷ್ಟಕ್ಕಿಂತ ಅಂಬೇಡ್ಕರ್ ಪಟ್ಟ ಕಷ್ಟವನ್ನು ನಾವು ಅರ್ಥ ಮಾಡಿಕೊಳ್ಳಬೇಕು. ಎಲ್ಲರೂ ಮಲಗಿದ ಬಳಿಕ ಓದಿ ಪ್ರಪಂಚದ ಜ್ಞಾನಿ ಎಂದು ಕರೆಸಿಕೊಂಡು ಎಂಬುದು ನಮ್ಮೆಲ್ಲರ ಗಮನದಲ್ಲಿರಬೇಕು. ಸಾಮಾಜಿಕ ಬದ್ಧತೆ, ಸಾಮಾಜಿಕ ಧ್ವನಿಯಾಗಿ ರವಿವರ್ಮಕುಮಾರ್ ಇರುವುದು ಎಲ್ಲರಿಗೂ ಗೊತ್ತಿದೆ. ಸಿಎಂ ಸಿದ್ದರಾಮಯ್ಯ ವಕೀಲರಾಗಿ ಹೋರಾಟದ ಮೂಲಕ ಸಿಎಂ ಆಗಿ ಪ್ರಾಮಾಣಿಕತೆಯನ್ನು ಉಳಿಸಿಕೊಂಡಿದ್ದಾರೆ. ನೈತಿಕತೆಗಳು ಕುಸಿಯುತ್ತಿರುವ ಕಾಲದಲ್ಲಿ ನೈತಿಕತೆ, ಬದ್ಧತೆಯುಳ್ಳ ವ್ಯಕ್ತಿ ನಮ್ಮೊಟ್ಟಿಗಿದ್ದಾರೆಂದರೆ ಅದು ಸಿದ್ದರಾಮಯ್ಯನವರಾಗಿದ್ದಾರೆ ಎಂದರು.

ಸಾಮಾಜಿಕ ನ್ಯಾಯದ ಮೂಲಕ ಋಣ ಮುಕ್ತ ಕಾಯಿದೆಯಂತಹ ಸಾಮಾಜಿಕ ನ್ಯಾಯವನ್ನು ಡಿ.ದೇವರಾಜ ಅರಸು ಅವರು ಹಿಂದುಳಿದ ವರ್ಗಕ್ಕೆ ಗಟ್ಟಿ ಧ್ವನಿಯಾಗುವ ನಿಲುವು ಕೈಗೊಂಡರು. ಈಗ ಹಿಂದುಳಿದ ಆಯೋಗದ ಮೂಲಕ ಸಾಮಾಜಿಕ, ಶೈಕ್ಷಣಿಕ, ಆರ್ಥಿಕವಾಗಿ ಸೌಲಭ್ಯ ಸಿಗಬೇಕೆಂದು ಸಂವಿಧಾನದಲ್ಲಿ ಹೇಳಿರುವಂತೆಯೇ ಹಿಂದುಳಿದ ವರ್ಗಗಳ ಆಯೋಗಕ್ಕೆ ಸಮೀಕ್ಷೆ ನಡೆಸಲು ಸಿದ್ದರಾಮಯ್ಯ ಮುಂದಾಗಿದ್ದಾರೆ. ಸಂವಿಧಾನದ ಆಶಯ ಜಾರಿಗೆ ಸಾಕಷ್ಟು ಸವಾಲು ಹೆದರಿಸಬೇಕಾಗಿದೆ. ಇದನ್ನು ಸಿಎಂ ಸಿದ್ದರಾಮಯ್ಯ ಹೆದರಿಸುತ್ತಿದ್ದಾರೆಂದು. ಸಿದ್ದರಾಮಯ್ಯನಂತಹ ನಾಯಕ ಇಲ್ಲದಿದ್ದರೆ ಮೊರಾಜಿ ದೇಸಾಯಿ ರೆಸಿಡೆನ್ಸಿ ಶಾಲೆಯಲ್ಲಿ 180ರಲ್ಲಿ 20 ಸಾವಿರಕ್ಕೂ ಹೆಚ್ಚು ಮಂದಿ ವಿದ್ಯಾರ್ಥಿಗಳು ಓದುತ್ತಿದ್ದಾರೆಂದು ಹೇಳಿದರು.

ಶಾಸಕರಾದ ಡಿ.ರವಿಶಂಕರ್, ವಿಧಾನ ಪರಿಷತ್ ಸದಸ್ಯರಾದ ಡಾ.ಡಿ.ತಿಮ್ಮಯ್ಯ, ಕೆ.ಶಿವಕುಮಾರ್, ಜಿಲ್ಲಾ ಬಿ.ಸಿ.ಎಂ ವಿದ್ಯಾರ್ಥಿನಿಲಯಗಳ ಅಧ್ಯಕ್ಷ ಬಿ.ಶಿವಸ್ವಾಮಿ ಇನ್ನಿತರರು ಉಪಸಿತರಿದರು.

> ಮುಖ್ಯಮಂತ್ರಿ ಸಿದ್ದರಾಮಯ್ಯನವರ ನಾಯಕತ್ವ ರಾಜ್ಯಕ್ಕೆ ಮತ್ತು ದೇಶಕ್ಕೆ ಅಗತ್ಯ ಮತ್ತು ಅನಿವಾರ್ಯ. ಆ ನಾಯಕತ್ವವನ್ನು ಗಟ್ಟಿ ಹಾಗೂ ಬಲಗೊಳಿಸುವುದು ನಮ್ಮೆಲ್ಲರ ಆದ್ಯ ಕರ್ತವ್ಯ. ಇಂತಹ ಸಾಂಸ್ಕೃತಿಕ ನಾಯಕತ್ವವನ್ನು ಗಟ್ಟಿಗೊಳಿಸಲು ತಾವೆಲ್ಲರೂ ಶ್ರಮವಹಿಸಿ.
>
> **ಡಾ.ಎಚ್.ಸಿ.ಮಹದೇವಪ್ಪ** ಜಿಲ್ಲಾ ಸಚಿವ

# 26ರಂದು ಸಂವಿಧಾನ ಪೀಠಿಕೆ ಫಲಕ ಅನಾವರಣ

## ನಗರಸಭೆಯ ಕಾರ್ಯಕ್ಕೆ ವ್ಯಾಪಕ ಶ್ಲಾಘನೆ । ರಾಜ್ಯದಲ್ಲೇ ಮಾದರಿ ಕ್ರಮ

ರಾಮನಗರ: ಇಂದು ಸಂವಿಧಾನವನ್ನು ಬದಲಿಸುವ ಮಾತುಗಳು ಕೇಳುತ್ತಿದ್ದೇವೆ. ಸರ್ವಾಧಿಕಾರದ ನೆರಳಿನಲ್ಲಿರುವ ಭಾಸವಾಗುತ್ತಿದೆ. ಕಲುಷಿತ ವಾತಾವರಣ ನಿರ್ಮಾಣವಾಗುತ್ತಿದೆ. ಸಂವಿಧಾನದ ಪ್ರಸ್ತುತತೆ ಕಾಡುತ್ತಿದೆ. ಪರಿಸ್ಥಿತಿ ಹೀಗಿರುವಾಗ ನಾಗರೀಕರು ತಮಗೆ ಇರುವ ಹಕ್ಕು–ಬಾಧ್ಯತೆಗಳನ್ನು ತಿಳಿದುಕೊಳ್ಳಬೇಕಾಗಿದೆ. ಈ ಹಿನ್ನೆಲೆಯಲ್ಲಿ ನಗರಸಭೆಯ ಆವರಣದಲ್ಲಿ ಸಂವಿಧಾನ ಪೀಠಿಕೆಯ ಫಲಕವನ್ನು ಸ್ಥಾಪಿಸಲಾಗುತ್ತಿದೆ ಎಂದು ನಗರಸಭಾಧ್ಯಕ್ಷ ಕೆ.ಶೇಷಾದ್ರಿ ತಿಳಿಸಿದರು.

ನ.26ರ ಬುಧವಾರ ಸಂವಿಧಾನ ಪೀಠಿಕೆಯ ಫಲಕವನ್ನು ಅನಾವರಣಗೊಳಿಸುತ್ತಿರುವ ಹಿನ್ನೆಲೆ



ಯಲ್ಲಿ ನಡೆದ ಸಾರ್ವಜನಿಕರ ಪೂರ್ವಭಾವಿ ಸಭೆಯ ನೇತೃತ್ವವಹಿಸಿ ಅವರು ಮಾತನಾಡಿದರು. ಸಂವಿಧಾನದ ಆಶಯಗಳನ್ನು ಸಾರ್ವಜನಿಕರಿಗೆ ತಿಳಿಸಿಕೊಡುವ ಅಗತ್ಯವಿದೆ. ಹೀಗಾಗಿ ನಗರಸಭೆಯಲ್ಲಿ ಸಂವಿಧಾನ ಪೀಠಿಕೆಯ ಫಲಕ ಅಳವಡಿಸಲಾಗುತ್ತಿದೆ. ಫಲಕ 3ಡಿ ಎಫೆಕ್ಟ್ ಇರಲಿದೆ. ಜೊತೆಗೆ ಸಂವಿಧಾನ ಕತೃ ಡಾ.ಬಿ.ಆರ್.ಅಂಬೇಡ್ಕರ್ ಅವರ ಚಿಕ್ಕದಾದ ಮೂರ್ತಿಯನ್ನು ಸ್ಥಾಪಿಸಲಾಗುತ್ತಿದೆ ಎಂದರು.

ಸಂವಿಧಾನ ಪೀಠಿಕೆಯ ಫಲಕವನ್ನು ಸ್ಥಾಪಿಸುತ್ತಿರುವ ನಗರಸಭೆಯ ಕಾರ್ಯ ಬಹುಶಃ ರಾಜ್ಯದಲ್ಲಿ ಮಾದರಿಯಾಗಲಿದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದ ಅವರು, ನ.26ರಂದು ಭಾರತೀಯರಾದ ನಾವು ಸಂವಿಧಾನವನ್ನು ಅಂಗೀಕರಿಸಿ, ಶಾಸನವನ್ನು ನಮಗೆ ನಾವೇ ವಿಧಿಸಿಕೊಂಡ ದಿನವಾಗಿದೆ. ಹೀಗಾಗಿ ನ.26ರಂದೇ ಸಂವಿಧಾನ ಪೀಠಿಕೆಯ ಫಲಕವನ್ನು ಅಳವಡಿಸಲು ಉದ್ದೇಶಿಸಿದೆ ಎಂದರು.

### ಸಂವಿಧಾನ ಎಲ್ಲರಿಗೂ ಪವಿತ್ರ ಗ್ರಂಥ: ಅನಸೂಯಮ್ಮ

**ರೈತ ಮಹಿಳೆ ಅನಸೂಯಮ್ಮ ಮಾತನಾಡಿ, ಸಂವಿಧಾನ ಭಾರತೀಯರೆಲ್ಲರಿಗೂ ಪವಿತ್ರವಾದ ಗ್ರಂಥ. ಸಂವಿಧಾನದ ಆಶಯಗಳನ್ನು ಇಂದಿನ ಮಕ್ಕಳು ಮತ್ತು ಯುವ ಸಮುದಾಯದಲ್ಲಿ ಅರಿವು ಮೂಡಿಸುವ ಅಗತ್ಯವಿದೆ. ಹೀಗಾಗಿ ಸಂವಿಧಾನ ಸಮಿತಿಯನ್ನು ರಚಿಸಿ ಶಾಲಾ–ಕಾಲೇಜುಗಳಿಗೆ ತೆರಳಿ ಸಂವಿಧಾನದ ಬಗ್ಗೆ ಅರಿವು ಮೂಡಿಸಬೇಕು ಎಂದು ಸಲಹೆ ನೀಡಿದರು. ನಗರಸಭೆಯು ಸಂವಿಧಾನ ಪೀಠಿಕೆಯ ಫಲಕವನ್ನು ಅಳವಡಿಸುತ್ತಿರುವುದನ್ನು ಅವರು ಶ್ಲಾಘಿಸಿದರು.**

### ಬದುಕುವ ಹಕ್ಕು ನೀಡಿದೆ–ಪುಟ್ಟಸ್ವಾಮಿ

**ರೈತ ಮುಖಂಡ ಪುಟ್ಟಸ್ವಾಮಿ ಮಾತನಾಡಿ ಸಂವಿಧಾನ ತಾವು ಸೇರಿದಂತೆ ಎಲ್ಲ ದೇಶವಾಸಿಗಳಿಗೆ ಬದುಕುವ ಹಕ್ಕು ನೀಡಿದೆ. ಸಂವಿಧಾನವನ್ನು ಸುಲಭವಾಗಿ ಅರ್ಥೈಸಿಕೊಳ್ಳುವ ಕೈಪಿಡಿಗಳನ್ನು ನಾಗರೀಕರಿಗೆ ವಿತರಿಸಲು ನಗರಸಭೆಯ ಅಧ್ಯಕ್ಷರಿಗೆ ಸಲಹೆ ನೀಡಿದರು.**

ದೇಶದಲ್ಲಿ ಕೆಲವು ಪಟ್ಟಭದ್ರ ಹಿತಾಸಕ್ತಿಗಳು ಜಾತಿ, ಕೋಮಿನ ಪರವಾಗಿದ್ದಾರೆ. ಇದು ಕೂಡದು. ಸಂವಿಧಾನ ದೇಶವಾಸಿಗಳೆಲ್ಲರಿಗೂ ಸಮಾನತೆಯನ್ನು ಸಾರಿದೆ. ಭ್ರಾತೃತ್ವವನ್ನು ಬೋಧಿಸಿದೆ. ಸಂವಿಧಾನದಲ್ಲಿ ಅಡಕವಾಗಿರುವ ವಿಚಾರಗಳನ್ನು ಸಮಸ್ತ ನಾಗರೀಕರು ಅರಿತಿರಬೇಕು. ಸಂವಿಧಾನ

### ಸಂವಿಧಾನ ದಿನ ಆಚರಣೆಯ ಶ್ಲಾಘನೆ

**ಯುವ ಮುಖಂಡ ಹರೀಶ್ ಮಾತನಾಡಿ, ದೇಶವನ್ನಾಳಿದ ಯಾವ ಸರ್ಕಾರವೂ ಸಂವಿಧಾನ ವನ್ನು ತಿಳಿದುಕೊಳ್ಳುವಂತೆ ತಿಳಿಹೇಳಲಿಲ್ಲ. ಹಾಲಿ ಪ್ರಧಾನಿ ಮೋದಿಯವರು ನ.26ರನ್ನು ಸಂವಿ ಧಾನ ದಿನ ಎಂದು ಘೋಷಿಸಿದರು. ತನ್ಮೂಲಕ ದೇಶವಾಸಿಗಳು ಸಂವಿಧಾನವನ್ನು ಅರಿಯಲು ಆರಂಭಿಸಿದರು. ರಾಜ್ಯದಲ್ಲಿ ಮುಖ್ಯ ಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಸಂವಿಧಾನ ದಿನವನ್ನು ಪರಿಣಾಮಕಾರಿಯಾಗಿ ಜಾರಿ ಮಾಡುತ್ತಿದೆ. ಎಲ್ಲ ನಿವಾಸಿಗಳು ಸಂವಿಧಾನದ ಆಶಯಗಳನ್ನು ಪಾಲಿಸಲು ಪ್ರೋತ್ಸಾಹಿಸುತ್ತಿದ್ದಾರೆ ಎಂದರು. ನಗರಸಭೆಯ ಪ್ರಯತ್ನವನ್ನು ಅವರು ಸ್ವಾಗತಿಸಿದರು.**

ಪೀಠಿಕೆಯ ಮೂಲಕ ಸಂವಿಧಾನದ ಆಶಯಗಳ ಬಗ್ಗೆ ಜಾಗೃತಿ ಮೂಡಿಸುವ ಉದ್ದೇಶ ನಗರಸಭೆಯದ್ದು ಎಂದರು. ದಸಂಸ ಒಕ್ಕೂಟದ ಜಿಲ್ಲಾಧ್ಯಕ್ಷ ಶಿವಕುಮಾರಸ್ವಾಮಿ, ಸಮತಾ ಸೈನಿಕ ದಳದ ಮುಖಂಡ ಜಿ.ಗೋವಿಂದಯ್ಯ ಮಾತನಾಡಿ ನಗರಸಭೆಯ ಆವರಣದಲ್ಲಿ ಸಂವಿಧಾನ ಪೀಠಿಕೆ ಫಲಕವನ್ನು ಸ್ಥಾಪಿಸುತ್ತಿರುವುದರ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. ನಗರಸಭೆಯ ಉಪಾಧ್ಯಕ್ಷೆ ಆಯಿಷಾ ಬಾನು, ಸ್ಥಾಯಿ ಸಮಿತಿ ಅಧ್ಯಕ್ಷ ಫೈರೋಜ್ ಪಾಷ, ಆಯುಕ್ತ ಡಾ.ಜಯಣ್ಣ, ನಗರಸಭಾ ಸದಸ್ಯರುಗಳು, ಸಂಘ ಸಂಸ್ಥೆಗಳ ಪದಾಧಿಕಾರಿಗಳು ಹಾಜರಿದ್ದರು.

# ಶವದ ಮರಣೋತ್ತರ ಪರೀಕ್ಷೆ

ಚಾಮರಾಜನಗರ: ಜಿಲ್ಲೆಯ ಹನೂರು ಪಟ್ಟಣದ 11ನೇ ವಾರ್ಡಿನ ನಿವಾಸಿ 5 ದಿನದ ಹಿಂದೆ ಮೃತಪಟ್ಟ ಕೃಷ್ಣೇಗೌಡರ ದೇಹವನ್ನು ಶುಕ್ರವಾರ ತಹಸೀಲ್ದಾರ್ ಕೆ.ಎನ್. ಚೈತ್ರಾ ಅವರ ಸಮ್ಮುಖದಲ್ಲಿ ಸಮಾಧಿಯಿಂದ ಹೊರತೆಗೆದು ಮರಣೋತ್ತರ ಪರೀಕ್ಷೆಗೆ ಒಳಪಡಿಸಲಾಗಿದೆ. ನಂತರ, ನಿಯಮಾನುಸಾರ ದೇಹವನ್ನು ಪುನಃ ಸಮಾಧಿ ಸ್ಥಳದಲ್ಲಿ ಹೊಳೆಲಾಗಿರುವ ಘಟನೆ ಜರುಗಿದೆ.

ಕೃಷ್ಣೇಗೌಡ ಅವರು ನವೆಂಬರ್ 15ರಂದು ರಾತ್ರಿ ಹನೂರು ಸಮೀಪದ ಎಲ್ಲೇಮಾಳ ಗ್ರೀನ್ ಕಾರ್ಪೆಟ್ ರೆಸಾರ್ಟ್‌ನಲ್ಲಿ ಮದುವೆ ಕಾರ್ಯಕ್ರಮಕ್ಕೆ ಹೋಗಿದ್ದು, ರಾತ್ರಿ 10:30ರ ವೇಳೆಗೆ ಹನೂರಿಗೆ ಮರಳಿದ್ದರು. ಭಾನುವಾರ ಬೆಳಗ್ಗೆ ತಮ್ಮ ಮನೆ ಸಮೀಪದ ರಸ್ತೆಯಲ್ಲಿ ಮೃತ ಸ್ಥಿತಿಯಲ್ಲಿ ಕಂಡು ಬಂದಿತ್ತು. ಆರಂಭದಲ್ಲಿ ಹೃದಯಾಘಾತದಿಂದ ಮೃತರಾಗಿರಬಹುದು ಎಂದು ತಿಳಿದು ಅಂತ್ಯ ಸಂಸ್ಕಾರ ನಡೆಸಲಾಗಿತ್ತು. ಆದರೆ, ಘಟನೆ ಬಗ್ಗೆ ಅನುಮಾನ ವ್ಯಕ್ತವಾದ ಹಿನ್ನೆಲೆಯಲ್ಲಿ ಅವರ ಸಹೋದರ ರಾಜುಗೌಡ ಕುಟುಂಬಕ್ಕೆ ನ್ಯಾಯ ಒದಗಿಸಲು ಹನೂರು ಪೊಲೀಸ್ ಠಾಣೆಯಲ್ಲಿ



ದೂರು ನೀಡಿದ್ದರು. ಈ ಹಿನ್ನಲೆ

ಕೃಷ್ಣೇಗೌಡರ ದೇಹವನ್ನು ಶುಕ್ರವಾರ ತಹಸೀಲ್ದಾರ್ ಕೆ.ಎನ್. ಚೈತ್ರಾ ಅವರ ಸಮ್ಮುಖದಲ್ಲಿ ಪಟ್ಟಣ ಪೊಲೀಸ್ ಠಾಣೆಯ ಇನ್ಸ್ಪೆಕ್ಟರ್ ಆನಂದಮೂರ್ತಿ ನೇತೃತ್ವದಲ್ಲಿ ಸಮಾಧಿಯಿಂದ ನೇತೃತ್ವದಲ್ಲಿಹೊರತೆಗೆದು ಮರಣೋತ್ತರ ಪರೀಕ್ಷೆಗೆ ಒಳಪಡಿಸಲಾಗಿದೆ. ಈ ಪ್ರಕರಣ ಸಂಬಂಧ ಹನೂರು ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

# ಸೆ.26ಕ್ಕೆ ಬೆಂಗಳೂರು ಚಲೋ



ಮೈಸೂರು: ಜನಸಾಮಾನ್ಯರು, ರೈತರು ಹಾಗೂ ಕಾರ್ಮಿಕರು ಎದುರಿಸುತ್ತಿರುವ ಜ್ವಲಂತ ಸಮಸ್ಯೆಗಳ ಬಗ್ಗೆ ರಾಜ್ಯ ಸರ್ಕಾರದ ಗಮನ ಸೆಳೆಯಲು ನ. 26 ರಂದು ಬೃಹತ್ ಬೆಂಗಳೂರು ಚಲೋ ಹಮ್ಮಿಕೊಳ್ಳಲಾಗಿದೆ. ಇದರಲ್ಲಿ ಜಿಲ್ಲೆಯಿಂದಲೂ ಸುಮಾರು ಸಾವಿರ ಮಂದಿ ಪಾಲ್ಗೊಳ್ಳಲಿದ್ದಾರೆಂದು ಕಾರ್ಮಿಕ ಮುಖಂಡ ಜಗದೀಶ್ ಸೂರ್ಯ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ರಾಜಕಾರಣಿಗಳಿಗೆ ಕುರ್ಚಿಯ ಚಿಂತೆಯಾಗಿದೆ. ಹಣವಂತರಿಗೆ ಆಸ್ತಿ ಚಿಂತೆ, ಆದರೆ ದುಡಿಯು ವವರಿಗೆ ಅನ್ನ, ಸೂರಿನ ಚಿಂತೆ ಕಾಡುತ್ತಿದೆ. ಈ ಬಗ್ಗೆ ಕೇಂದ್ರವಾಗಲೀ, ರಾಜ್ಯ ಸರ್ಕಾರವಾಗಲೀ ಗಮನ ಹರಿಸಿಲ್ಲ. ಹೀಗಾಗಿ ಅಂದು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ನಡೆಯುವ ಸಮಾವೇಶದಲ್ಲಿ ರಾಜ್ಯದ ವಿವಿಧೆಡೆಯಿಂದ ಸುಮಾರು 50 ಸಾವಿರ ಮಂದಿ ಪಾಲ್ಗೊಳ್ಳಲಿದ್ದಾರೆಂದರು. ರೈತ ಸಂಘದ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ ಮಾತನಾಡಿ, ಬಗರ್‌ಹುಕುಂ ಸಮಸ್ಯೆ, ವಸತಿ ಸಮಸ್ಯೆ, ವಿದ್ಯುತ್ ಮೀಟರ್ ಅಳವಡಿಕೆಯ ಸಂಕಷ್ಟಗಳು ಅಂದಿನ ಪ್ರಮುಖ ವಿಷಯಗಳಾಗಿವೆ. ಈ ಕುರಿತು ಸರ್ಕಾರದ ಎಲ್ಲ ಪ್ರಮುಖರಿಗೂ ಮಾಹಿತಿ ನೀಡಿದ್ದು, ಅಂದು ಅವರು ಫ್ರೀಡಂ ಪಾರ್ಕ್ಗೆ ಆಗಮಿಸಿದಾಗ ಅಹವಾಲು ಸಲ್ಲಿಸಲಾಗುವುದು ಎಂದರು. ಪಿ. ಮರಂಕಯ್ಯ, ಕಂದೇಗಾಲ ಶ್ರೀನಿವಾಸ್ ಹಾಜರಿದ್ದರು.

# ಮೇಕೆಗೆ ಶಸ್ತ್ರಚಿಕಿತ್ಸೆ ಮೂಲಕ ಹೆರಿಗೆ

ಚಾಮರಾಜನಗರ, ಹನೂರು ಪಟ್ಟಣದ ಪಶು ಆಸ್ಪತ್ರೆಯಲ್ಲಿ ಪ್ರಸವ ವೇದನೆಯಿಂದ ಬಳಲುತ್ತಿದ್ದ ಮೇಕೆಯೊಂದನ್ನು ಶಸ್ತ್ರಚಿಕಿತ್ಸೆ ಮೂಲಕ ಮರಿಯನ್ನು ಹಾಗೂ ತಾಯಿ ಮೇಕೆಯನ್ನು ಪಶು ವೈದ್ಯರು ರಕ್ಷಣೆ ಮಾಡಿರುವ ಘಟನೆ ಗುರುವಾರ ನಡೆದಿದೆ.



ತಾಲೂಕಿನ ಕೆ ಗುಂಡಾಪುರ ಗ್ರಾಮದ ವಡಿವೇಲು ಎಂಬಾತನಿಗೆ ಸೇರಿದ ಮೇಕೆ ಪ್ರಸವ ವೇದನೆಯಿಂದ ಬಳಲುತ್ತಿದ್ದನ್ನು ಆಸ್ಪತ್ರೆಗೆ ಮೇಕೆಯನ್ನು ಕರೆತಂದ ಬಳಿಕ ಶಸ್ತ್ರಚಿಕಿತ್ಸೆಯನ್ನು ಮಾಡುವುದರ ಮೂಲಕ ಮರಿಯನ್ನ ಹೊರ ತೆಗೆದಿದ್ದಾರೆ.

ಮುಖ್ಯ ಪಶುವೈದ್ಯಾಧಿಕಾರಿ ಡಾ ಸಿದ್ದರಾಜು ಆಸ್ಪತ್ರೆಗೆ ಕರೆತಂದ ಮೇಕೆಯನ್ನು ಆಸ್ಪತ್ರೆಯಲ್ಲಿ ಶಸ್ತ್ರ ಚಿಕಿತ್ಸೆ ನಡೆಸಿದ್ದಾರೆ. ಇತ್ತಿಚ್ಚಿನ ದಿನಗಳಲ್ಲಿ ವಿವಿಧ ರೋಗಗಳಿಗೆ ತುತ್ತಾಗಿ ಬಳುತ್ತಿರುವ ಹಲವು ಜಾನುವಾರುಗಳಿಗೆ ಪಶುವಾಧ್ಯಧಿಕಾರಿ ಡಾ.ಸಿದ್ದರಾಜುರವರು ಖುದ್ದಾಗಿ ತೆರಳಿ ಶಸ್ತ್ರಚಿಕಿಸಿದ ಮಾಡುವ ಮುಖೇನ ರೈತರಿಗೆ ನೆರವಾಗುತ್ತಿದ್ದಾರೆ ಅದರಂತೆ ಪಶು ವೈದ್ಯಾಧಿಕಾರಿಗಳ ಕಾರ್ಯಕ್ಕೆ ಸ್ಥಳೀಯರು ಹಾಗು ರೈತರು ಪ್ರಶಂಸೆಯನ್ನು ಕೂಡ ವ್ಯಕ್ತಪಡಿಸಿದ್ದರು.

**ಹುಟ್ಟೂರು ಬೂಕನಕೆರೆಗೆ ಭೇಟಿ**

# ಸಿದ್ದಲಿಂಗೇಶ್ವರಸ್ವಾಮಿಗೆ ಬಿಎಸ್‌ವೈ ವಿಶೇಷ ಪೂಜೆ

ಕೆ.ಆರ್.ಪೇಟೆ: ಕರ್ನಾಟಕ ಸರ್ಕಾರದ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ತಮ್ಮ ಹುಟ್ಟೂರು ಕೆ.ಆರ್.ಪೇಟೆ ತಾಲ್ಲೂಕಿನ ಬೂಕನಕೆರೆ ಗ್ರಾಮಕ್ಕೆ ರಾಜ್ಯದ ಮಾಜಿ ಸಿಎಂ ಯಡಿಯೂರಪ್ಪ ಭೇಟಿ ನೀಡಿ, ಗ್ರಾಮದೇವತೆ ಗೋಗಾಲಮ್ಮ ಹಾಗೂ ಮನೆದೇವರು ಅಕ್ಕಯ್ಯಮ್ಮ, ಕಾಪನಹಳ್ಳಿ ಶ್ರೀ ಸ್ವತಂತ್ರ ಸಿದ್ದಲಿಂಗೇಶ್ವರ ಸ್ವಾಮಿಯವರ ಗದ್ದುಗೆಗೆ ಕಾರ್ತೀಕ ಅಮಾವಾಸ್ಯೆಯ ವಿಶೇಷ ಪೂಜೆ ಸಲ್ಲಿಸಿದರು.

ಯಡಿಯೂರಪ್ಪ ಅವರು ಪುತ್ರಿಯರಾದ ಉಮಾದೇವಿ, ಅರುಣಾದೇವಿ ಹಾಗೂ ಸೊಸೆ ಪ್ರೇಮಾವಿಜಯೇಂದ್ರ ಅವರೊಂದಿಗೆ ಆಗಮಿಸಿ ಕಾರ್ತೀಕ ಮಾಸದ ಅಮಾವಾಸ್ಯೆಯ ವಿಶೇಷ ಪೂಜೆ ಸಲ್ಲಿಸಿ ಗ್ರಾಮಸ್ಥರು ಹಾಗೂ ಶಾಸಕರಾದ ಹೆಚ್.ಟಿ.ಮಂಜು ಅವರು ನೀಡಿದ ಅಭಿನಂದನೆಯನ್ನು ಸ್ವೀಕರಿಸಿದರು. ಈ



ಸಂದರ್ಭದಲ್ಲಿ ಶಾಸಕ ಹೆಚ್.ಟಿ.ಮಂಜು, ಕೆ.ಎಂ.ಎಫ್ ನಿರ್ದೇಶಕ ಸಿಂಧುಘಟ್ಟ ಅಶೋಕ್, ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಕೆ.ಶ್ರೀನಿವಾಸ್, ಸಮಾಜ ಸೇವಕ ಆರ್.ಟಿ.ಓ.ಮಲ್ಲಿಕಾರ್ಜುನ್, ತಾಲ್ಲೂಕು ಬಿಜೆಪಿ ಅಧ್ಯಕ್ಷ ಸಾರಂಗಿ ನಾಗಣ್ಣ, ಕಾರ್ಯದರ್ಶಿ ಚೋಕನಹಳ್ಳಿ ಪ್ರಕಾಶ್, ಬೂಕನಕೆರೆ ಗ್ರಾಮ ಪಂಚಾಯಿತಿ ಅಧ್ಯಕ್ಷ ಶ್ಯಾಂಪ್ರಸಾದ್, ತಾಲ್ಲೂಕು ಪಂಚಾಯಿತಿ ಮಾಜಿ ಸದಸ್ಯೆ ಮೀನಾಕ್ಷಿ ಪುಟ್ಟರಾಜು, ತಾ.ಪಂ.ಮಾಜಿ ಸದಸ್ಯರಾದ ಹೆಳವೇಗೌಡ, ಬಿ.ಜವರಾಯಿಗೌಡ, ಡಿಸಿಸಿ ಬ್ಯಾಂಕ್ ಮಾಜಿ ನಿರ್ದೇಶಕ ತೋಟಪ್ಪಶೆಟ್ಟಿ, ಭಾರತೀಪುರ ಪುಟ್ಟಣ್ಣ, ಮಾಜಿ ಸಚಿವ ನಾರಾಯಣಗೌಡರ ಆಪ್ತ ಸಹಾಯಕ ದಯಾನಂದ್, ವಕೀಲ ನಾಗೇಶ್, ತಾಲ್ಲೂಕು ವೀರಶೈವ ಮಹಾಸಭಾ ಅಧ್ಯಕ್ಷ ಸುಜೇಂದ್ರಕುಮಾರ್, ತಾಲ್ಲೂಕು ಬಿ.ಎಸ್. ಯಡಿಯೂರಪ್ಪ–ಬಿ.ವೈ.ವಿಜಯೇಂದ್ರ ಅಭಿಮಾನಿಗಳ ಬಳಗದ ಅಧ್ಯಕ್ಷ ಬೂಕನಕೆರೆ ಮಧುಸೂಧನ್, ಜ್ಞಾನಸಿಂಧು, ಅಂಗಡಿ ನಾಗರಾಜು, ಮತ್ತಿತರರು ಉಪಸ್ಥಿತರಿದ್ದರು. ಗೋಗಾಲಮ್ಮ ದೇವಾಲಯಕ್ಕೆ ಆಗಮಿಸಿದ ಯಡಿಯೂರಪ್ಪ ಅವರಿಗೆ ಬೂಕನಕೆರೆ ಗ್ರಾಮಸ್ಥರು ಪೂರ್ಣಕುಂಭದೊಂದಿಗೆ ಹೃದಯಸ್ಪರ್ಷಿ ಸ್ವಾಗತ ನೀಡಿದರು.

### ಹೈಟೆಕ್ ಆಸ್ಪತ್ರೆ ಮುಚ್ಚಿರುವುದು ಸರಿಯಲ್ಲ

**ತಾವು ಮುಖ್ಯಮಂತ್ರಿಯಾಗಿದ್ದ ವೇಳೆ ಸುಮಾರು 12 ಕೋಟಿ ರೂಪಾಯಿಗಳ ವೆಚ್ಚದಲ್ಲಿ ನಿರ್ಮಿಸಲಾಗಿರುವ ಹೈಟೆಕ್ ಆಸ್ಪತ್ರೆ, ಹೆರಿಗೆ ಆಸ್ಪತ್ರೆ, ಸ್ಕ್ಯಾನಿಂಗ್, ಎಕ್ಸರೇ ವಿಭಾಗಗಳನ್ನು ಮುಚ್ಚಿರುವ ಆರೋಗ್ಯ ಇಲಾಖೆಯ ವೈಖರಿಯನ್ನು ಯಡಿಯೂರಪ್ಪ ತೀವ್ರವಾಗಿ ಖಂಡಿಸಿದರು. ಕೆ.ಆರ್.ಪೇಟೆ ಸುಮಾರು 14ಕಿ.ಮೀ ದೂರದಲ್ಲಿದ್ದು ಹೋಬಳಿ ಕೇಂದ್ರವಾಗಿರುವ ಬೂಕನಕೆರೆ ಆಸ್ಪತ್ರೆಗೆ ತಿಂಗಳಿಗೆ ಸುಮಾರು ಆರೇಳು ಸಾವಿರ ರೋಗಿಗಳು ಬಂದು ಚಿಕಿತ್ಸೆ ಪಡೆದುಕೊಳ್ಳುತ್ತಿದ್ದರು. ಆದರೆ ರೋಗಿಗಳು ಬರುತ್ತಿಲ್ಲ ಎಂಬ ಕಾರಣ ನೀಡಿ ಮುಚ್ಚಿರುವುದರಿಂದ ಈ ಭಾಗದ ಸಾವಿರಾರು ಜನರಿಗೆ ತೊಂದರೆಯಾಗಿದೆ ಕೂಡಲೇ ಮುಚ್ಚಿರುವ 24/7 ಹೈಟೆಕ್ ಆಸ್ಪತ್ರೆಯನ್ನು ಪುನರ್ ಆರಂಭಿಸಲು ಆರೋಗ್ಯ ಇಲಾಖೆಯ ಎಂ.ಡಿ. ಹರ್ಷಗುಪ್ತ ಅವರೊಂದಿಗೆ ಮಾತನಾಡಿ ಸಮಸ್ಯೆಯನ್ನು ಬಗೆಹರಿಸಲು ಸೂಕ್ತ ಕ್ರಮ ವಹಿಸುವುದಾಗಿ ಯಡಿಯೂರಪ್ಪ ಬೂಕನಕೆರೆ ಗ್ರಾಮಸ್ಥರಿಗೆ ಭರವಸೆ ನೀಡಿದರು.**

## ಇಂದು ದಾನಿಗಳ ದಿನಾಚರಣೆ



ಮೈಸೂರು: ದಿವಾನ್ಸ್ ರಸ್ತೆಯ ಕುಂಚಿಟಿಗರ ಸಂಘದ ವತಿಯಿಂದ ನ.23ರ ಮಧ್ಯಾಹ್ನ 2ಕ್ಕೆ ದಾನಿಗಳ ದಿನಾಚರಣೆ, ಪ್ರತಿಭಾ ಪುರಸ್ಕಾರ ಹಾಗೂ ವಿದ್ಯಾರ್ಥಿ ವೇತನ ವಿತರಣಾ ಸಮಾರಂಭ ಆಯೋಜಿಸಲಾಗಿದೆ ಎಂದು ಅಧ್ಯಕ್ಷ ಸಿ.ಕೆ. ಗಣೇಶ್ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಶಾಸಕರಾದ ಟಿ.ಎಸ್. ಶ್ರೀವತ್ಸ, ಕೆ. ಹರೀಶ್‌ಗೌಡ, ದರ್ಶನ್ ಧ್ರುವನಾರಾರ್ಯನ ಅತಿಥಿಗಳಾಗಿರುವರು. ತಾವು ಅಧ್ಯಕ್ಷತೆ ವಹಿಸಲಿರುವುದಾಗಿ ಹೇಳಿದರು. ಇನ್ನಿತರ ಪದಾಧಿಕಾರಿಗಳಾದ ಪಿ. ಶಿವಕುಮಾರ್, ಸಿ. ಲೋಕೇಶ್, ಸುರೇಶ್, ಸತೀಶ್, ವಿ. ರವಿ, ಆರ್. ಉಮೇಶ್, ಚಂದ್ರು, ಶಿವಶಂಕರ್, ದಿನೇಶ್ ಹಾಜರಿದ್ದರು.

## ಇಂದು ಒಕ್ಕಲಿಗ ಮಹಿಳಾ ಸಂಘದ ಉದ್ಘಾಟನೆ



ಮೈಸೂರು:ಕರ್ನಾಟಕ ರಾಜ್ಯ ಒಕ್ಕಲಿಗ ಮಹಿಳಾ ಸಂಘದ ಮೈಸೂರು ಜಿಲ್ಲಾ ಘಟಕದ ಪದಾಧಿಕಾರಿಗಳ ಪದಗ್ರಹಣ ಸಮಾರಂಭ ನ. 23 ರ ಬೆಳಗ್ಗೆ 11.30ಕ್ಕೆ ಮಹಾಜನ ಕಾಲೇಜಿನ ಸ್ವಾಮಿ ವಿವೇಕಾನಂದ ಸಭಾಂಗಣದಲ್ಲಿ ನಡೆಯಲಿದೆ ಎಂದು ರಾಜ್ಯಾಧ್ಯಕ್ಷರಾದ ಆರ್. ಗೀತಾ ತಿಳಿಸಿದರು. ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಡಾ. ನಿಶ್ಚಲಾನಂದನಾಥ ಸ್ವಾಮೀಜಿ ಸಾನ್ನಿಧ್ಯ ವಹಿಸುವರು, ಡಾ.ಬಿ.ಆರ್. ಮಮತಾ ಉದ್ಘಾಟಿಸುವರು, ಡಾ.ಎಚ್.ಎಂ. ವೆಂಕಟಪ್ಪ ಲೋಗೋ ಬಿಡುಗಡೆಗೊಳಿಸುವರು, ಶಾಸಕ ಕೆ. ಹರೀಶ್‌ಗೌಡ, ಪ್ರತಾಪ್‌ಸಿಂಹ, ಸಾ.ರಾ. ಮಹೇಶ್, ನಾಗೇಂದ್ರ, ಮರಿತಿಬ್ಬೇಗೌಡ, ಡಾ.ಎಸ್.ಪಿ. ಯೋಗಣ್ಣ, ಎಚ್.ಎನ್. ವೆಂಕಟೇಶ್, ಎಸ್. ಲೋಕೇಶ್, ಎ.ಜೆ. ಸುಧೀರ್ ಇನ್ನಿತರರು ಅತಿಥಿಗಳಾಗಿರುವರು ಎಂದರು. ಮಹಿಳೆಯರ ರಾಜಕೀಐ, ಆರ್ಥಿಕ, ಸಾಮಾಜಿಕ ಉನ್ನತಿಗಾಗಿ ಈ ಸಂಘವನ್ನು ಸ್ಥಾಪಿಸಲಾಗಿದೆ. ಇದು ಒಕ್ಕಲಿಗ ಸಮುದಾಯದವರಿಗೆ ಮಾತ್ರವಲ್ಲ, ಇತರೆ ಸಮುದಾಯಗಳ ಎಲ್ಲ ಮಹಿಳೆಯರ ಪರ ಹೋರಾಟ ನಡೆಸಲಿದೆ ಎಂದರು. ರಾಜ್ಯ ಘಟಕದ ಗೌರವಾಧ್ಯಕ್ಷರಾದ ಸುಶೀಲಾ ನಂಜಪ್ಪ, ಟಿ. ಮೀನಾಕ್ಷಿ, ಟಿ.ಆರ್. ತನುಜಾ, ರಾಜೇಶ್ವರಿ, ಬಿ.ಆರ್. ನಾಗಮಣಿ ಇದ್ದರು.

## ಕುವೆಂಪು, ಕೆಂಪೇಗೌಡ ಜಯಂತಿ



ಕೆ.ಆರ್.ನಗರ: ಸಾಲಿಗ್ರಾಮ ತಾಲೋಕಿ ನ ಒಕ್ಕಲಿಗ ಸಮುದಾಯದ ವತಿಯಿಂದ ಮಾಜಿ ಸಚಿವ ಸಾರಾ ಮಹೇಶ್ ಅವರ ನೇತೃತ್ವದಲ್ಲಿ ವಿಶೇಷ ಮತ್ತು ವಿಭಿನ್ನವಾಗಿ ಕುವೆಂಪು ಜಯಂತಿ ಮತ್ತು ಕೆಂಪೇಗೌಡ ಜಯಂತಿಯನ್ನು ಆಚರಿಸಲಾಗುವುದು ಎಂದು ಸಾಲಿಗ್ರಾಮ ಮಾಜಿ ಗ್ರಾಮ ಪಂಚಾಯಿತಿ ಅಧ್ಯಕ್ಷ ವೈನ್ ನಟರಾಜ್ ತಿಳಿಸಿದರು.

ಪಟ್ಟಣದ ಲೋಕೋಪಯೋಗಿ ಇಲಾಖೆಯ ಪ್ರವಾಸಿ ಮಂದಿರದಲ್ಲಿ ನಡೆದ ತಾಲೂಕಿನ ಸಮಸ್ತ ಒಕ್ಕಲಿಗರ ಸಭೆಯಲ್ಲಿ ಕಾರ್ಯಕ್ರಮದ ಪೂರ್ವಭಾವಿ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಅವರು ಎಲ್ಲಾ ಒಕ್ಕಲಿಗ ಸಮುದಾಯದ ಒತ್ತಾಸೆಯಂತೆ ಬಹು ಸಂಖ್ಯಾತರಾದ ನಮ್ಮ ಸಮುದಾಯದ ನಮ್ಮ ಮಹನೀಯರ ಜಯಂತಿಯನ್ನು ಆಚರಿಸದೆ ಇರುವುದು ಬೇಸರ ತಂದಿದೆ ಆದ್ದರಿಂದ ಈ ಬಾರಿ ಅದ್ದೂರಿಯಾಗಿ ಆಚರಿಸಲು ತೀರ್ಮಾನಿಸಲಾಗಿದೆ ಎಂದು ತಿಳಿಸಿದರು. ಈ ಕಾರ್ಯಕ್ರಮದ ದಿನಾಂಕವನ್ನು ಕೆ ಆರ್ ನಗರ ವಿಧಾನಸಭಾ ಕ್ಷೇತ್ರದ ಮಾಜಿ ಸಚಿವರು ಜನಪ್ರಿಯ ನಾಯಕರಾದ ಸಾರಾ ಮಹೇಶ್ ಅವರ ಅಧ್ಯಕ್ಷತೆಯಲ್ಲಿ ಪಕ್ಷಾತೀತವಾಗಿ ಜಾತ್ಯಾತೀತವಾಗಿ ಆದಿಚುಂಚನಗಿರಿ ಶ್ರೀಗಳಾದ ಡಾ.ನಿರ್ಮಲಾನಂದ ಸ್ವಾಮೀಜಿ ರಾಜ್ಯದ ಮಾಜಿ ಮುಖ್ಯಮಂತ್ರಿ ಕೇಂದ್ರ ಸಚಿವ ಎಚ್ ಡಿ ಕುಮಾರಸ್ವಾಮಿ ಸೇರಿದಂತೆ ಸ್ವಾಮೀಜಿಗಳನ್ನು ಕರೆಯಿಸಿ ಅದ್ದೂರಿಯಾಗಿ ಆಚರಿಸಲಾಗುವುದು ಎಂದು ತಿಳಿಸಿದರು.

ಮಾಜಿ ಸಚಿವ ಸಾರಾ ಮಹೇಶ್ ದಿನಾಂಕ ನಿಗದಿ ಮಾಡಿದ ನಂತರ ಸಾಲಿಗ್ರಾಮ ತಾಲೂಕಿನ ಎಲ್ಲಾ ಒಕ್ಕಲಿಗ ಸಮುದಾಯವಿರುವ ಗ್ರಾಮಗಳಿಗೆ ಕಾರ್ಯಕ್ರಮ ರೂವಾರಿಗಳು ಮತ್ತು ತಂಡ ಭೇಟಿ ನೀಡಿ ಮಾಹಿತಿ ನೀಡುವ ಮೂಲಕ ಸುಮಾರು 15 ಸಾವಿರಕ್ಕೂ ಹೆಚ್ಚು ಸಮುದಾಯದ ಬಂಧುಗಳನ್ನು ಕೆರೆತಂದು ಇತಿಹಾಸ ಪ್ರಸಿದ್ಧ ಯೋಗ ನರಸಿಂಹಸ್ವಾಮಿ ದೇವಾಲಯದಿಂದ ವಿವಿಧ ಕಲಾತಂಡಗಳೊಂದಿಗೆ ರಾಜ್ಯದ ಒಕ್ಕಲಿಗ ಸಮುದಾಯದ ಮಹಾನ್ ಪುಣ್ಯ ಪುರುಷರ ಭಾವಚಿತ್ರಗಳೊಂದಿಗೆ ಕುವೆಂಪು ಮತ್ತು ಕೆಂಪೇಗೌಡರ ಭಾವಚಿತ್ರವನ್ನು ಬೆಳ್ಳಿರಥದಲ್ಲಿ ಮೆರವಣಿಗೆಯ ಮೂಲಕ ಪಟ್ಟಣದ ಬಯಲು ರಂಗ ಮಂದಿರದಲ್ಲಿ ಕಾರ್ಯಕ್ರಮವನ್ನು ನಡೆಸಲಾಗುವುದು ಎಂದರು. ಒಕ್ಕಲಿಗರ ಸಂಘದ ಅಧ್ಯಕ್ಷ ಮಹೇಶ್ ವಿಶ್ವಒಕ್ಕ ಲಿಗರ ಸಂಘದ ಅಧ್ಯಕ್ಷ ಕುಪ್ಪಳ್ಳಿ ಸೋಮ, ಟೆಂಪೋ ಚಾಲಕರ ಸಂಘದ ಅಧ್ಯಕ್ಷ ಮಂಜು, ಸಾ ರಾ ಸತೀಶ್ , ಪಾಪಣ್ಣ ಅನಂತು ಮಂಜು ಎಸ್‌ಆರ್ ಪ್ರಕಾಶ್ ಕುಮಾರ್, ರವೀಶ್, ಪುಟ್ಟಣ್ಣ, ಶಿಕ್ಷಕ ನಾಗೇಶ್ ಎಸ್‌ಆರ್ ಪೂರ್ಣಚಂದ್ರ ರಾಮೇಗೌಡ ಸುನಿಲ್ ತುಳಸಿರಾಮ್ ಗುರುಪ್ರಸಾದ್ ವೆಂಕಟೇಶ್ ರಾಮಕುಮಾರ್ ರಾಮಪ್ರಸಾದ ನಾಗೇಂದ್ರ ಗಿರಿ ಗೌಡ ಮಂಜುನಾಥ್ ಹರೀಶ್ ರಾಜು ಸೇರಿದಂತೆ ಮತ್ತಿತರರು ಹಾಜರಿದ್ದರು.

# ವಾಲ್ಮೀಕಿ ಸಮುದಾಯದ ಪ್ರಗತಿಗೆ ಶಿಕ್ಷಣವೇ ಅಸ್ತ್ರ

ಗುಂಡ್ಲುಪೇಟೆ: ವಾಲ್ಮೀಕಿ ಸಮುದಾಯದ ಪ್ರಗತಿಗೆ ಶಿಕ್ಷಣವೇ ಅಸ್ತ್ರ ಎಂದು ಶ್ರೀ ಪ್ರಸನ್ನಾಂದಪುರಿ ಸ್ವಾಮೀಜಿ ಸಲಹೆ ನೀಡಿದರು

ಪಟ್ಟಣದ ಹಳೇ ಬಸ್ ನಿಲ್ದಾಣ ದ ಬಳಿ ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿ ಪ್ರಯುಕ್ತ ವಾಲ್ಮೀಕಿ ಭಾವಚಿತ್ರ ಕ್ಕೆ ಪುಷ್ಪಾರ್ಚನೆ ಸಲ್ಲಿಸಿ ಮೆರವಣಿಗೆಗೆ ಚಾಲನೆ ನೀಡಿ ಮಾತನಾಡಿದರು

ಹಿಂದುಳಿದ ವಾಲ್ಮೀಕಿ ನಾಯಕ ಸಮುದಾಯ ಶೈಕ್ಷಣಿಕ, ಆರ್ಥಿಕ ಮತ್ತು ಸಾಮಾಜಿಕವಾಗಿ ತೀರ ಹಿಂದುಳಿದ ವಾಲ್ಮೀಕಿ ಸಮಾಜ ಬಾಂಧವರು ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ನೀಡಬೇಕು. ಆಗ ಮಾತ್ರ ಸಮಾಜ ಎಲ್ಲ ಕ್ಷೇತ್ರಗಳಲ್ಲಿಯೂ ಸದೃಢಗೊಳ್ಳುವುದು ಎಂದರು ಮಹರ್ಷಿ ವಾಲ್ಮೀಕಿಯ ರಾಮಯಾಣ ರಚಿಸುವ ಮೂಲಕ ಸಮಾಜಕ್ಕೆ ಉತ್ತಮ ಸಂದೇಶ ಸಾರಿದ್ದಾರೆ ಎಂದು ಹೇಳಿದರು

ನಂತರ ಮಾತನಾಡಿ ಶಾಸಕ ಎಚ್ ಎಂ ಗಣೇಶ್ ಪ್ರಸಾದ್ ತಾಲೂಕಿನಲ್ಲಿ ಬೃಹತ್ ಸಂಖ್ಯೆಯಲ್ಲಿರುವ ನಾಯಕ ಸಮಾಜದವರು ಒಗ್ಗೂಡಿ ವಾಲ್ಮೀಕಿ ಜಯಂತಿ ಅಚರಣೆ ಮಾಡುತ್ತಿರುವುದು ಬಹಳ ಖುಷಿಯ ವಿಚಾರ ಎಂದರು ಮಹರ್ಷಿ



ವಾಲ್ಮೀಕಿ ರಾಮಾಯಣ ಮಾನವ ಸಮುದಾಯಕ್ಕೆ ಬದುಕುವ ನೈತಿಕತೆಯ ಕೈಗನ್ನಡಿಯಾಗಿದೆ. ಮೇರು ಕೃತಿಯನ್ನು ನೀಡಿದ ವಾಲ್ಮೀಕಿ ಅವರ ಆದರ್ಶ ಮೌಲ್ಯಗಳನ್ನು ಪ್ರತಿಯೊಬ್ಬರೂ ಪಾಲನೆ ಮಾಡಿದಾಗ ಮಾತ್ರ ಬದುಕು ಹಸನಾಗಲು ಸಾಧ್ಯ ಎಂದು ತಿಳಿಸಿದರು ಶ್ರೀ ಮಹರ್ಷಿ ವಾಲ್ಮೀಕಿ ಭಾವಚಿತ್ರ ಮೆರವಣಿಗೆಯಲ್ಲಿ ಕೇರಳ ವಾದ್ಯ ನಗಾರಿ ಡೊಳ್ಳು.ಕುಣಿತ ತಮಟೆ ಹಾಗೂ ಡಿ ಜೆ .ಮಂಗಳ ವಾದ್ಯ ಸದ್ದಿಗೆ ತಾಲೂಕಿನ ವಿವಿಧ ಹಳ್ಳಿಗಳಿಂದ ಅಗಮಿಸಿದ ಸಮುದಾಯದ ಯುವಕ ಸಂಘದ ಪದಾಧಿಕಾರಿಗಳು. ಹಾಗೂ ಸಮಾಜದ ಬಾಂಧವರು ಹೆಜ್ಜೆ ಹಾಕಿದರು ಅಲ್ಲಾದೆ ಮೆರವಣಿಗೆಯಲ್ಲಿ ಪ್ರತಿಯೊಂದು ಹಳ್ಳಿಯಿಂದ ಆಗಮಿಸಿದ ವಾಲ್ಮೀಕಿ ಯುವಕ ಸಂಘದ ಪದಾಧಿಕಾರಿಗಳು. ತಮ್ಮ ತಮ್ಮ ವಾಹನಗಳಿಗೆ ದೊಡ್ಡ ಪ್ರಮಾಣದಲ್ಲಿ ವಾಲ್ಮೀಕಿ ಭಾವಚಿತ್ರವಿರುವ ಪ್ಲೇಕ್ಸಗಳನ್ನು ಕಟ್ಟಿ ಕೂಂಡು ತಂಡೋಪ ತಂಡವಾಗಿ ಅಗಮಿಸುವ ಮೂಲಕ ಮೆರವಣಿಗೆಯ ಮೆರಗು ಹೆಚ್ಚಿದರು ಪಟ್ಟಣದ ಹಳೇ ಬಸ್ ನಿಲ್ದಾಣ ದಿಂದ ಆರಂಭವಾದ ಮೆರವಣಿಗೆ ರಾಷ್ಟ್ರೀಯ ಹೆದ್ದಾರಿಯ ಮೂಲಕ ಸಾಗಿ ವೀರ ಮದಕರಿ ನಾಯಕ ವೃತ್ತ ಮಾರ್ಗವಾಗಿ ಸಾಗಿತ್ತು

ಈ ಸಂದರ್ಭದಲ್ಲಿ ಮಾಜಿ ಶಾಸಕ ಸಿ ಎಸ್ ನಿರಂಜನ್ ಕುಮಾರ್.ಪುರಸಭೆ ಮಾಜಿ ಅಧ್ಯಕ್ಷ ಶಶಿಧರ ಪಿ ದೀಪು ಸೇರಿದಂತೆ ಇತರರು ವಾಲ್ಮೀಕಿ ಭಾವಚಿತ್ರಕ್ಕೆ ಪುಪ್ಪಾರ್ಚಾನೆ ಸಲ್ಲಿಸಿ ನಮಿಸಿದರು ನಾಯಕ ಸಮುದಾಯದ ಮುಖಂಡರಾದ ಪಿ ಗಿರೀಶ್.ಎನ್ ಮಲ್ಲೇಶ್.ಶ್ರೀನಿವಾಸ್ ಕಣ್ಣಪ್ಪ. ಎನ್ ಕುಮಾರ್.ಸುರೇಶ ಕಾರ್ಗಳ್ಳಿ ರಂಗಸ್ವಾಮಿ ನಾಯಕ.ನಾಗೇಂದ್ರ. ಮಣಿನಾಯಕ.ಗೋವಿಂದ ನಾಯಕ. ಪ್ರದೀಪ್. ಕ್ರೇಜಿ ನಾಗರಾಜ್.ಅವ್ವ ಕುಮಾರ್.ಎಂಡಿಎಸ್ ದೂಡ್ಡ ಸ್ವಾಮಿ. ಸುರೇಶನಾಯಕ. ವಿಠ್ಠಲ. ರಾಸ (ರಾಜೇಶ್ ) ರಾಜೇಂದ್ರ ಸೇರಿದಂತೆ ತಾಲೂಕಿನ ವಿವಿಧ ಗ್ರಾಮಗಳ ಸಮುದಾಯದ ಹಿರಿಯ ಮುಖಂಡರು ಯಜಮಾನ್ರು ಸಂಘ ಸಂಸ್ಥೆಯ ಯುವಕರು ಹಾಜರಿದ್ದರು

# ಭಾರತ ಸಂವಿಧಾನ ಬರೆದವರು ಅಂಬೇಡ್ಕರ್‌ಒಬ್ಬರೇ: ಚಮರಂ

## ಅಂಬೇಡ್ಕರ್ ಮತ್ತು ಸಂವಿಧಾನ ಕುರಿತ ವಿಚಾರ ಸಂಕಿರಣ

ಚಾಮರಾಜನಗರ, ಪ್ರಪಂಚದ ಸರ್ವಶ್ರೇಷ್ಠ ಭಾರತ ಸಂವಿಧಾನವನ್ನು ಬರೆದವರು ಬಾಬಾ ಸಾಹೇಬ್ ಡಾ. ಬಿ.ಆರ್ ಅಂಬೇಡ್ಕರ್ ಒಬ್ಬರೇ ಎಂದು ಅಂಬೇಡ್ಕರ್ ವಾದಿ, ಚಿಂತಕ ಸಾಹಿತಿ ಡಾ. ಕೃಷ್ಣಮೂರ್ತಿ ಚಮರಂ ತಿಳಿಸಿದರು.

ಭೋಗಾಪುರ ಗ್ರಾಮದಲ್ಲಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ವಸತಿಯುಕ್ತ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ರಂಗವಾಹಿನಿ ಸಂಸ್ಥೆಯು ಸಂವಿಧಾನ ದಿನಾಚರಣೆ ಅಂಬೇಡ್ಕರ್ ಹಬ್ಬ –2025 ಅಂಗವಾಗಿ ಅಂಬೇಡ್ಕರ್ ಮತ್ತು ಸಂವಿಧಾನ ಕುರಿತ ವಿಚಾರ ಸಂಕಿರಣದಲ್ಲಿ ಮಾತನಾಡಿದರು. ಅಂಬೇಡ್ಕರ್ ಒಬ್ಬರೇ ಸಂವಿಧಾನ ಶಿಲ್ಪಿ ಅಲ್ಲ ಇವರ ಜೊತೆ ಅನೇಕರು ಸೇರಿ ಸಂವಿಧಾನವನ್ನು ಬರೆದಿದ್ದಾರೆ ಎಂಬ ಕಿಡಿಗೇಡಿಗಳ ಹೇಳಿಕೆಗಳನ್ನು ಖಂಡಿಸಿದ ಅವರು, ಇದು ಅಂಬೇಡ್ಕರ್ ಅವರ ಪ್ರಾಮುಖ್ಯತೆಯನ್ನು ನಗಣ್ಯ ಮಾಡುವ ಅಂಬೇಡ್ಕರ್ ವಿರೋಧಿ ಅಜೆಂಡವಾಗಿದೆ. ಸಂವಿಧಾನ ರಚನಾ ಸಮಿತಿಯ ಸದಸ್ಯರುಗಳು ಒಂದೊಂದು ಕಾರಣದಿಂದಾಗಿ ದೂರವೇ ಉಳಿದರು. ಅಂಬೇಡ್ಕರ್ ಅವರ ವಿಶೇಷ ಬದ್ಧತೆ ಮತ್ತು ವಿದ್ವತ್ತುಗಳಿಂದಾಗಿ ಭಾರತದ ಸಂವಿಧಾನವನ್ನು ಜನಮುಖಿಯಾಗಿ ರಚಿಸಲು ಸಂಪೂರ್ಣ ಜವಾಬ್ದಾರಿ ಹೊತ್ತವರು ಅಂಬೇಡ್ಕರ್ ಎಂದು ಸಂವಿಧಾನ ರಚನಾ ಸಮಿತಿಯ ಸದಸ್ಯರಲೊಬ್ಬರಾದ ಟಿ.ಟಿ ಕೃಷ್ಣಮಾಚಾರಿ ಅವರೇ ಖುದ್ದು ರಚನಾ ಸಭೆಯಲ್ಲಿ ಮಂಡಿಸಿದ್ದು, ಸಂವಿಧಾನ ರಚನಾ ಸಭೆಯ ನಡಾವಳಿಯಲ್ಲಿ ಇದು ದಾಖಲಾಗಿದೆ ಎಂದು ಹೇಳಿದರು.

ಇತಿಹಾಸದ ಸತ್ಯ ಹೀಗಿದ್ದರೂ, ಇತ್ತೀಚೆಗೆ ವಾಟ್ಸಾಪ್ ಯೂನಿವರ್ಸಿಟಿಯ ಭಕ್ತರು ಅಂಬೇಡ್ಕರ್ ಅವರ ವಿಚಾರಧಾರೆಗಳನ್ನು ತಿರುಚುವಲ್ಲಿ ಸಕ್ರಿಯರಾಗಿದ್ದಾರೆ. ಇದು ಚರಿತ್ರೆಯನ್ನು ತಿರುಚುವ




ಮತ್ತು ಅಂಬೇಡ್ಕರ್ ಅವರ ವಿದ್ವತ್ತಿಗೆ ಮಸಿ ಬಳಿಯುವ ಕೆಲಸವಾಗಿದೆ. ಇದನ್ನು ದೇಶ ವಿರೋಧಿ ಕೃತ್ಯವೆಂದು ಪರಿಗಣಿಸಿ ಸರ್ಕಾರಗಳು ಇವರ ವಿರುದ್ಧ ಕಠಿಣ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಆಗ್ರಹಿಸಿದ ಚಮರಂ, ವಿದ್ಯಾರ್ಥಿಗಳು ಯಾವುದೇ ಕಾರಣಕ್ಕೂ ಇಂತಹ ಸುಳ್ಳು ಸುದ್ದಿಗಳನ್ನು ಪರಿಶೀಲಿಸದೆ ಜಾಲತಾಣಗಳಲ್ಲಿ ಹರಡಬೇಡಿ ಎಂದು ಕಿವಿ ಮಾತು ಹೇಳಿದರು.

ಸಮಾರಂಭದ ಉದ್ಘಾಟನೆಯನ್ನು ನೆರವೇರಿಸಿದ ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಪುಟ್ಟಸ್ವಾಮಿ ಮಾತನಾಡಿ, ಭಾರತದ ಸಂವಿಧಾನದ ಪೀಠಿಕೆಯು ಸಂವಿಧಾನದ ಮೂಲ ಮೌಲ್ಯಗಳು ಮತ್ತು ಮಾರ್ಗದರ್ಶಿ ತತ್ವಗಳನ್ನು ವಿವರಿಸುವ ಸಂಕ್ಷಿಪ್ತ ಪರಿಚಯಾತ್ಮಕ ಹೇಳಿಕೆಯಾಗಿದೆ. ಭಾರತದ ಸಂವಿಧಾನದಲ್ಲಿ ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗಗಳ ಮತ್ತು ಇತರ ಹಿಂದುಳಿದ ವರ್ಗಗಳಿಗೆ ಮೀಸಲಾತಿ ಮತ್ತು ಇತರ ಹಕ್ಕುಗಳನ್ನು ನೀಡಿದ ಭಾರತ ಭಾಗ್ಯವಿಧಾತ ಎಂದು ಬಣ್ಣಿಸಿದರು. ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಪ್ರಾಂಶುಪಾಲ ಡಾ. ಪಿ. ದೇವರಾಜು ಮಾತನಾಡಿ, ಜಗತ್ತಿನಾದ್ಯಂತ ವಿದ್ವತ್ ಲೋಕ ಅಂಬೇಡ್ಕರ್ ಅವರನ್ನು ಇಂದು ಓದತೊಡಗಿದೆ. ನೆಲ್ಸನ್ ಮಂಡೇಲಾ, ಬರಾಕ್ ಒಬಾಮಾ ಅಂತಹ ಮಹಾನ್ ವ್ಯಕ್ತಿಗಳು ಜಗತ್ತಿನ ತುಳಿತಕ್ಕೊಳಗಾದ ಎಲ್ಲರೂ ಸಾಮಾಜಿಕ ನ್ಯಾಯ ಮತ್ತು ಆತ್ಮ ಗೌರವ ಎತ್ತಿ ಹಿಡಿಯಲು ಭಾರತದ ಸಂವಿಧಾನ ಮತ್ತು ಅಂಬೇಡ್ಕರನ್ನು ನೆನಯಲೇಬೇಕು ಎಂದರು.

ಪ್ರಾಸ್ತಾವಿಕ ಭಾಷಣ ಮಾಡಿದ ರಂಗವಾಹಿನಿ ಅಧ್ಯಕ್ಷ ಸಿಎಂ ನರಸಿಂಹಮೂರ್ತಿ, ಸಂವಿಧಾನ ದಿನಾಚರಣೆ ಅಂಗವಾಗಿ ಜಿಲ್ಲೆಯಾದ್ಯಂತ ಅಂಬೇಡ್ಕರ್ ಹಬ್ಬ, ಅಂಬೇಡ್ಕರ್ ಮತ್ತು ಸಂವಿಧಾನ, ಅಂಬೇಡ್ಕರ್ ಮತ್ತು ಮಹಿಳೆ ಅಂಬೇಡ್ಕರ್ ಮತ್ತು ಕಾನೂನು ಕುರಿತು ವಿಚಾರ ಸಂಕಿರಣ, ಅಂಬೇಡ್ಕರ್ ಕುರಿತು ಪ್ರಬಂಧ ಸ್ಪರ್ಧೆ, ಅಂಬೇಡ್ಕರ್ ಹಾಡು ಹಬ್ಬ ಮತ್ತು ಬೆಲ್ಲದ ದೋಣಿ ನಾಟಕ ಪ್ರದರ್ಶನಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ಹೇಳಿದರು.

ಸಮಾರಂಭದಲ್ಲಿ ನಿಸರ್ಗ ಟ್ರಸ್ಟ್ ನ ನಾಗರಾಜು, ಕಾಲೇಜಿನ ಪ್ರಾಧ್ಯಾಪಕರುಗಳಾದ ಡಾ. ರಮೇಶ್ ಬಾಬು, ರಂಗಸ್ವಾಮಿ, ದೀಪಕ್ ವಿಲ್ಸನ್ ಯಶೋಧಾ ದೇವಿ, ಸುದರ್ಶನ್, ಹಸನ್ ಮಹಮದ್ ಉಪಸ್ಥಿತರಿದ್ದರು. ಪೂಜಾ ಮತ್ತು ಸಂಗಡಿಗರು ಅಂಬೇಡ್ಕರ್ ಮತ್ತು ಬುದ್ಧನ ಗೀತೆಗಳನ್ನು ಹಾಡಿದರು.

## ಕೊಟ್ಟ ಮಾತಿನಂತೆ ಸಿಎಂ ನಡೆಯಲಿ: ವಿಶ್ವನಾಥ್

ಮೈಸೂರು: ಅಧಿಕಾರ ಹಂಚಿಕೆ ಬಗ್ಗೆ ಡಿಕೆಶಿ ಹಾಗೂ ಡಿಕೆ ಸುರೇಶ್ ತಲೆ ಮೇಲೆ ಕೈ ಇಟ್ಟು ಸಿದ್ದರಾಮಯ್ಯ ಆಣೆ ಪ್ರಮಾಣ ಮಾಡಿದ್ದಾರೆ. ದೆಹಲಿಯ ಕರ್ನಾಟಕ ಭವನದಲ್ಲಿ ಹೈಕಮಾಂಡ್ ಮದ್ಯಸ್ತಿಕೆಯಲ್ಲಿ ಸಿದ್ದರಾಮಯ್ಯ ಪ್ರಮಾಣ ಮಾಡಿದ್ದಾರೆ. ಅದರಂತೆ ಸಿಎಂ ಸಿದ್ದರಾಮಯ್ಯ ಅಧಿಕಾರ ಹಸ್ತಾಂತರಿಸಲಿ ಎಂದು ವಿಧಾನ ಪರಿಷತ್ ಸದಸ್ಯ ಎಚ್.ವಿಶ್ವನಾಥ್ ತಿಳಿಸಿದರು.

ರಾಜ್ಯ ಕಾಂಗ್ರೆಸ್ ನಲ್ಲಿ ಪವರ್ ಶೇರಿಂಗ್ ವಿಚಾರವಾಗಿ ಪ್ರತಿಕ್ರಯಿಸಿದ ಅವರು, ಸಿಎಂ ಪ್ರಮಾಣದ ವೇಳೆ ಕೆಲವೇ ಕೆಲವು ಮಂದಿ ಇದ್ದರು. ಸಿದ್ದರಾ



ಮಯ್ಯ ಮಾತಿಗೆ ತಪ್ಪಬಾರದು. ಪಕ್ಷ ಅಧಿಕಾರಕ್ಕೆ ತರುವಲ್ಲಿ ಡಿಕೆಶಿಯ ಪಾತ್ರವಿದೆ. ಸಿದ್ದರಾಮಯ್ಯ ಕೊಟ್ಟ ಮಾತಿನಂತೆ ನಡೆದುಕೊಳ್ಳಬೇಕು. ಇಷ್ಟೆಲ್ಲಾ ಬೆಳವಣಿಗೆ ಆದರೂ ಎಐಸಿಸಿ ಮೌನವಾಗಿರುವುದು ಸರಿಯಲ್ಲ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಯಜನ ಖರ್ಗೆ ಮಧ್ಯ ಪ್ರವೇಶ ಮಾಡಬೇಕು. ಕರ್ನಾಟಕದಲ್ಲಿ ನಡೆಯುತ್ತಿರುವ ರಾಜಕೀಯ ಜನರ ಅವಕೃಪೆಗೆ ಪಾತ್ರವಾಗಿದೆ. ಎಂಎಲ್‌ಎ, ಸಚಿವರಿಗೆ ಮೂರು ಕಾಸಿನ ಮರ್ಯಾದೆ ಇಲ್ಲದಂತಾಗಿದೆ. ಸಂವಿಧಾನ, ಜನ ತಂತ್ರವನ್ನು ಕೊಲ್ಲುತ್ತಿದ್ದಾರೆ. ಈಗಿರುವ ಮುಖ್ಯಮಂತ್ರಿಗೆ ಕಾಂಗ್ರೆಸ್ ಎಲ್ಲವನ್ನೂ ಕೊಟ್ಟಿದೆ. ಕಾಂಗ್ರೆಸ್ ಸಿದ್ದರಾಮಯ್ಯಗೆ ಎಲ್ಲವನ್ನು ಕೊಟ್ಟಿದೆ. ಪಕ್ಷಕ್ಕೆ ಬಂದ ತಕ್ಷಣವೇ ವಿಪಕ್ಷ ಸ್ಥಾನ ಬಿಟ್ಟುಕೊಟ್ಟರು. ಎರಡು ಬಾರಿ ಸಿಎಂ ಮಾಡಿದೆ. ಅಂತ ಕಾಂಗ್ರೆಸನ್ನ ನಾಶ ಮಾಡುತಿದ್ದಾರೆ. ಸಿದ್ದರಾಮಯ್ಯ ಎಲ್ಲ ಕೊಟ್ಟ ಪಕ್ಷಕ್ಕೆ ಬಾಗಿಲಾಕುವ ಕೆಲಸ ಮಾಡುತ್ತಿದ್ದಾರೆಂದರು. ವಚನ ಭ್ರಷ್ಟ ಮಾಡಬಾರದು. ರಾಜ್ಯದಲ್ಲಿ ವಚನ ಭ್ರಷ್ಟ ಮಾಡಿದವರು ಯಾರೂ ಬದುಕಿಲ್ಲ. ಪುಣ್ಯಕೋಟಿ ಕಥೆಯನ್ನು ನಂಬಿರುವ ಜನ ನಮ್ಮವರು. ಯಡಿಯೂರಪ್ಪಗೆ ವಚನ ನೀಡಿದ ಕುಮಾರಸ್ವಾಮಿ ಕತೆ ಏನಾಯ್ತು?, ವಚನಭ್ರಷ್ಟ ಮಾಡಿದ ಯಾರು ಉದ್ಧಾರವಾಗಿಲ್ಲ. 140 ಸ್ಥಾನ ಬರುವುದಕ್ಕೆ ಡಿಕೆಶಿ ಪಾತ್ರ ದೊಡ್ಡದು. ನಾವೆಲ್ಲ ಕಾಂಗ್ರೆಸ್ ನಲ್ಲಿದ್ದವರು ನನಗೆ ಗೊತ್ತು ಡಿಕೆಶಿ ಒಬ್ಬ ಶಿಸ್ತಿನ ಸಿಪಾಯಿ. ರಾಜ್ಯದ ರಾಜಕಾರಣ ಎತ್ತ ಸಾಗುತ್ತಿದೆ.?, ಬರಿ ರಾಜಕೀಯ ಮೇಲಾಟ ನಡೆಯುತ್ತಿದೆ. ಆಡಳಿತ ಸಂಪೂರ್ಣ ಕುಂಠಿತವಾಗಿದೆ. ನ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ ಎಂದರು.

# ಪ್ರಿಯಾಂಕ್ ಹುಟ್ಟುಹಬ್ಬ: ಹಣ್ಣು ಹಂಪಲು ವಿತರಣೆ

ಹಾಸನ: ಸಚಿವ ಪ್ರಿಯಾಂಕ ಖರ್ಗೆ ಅವರ 47ನೇ ಹುಟ್ಟುಹಬ್ಬದ ಅಂಗವಾಗಿ ಜಿಲ್ಲಾ ಕಾಂಗ್ರೆಸ್ ಎಸ್ಸಿ, ಎಸ್ಟಿ ವಿಭಾಗದ ಅಧ್ಯಕ್ಷ ಮಲ್ಲಿಗೇ ವಾಳು ದೇವಪ್ಪ ಅವರ ನೇತೃತ್ವದಲ್ಲಿ ಕಾಂಗ್ರೆಸ್ ಮುಖಂಡರು ಇಂದು ನಗರದ ಹಿಮ್ಸ್ ಆಸ್ಪತ್ರೆಯ ರೋಗಿಗಳಿಗೆ ಹಣ್ಣು ಹಂಪಲು ವಿತರಿಸಿದರು

ಈ ವೇಳೆ ಮಲ್ಲಿಗೆವಾಳು ದೇವಪ್ಪ ಅವರು ಮಾತನಾಡಿ, ಗ್ರಾಮೀಣಾಭಿವೃದ್ಧಿ, ಪಂಚಾಯತ್ ರಾಜ್ ಹಾಗೂ ಐ.ಟಿ, ಬಿ.ಟಿ ಸಚಿವರಾದ ಪ್ರಿಯಾಂಕ ಖರ್ಗೆ ಅವರು ಕಲಬುರ್ಗಿ ಜಿಲ್ಲೆಯ ಚಿತ್ತಾಪುರ ಕ್ಷೇತ್ರದಿಂದ ಶಾಸಕರಾಗಿ ಆಯ್ಕೆಯಾಗಿ ಆರಂಭದಿಂದಲೂ ಜನಪರ ಕೆಲಸಗಳನ್ನು ಮಾಡುವ ಮೂಲಕ ಜನಮನ್ನಣೆ ಗಳಿಸಿದ್ದಾರೆ, ಕ್ರಿಯಾಶೀಲ ಸಚಿವರಾಗಿಯೂ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಸಚಿವ ಸಂಪುಟದಲ್ಲಿ ಉತ್ತಮ ಕೆಲಸ ಮಾಡುವ ಮೂಲಕ ಹೆಸರುವಾಸಿಯಾಗಿರುವ ಪ್ರಿಯಾಂಕ ಖರ್ಗೆ ಅವರಿಗೆ ದೇವರು ಇನ್ನಷ್ಟು ಆಯಸ್ಸು ಆರೋಗ್ಯ ಕೊಟ್ಟು ಕಾಪಾಡಲಿ ಎಂದು ಹಾರೈದರು.



ಸದನದಲ್ಲಿ ಬಡವರ, ರೈತರ, ನೊಂದವರ ಪರ ಧ್ವನಿ ಎತ್ತುವ ಮೂಲಕ ಅವರ ನೋವುಗಳಿಗೆ ಸ್ಪಂದಿಸುವ ಸರಳ ಸಜ್ಜನಿಕೆಯ ಗುಣ ಹೊಂದಿರುವ ಪ್ರಿಯಾಂಕ ಖರ್ಗೆ ಅವರು ಈ ಹಿಂದೆ ಸಮಾಜ ಕಲ್ಯಾಣ ಸಚಿವರಾಗಿಯು?ಕೆಲಸ ಮಾಡಿದ್ದಾರೆ, ಅವರ ತಂದೆ ಮಲ್ಲಿಕಾರ್ಜುನ್ ಖರ್ಗೆ ಅವರ ಮಾರ್ಗದರ್ಶನದಲ್ಲಿ ದೇವರು ತಮ್ಮ ಅಧಿಕಾರ ಅವಧಿಯಲ್ಲಿ ಅಪಾರ ಜನಸೇವೆ ಮಾಡುವ ಶಕ್ತಿ ನೀಡಿ ಮುಂದಿನ ದಿನಗಳಲ್ಲಿ ರಾಜಕೀಯವಾಗಿ ಇನ್ನಷ್ಟು ಉನ್ನತ ಸ್ಥಾನಮಾನ ದೊರಕುವಂತಾಗಲಿ ಎಂದು ಶುಭ ಹಾರೈಸಿದರು. ರಾಷ್ಟ್ರೀಯ ಕೃತಕ ಬುದ್ಧಿಮತ್ತೆ ಸಮೀಕ್ಷೆಯಲ್ಲಿ 9ನೇ ಸ್ಥಾನ ಪಡೆದಿದ್ದಾರೆ, ಯಾವುದೇ ವಿಚಾರದಲ್ಲಿ ತಮ್ಮ ಜ್ಞಾನದ ಮೂಲಕವೇ ಎದುರಾಳಿಗಳಿಗೆ ದಿಟ್ಟ ಉತ್ತರ ನೀಡುವ ನೇರ ನಡೆ ನುಡಿಯ ನಿಷ್ಕಲ್ಮಶ ಕಳಂಕರಹಿತ ರಾಜಕರಿಣಿಯಾಗಿ, ಕರ್ನಾಟಕ ರಾಜ್ಯದ ರಾಜಕಾರಣದಲ್ಲಿ ವಯಸ್ಸಿನಲ್ಲಿ ಕಿರಿಯವರಾದರೂ ಪ್ರಬುದ್ಧ ರಾಜಕಾರಣಿಯಾಗಿ ಕೆಲಸ ಮಾಡುತ್ತಿದ್ದಾರೆ, ಮುಂದಿನ ದಿನಗಳಲ್ಲಿ ಅವರಿಗೆ ಇನ್ನಷ್ಟು ಅವಕಾಶಗಳು ಹುಡುಕಿಕೊಂಡು ಬರಲಿ, ಆ ಮೂಲಕ ಜನರಿಗೆ ಇನ್ನಷ್ಟು ಸೇವೆ ಇದಕಿಸುವ ಅವಕಾಶ ಸಿಗಲಿ ಎಂದರು. ಈ ವೇಳೆ ಕಾಂಗ್ರೆಸ್ ಮುಖಂಡರಾದ ಅಶೋಕ್ ನಾಯಕರಹಳ್ಳಿ, ವೆಂಕಟೇಶ್, ಮಣಿಕಂಠ, ರವಿಕುಮಾರ್, ದಿವಾಕರ್, ಪವನ್, ರಮೇಶ್ ಇತರರು ಇದ್ದರು

# ಸಾಮಾಜಿಕ ಬಹಿಷ್ಕಾರ: ನ್ಯಾಯಕ್ಕಾಗಿ ಮನವಿ



ಚಾಮರಾಜನಗರ:ಗುಂಡ್ಲುಪೇಟೆ ತಾಲೂಕಿನ ಯಡವನ ಹಳ್ಳಿ ಗ್ರಾಮದ ನಾಯಕ ಸಮುದಾಯದ 80 ಕುಟುಂಬಗಳಿಗೆ 2 ವರ್ಷದಿಂದ ಸಾಮಾಜಿಕ ಬಹಿಷ್ಕಾರ ಹಾಕಲಾಗಿದೆ ಎಂದು ಶಿಕ್ಷಕ ವೈ.ಎಸ್. ಮಹೇಶ್ ಆಗ್ರಹಿಸಿದರು.

ನಗರದ ಜಿಲ್ಲಾಕಾರ್ಯನಿರತ ಪತ್ರಕರ್ತರ ಭವನದಲ್ಲಿ ಕರೆಯಲಾಗಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಯಡವನಹಳ್ಳಿ ಗ್ರಾಮದಲ್ಲಿ 140 ನಾಯಕ ಜನಾಂಗದ ಕುಟುಂಬವಿದ್ದು, 80 ಕುಟುಂಬಗಳಿಗೆ ಬಹಿಷ್ಕಾರ ಹಾಕಲಾಗಿದ್ದು, ಹಬ್ಬ, ಮದುವೆ ಹಾಗೂ ಇತರೆ ಕಾರ್ಯಕ್ರಮಗಳಿಗೆ ಆಹ್ವಾನಿಸದಂತೆ ಹಾಗೂ ಅವರ ಕುಟುಂಬಗಳು ನಡೆಸುವ ಕಾರ್ಯಕ್ರಮಗಳಿಗೆ ಭಾಗವಹಿಸಿದಂತೆ ಬಹಿಷ್ಕಾರ ಹಾಕಲಾಗಿದೆ ಎಂದು ತಿಳಿಸಿದರು. ಗ್ರಾಮದಲ್ಲಿ ಸಾಮಾಜಿಕ ಬಹಿಷ್ಕಾರ ಹಾಕಿರುವುದರಿಂದ ತಾಲೂಕು ಮಟ್ಟದ ವಾಲ್ಮೀಕಿ ಜಯಂತಿ ಕಾರ್ಯಕ್ರಮಕ್ಕೆ ನಮ್ಮನ್ನು ಆಹ್ವಾನಿಸಬಾರದು ಎಂದು ತಾಲೂಕು ಮಟ್ಟದ ಸಮಿತಿಯನ್ನು ಗ್ರಾಮದಿಂದ ವಾಪಸ್ ಕಳುಹಿಸಿದ್ದಾರೆ. ಅಲ್ಲದೇ ನನ್ನ ಸಹೋದರನಿಗೆ ಹೆಣ್ಣು ಕೊಡಬಾರದು ಎಂದು ಹೆಣ್ಣಿನ ಕಡೆಯವರನ್ನು ವಾಪಸ್ ಕಳುಹಿಸಿ ಮನ ನೋಯಿಸಿದ್ದಾರೆ ಎಂದು ಆರೋಪಿಸಿದರು. ಕ್ಷುಲ್ಲಕ ಕಾರಣಕ್ಕೆ ಹಾಕಿದ ಸಾಮಾಜಿಕ ಬಹಿಷ್ಕಾರದಿಂದಾಗಿ ನನ್ನ ತಮ್ಮ ಶಿವರಾಜು ಎಂಬಾತ ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಈ ಸಂಬಂಧ ಠಾಣೆಗೆ ಯಜಮಾನರುಗಳ ವಿರುದ್ಧ ದೂರು ನೀಡಿದ್ದು ಅದನ್ನು ವಾಪಸ್ ತೆಗೆದುಕೊಳ್ಳಬೇಕು ಮತ್ತು ದಂಡ ಕಟ್ಟಬೇಕು ಎಂದು ಷರತ್ತು ಹಾಕಿದ್ದಾರೆ. ಬಹಿಷ್ಕಾರ ಸಂಬಂಧ ಅಧಿಕಾರಿಗಳು ನ್ಯಾಯ ದೊರಕಿಸಬೇಕು ಎಂದು ಮನವಿ ಮಾಡಿದರು. ಸುದ್ದಿಗೋಷ್ಠಿಯಲ್ಲಿ ನಾಗನಾಯಕ, ಸಿದ್ದನಾಯಕ, ಕಿರಣ್ ಕುಮಾರ್, ಸ್ವಾಮಿ ಇದ್ದರು.


## ಸಚಿವ ಪ್ರಿಯಾಂಕ್ ಖರ್ಗೆ ಹುಟ್ಟುಹಬ್ಬ ಆಚರಣೆ

# ಪ್ರಿಯಾಂಕ್ ಖರ್ಗೆ ಮುಖ್ಯಮಂತ್ರಿ ಆಗಲಿ

ಎಚ್.ಡಿ.ಕೋಟೆ: ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಐಟಿ, ಬಿಟಿ ಸಚಿವ ಪ್ರಿಯಾಂಕ್ ಖರ್ಗೆ ಹುಟ್ಟು ಹಬ್ಬವನ್ನು ಕೆಪಿಸಿಸಿ ಕಾರ್ಮಿಕ ವಿಭಾಗದ ಕಾರ್ಯದರ್ಶಿ ಸುರೇಶ್ ನೇತೃತ್ವದಲ್ಲಿ ಕೇಕ್ ಕತ್ತರಿಸಿ, ಸಾರ್ವಜನಿಕ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ರೋಗಿಗಳಿಗೆ ಹಣ್ಣು–ಹಂಪಲು ವಿತರಿಸಿ ಆಚರಿಸಲಾಯಿತು.

ಕೆಪಿಸಿಸಿ ಕಾರ್ಮಿಕ ವಿಭಾಗದ ಕಾರ್ಯದರ್ಶಿ ಜಿಯಾರ ಕಾಲೊನಿ ಸುರೇಶ್ ಮಾತನಾಡಿ, ಪ್ರಿಯಾಂಕ ಖರ್ಗೆ ಅವರು ಇನ್ನು ಹೆಚ್ಚಿನ ಕೆಲಸ ಮಾಡಲಿ. ಅವರ





ರಾಜಕೀಯ ಭವಿಷ್ಯ ಉಜ್ವಲವಾಗಿರಲಿ. ಮುಂದಿನ ದಿನಗಳಲ್ಲಿ ಅವರು ರಾಜಕೀಯದಲ್ಲಿ ಹೆಮ್ಮರವಾಗಿ ಬೆಳೆದು ರಾಜ್ಯದ ಮುಖ್ಯಮಂತ್ರಿಯಾಗಲಿ ಎಂದು ಆಶಿಸಿದರು. ರಾಜ್ಯ ಸಂಶೋಧಕರ ಸಂಘದ ಅಧ್ಯಕ್ಷ ಹಾಗೂ ಕಾಂಗ್ರೆಸ್ ಮುಖಂಡ ಡಾ.ಮರಿದೇವಯ್ಯ ಮಾತನಾಡಿ, ಪ್ರಿಯಾಂಕ ಖರ್ಗೆ ಅವರು ದಲಿತ ಸಮಾಜದ ಫೈಯರ್ ಬ್ರಾಂಡ್. ಸಾಮಾಜಿಕ ಬದ್ಧತೆ, ರಾಜಕೀಯ ಇಚ್ಛಾಶಕ್ತಿಯುಳ್ಳ ಈ ರೀತಿಯ ರಾಜಕಾರಣಿಗಳು ರಾಜ್ಯಕ್ಕೆ ಅತ್ಯವಶ್ಯಕ. ಇತ್ತೀಚಿನ ಕುತಂತ್ರದ ರಾಜಕಾರಣದಲ್ಲಿ ಪ್ರಿಯಾಂಕ ಖರ್ಗೆ ಮಾತ್ರ ಸ್ವಾಭಿಮಾನದ ರಾಜಕಾರಣ ಮಾಡುತ್ತಿದ್ದಾರೆ. ಇವರ ಪ್ರಶ್ನಿಸುವ ಮನೋಭಾವವನ್ನು ಎದುರಿಸಲಾಗದವರು ಪಿತೂರಿ ಮಾಡುತ್ತಿರುವುದು ವಿಷಾದನೀಯ ಎಂದರು.

ಕಾಂಗ್ರೆಸ್ ಮಹಿಳಾ ಘಟಕದ ಅಧ್ಯಕ್ಷೆ ಸೌಮ್ಯ ಮಂಜುನಾಥ್, ಹೈರಿಗೆ ಮಲ್ಲೇಶ್, ಯುತ್ ಕಾಂಗ್ರೆಸ್ ಅಧ್ಯಕ್ಷ ನವೀನ್, ಅಜರುದ್ದೀನ್, ಅಲ್ಪಸಂಖ್ಯಾತರ ಅಧ್ಯಕ್ಷ ಶಫಿ, ಪುರಸಭೆ ಸದಸ್ಯ ಕರಾಟೆ ಪ್ರೇಮ್, ಜಕ್ಕಹಳ್ಳಿ ಮಲ್ಲೇಶ್, ವನಸಿರಿ ಶಂಕರ್, ಶಶಿ ಪಟೇಲ್, ಪ್ರಕಾಶ್ ಬುದ್ಧ, ನೆನಪು ರವಿ, ದೊರೆಸ್ವಾಮಿ,ಮಟ್ಟದಕಟ್ಟೆ ಶ್ರೀಕಂಠ, ಆನಗಟ್ಟಿ ರಾಜಣ್ಣ, ಹೊಮ್ಮರಗಳ್ಳಿ ಜಯಪ್ರಕಾಶ್, ಅರುಣ್, ಆಟೋ ವೆಂಕಿ ಸೇರಿದಂತೆ ಮತ್ತಿತರರಿದ್ದಾರೆ.

# ಋಣಾನುಬಂಧ ರೂಪೇಣ ಪಶು ಪತ್ನಿ ಸುತಾಲಯ

ಮನದ 1 ಮಾತು

ಋಣಾನುಬಂಧ ರೂಪೇಣ ಪಶು ಪತ್ನಿ ಸುತಾಲಯ
ಈ ವಾಕ್ಯ ಸಂಸ್ಕೃತದಲ್ಲಿದೆ. ಇದರ ಅರ್ಥ ಹೀಗಾಗಿದೆ


ಅರ್ಥ:

ಈ ಜನ್ಮದಲ್ಲಿ ನಮ್ಮ ಸುತ್ತಲಿರುವ ಪಶುಗಳು (ಜಾನುವಾರುಗಳು), ಪತ್ನಿ (ಭಾರ್ಯೆ), ಸುತ (ಮಕ್ಕಳು) ಹಾಗೂ ಆಲಯ (ಮನೆ) ಇವರೆಲ್ಲರೂ ಹಿಂದಿನ ಜನ್ಮದ ಋಣಾನುಬಂಧ (ಕರ್ಮದ ಬಾಂಧವ್ಯ, ರಿಣಸಂಬಂಧ) ರೂಪದಲ್ಲಿ ನಮ್ಮೊಡನೆ ಸೇರಿಕೊಂಡಿರುತ್ತಾರೆ.

ಅಂದರೆ, ನಾವು ಯಾರೊಂದಿಗಾದರೂ ಹಳೆಯ ಜನ್ಮದಲ್ಲಿ ಯಾವದೋ ಋಣ (ಸಹಾಯ, ಬಾಧ್ಯತೆ, ಕರ್ಮಸಂಬಂಧ) ಮಾಡಿಕೊಂಡಿದ್ದೇವೆ. ಆ ಬಾಂಧವ್ಯವನ್ನು ತೀರಿಸಿಕೊಳ್ಳಲು ಅವರು ಈ ಜನ್ಮದಲ್ಲಿ ನಮ್ಮ ಜೀವನದಲ್ಲಿ ಮತ್ತೆ ಬರುತ್ತಾರೆ ಪತ್ನಿಯಾಗಿ, ಮಕ್ಕಳಾಗಿ, ಸ್ನೇಹಿತರಾಗಿ, ಪ್ರಾಣಿಯಾಗಿ ಅಥವಾ ಮನೆಯ ಸಂಬಂಧಿಯಾಗಿ.

ಭಾವಾರ್ಥ: ಯಾರೂ ಯಾದೃಚ್ಛಿಕವಾಗಿ ನಮ್ಮ ಜೀವನಕ್ಕೆ ಬರುವುದಿಲ್ಲ. ಪ್ರತಿಯೊಬ್ಬರೂ ಕರ್ಮಬಾಂಧವ್ಯದಿಂದ ಬಂದವರೇ. ಆದ್ದರಿಂದ ಸಂಬಂಧಗಳಲ್ಲಿ ಕರ್ತವ್ಯ, ಸಹನೆ ಮತ್ತು ಕೃತಜ್ಞತೆ ಇರಬೇಕು ಏಕೆಂದರೆ ಅದು ಹಿಂದಿನ ಜನ್ಮದ ಋಣ ತೀರಿಸುವ ಮಾರ್ಗವಾಗಿದೆ.

ಇದರ ಅರ್ಥ ನಮಗೆ ಋಣ ಇದ್ದರೆ ಮಾತ್ರ ಮನೆ ಕಟ್ಟಬಹುದು ಮದುವೆಯಾಗಬಹುದು ಮಕ್ಕಳನ್ನು ಪಡೆಯಬಹುದು ಒಂದು ಪ್ರಾಣಿಯನ್ನು ಅಂದರೆ ಆಕಳು ನಾಯಿ ಬೆಕ್ಕು ಎತ್ತು ಸಾಕಬಹುದು. ಈ ಭೂಮಿಯ ಮೇಲೆ ಕೂಡ ನಮ್ಮ ಬದುಕು ಋಣ ಇರುವವರೆಗೆ ಮಾತ್ರ ಇರುತ್ತದೆ. ಅದಕ್ಕೆ ಸತ್ತ ಮೇಲೆ ಎಲ್ಲರೂ ಹೇಳುವುದು ಭೂಮಿಯ ಋಣ ಮುಗಿಯಿತು ಅಂತ. ಹೀಗೆ ನಮ್ಮ ಜೀವನದಲ್ಲಿ ಪ್ರತಿಯೊಬ್ಬ ವ್ಯಕ್ತಿಯು ಕೂಡ ಇಷ್ಟು ಕಾಲಾವಧಿಯವರೆಗೆ ಎಂದು ಋಣ ಇರುತ್ತದೆ. ನಮಗೆ ಎಷ್ಟೋ ಸಾರಿ ಅನಿಸುತ್ತದೆ. ಕೆಲವರು ನಮ್ಮ ಜೊತೆ ಚೆನ್ನಾಗಿಯೇ ಇದ್ದರು, ಚಂದವಾಗಿ ಮಾತನಾಡಿಕೊಂಡಿರುತ್ತಾರೆ ತುಂಬಾ ಆತ್ಮೀಯರಾಗಿರುತ್ತಾರೆ . ಅವರ ಬಗ್ಗೆ ನಮಗೆ ಅಪಾರ ವಿಶ್ವಾಸ ಆದರೆ ಒಮ್ಮಿಂದೊಮ್ಮೆಲೆ ನಮ್ಮ ಜೊತೆ ಅವರ ವರ್ತನೆಯ ಬದಲಾಗಿಬಿಡುತ್ತದೆ. ನಾವು ಕೇಳಿದರು ಏನು ಹೇಳುವುದಿಲ್ಲ. ನಮ್ಮನ್ನು ಕಡೆಗಣಿಸಲಾರಂಭಿಸುತ್ತಾರೆ. ಆಗ ನಾವು ನೊಂದು ಕೊಳ್ಳುತ್ತೇವೆ. ಯಾಕೆ ಹೀಗೆ ಮಾಡುವರು ಎಂದು ಬೇಸರ. ಯಾರನ್ನು ಅತಿಯಾಗಿ ಹಚ್ಚಿಕೊಂಡ ಮೇಲೆ ಮನಸ್ಸು ನೋವು ಪಡುತ್ತದೆ. ಅವರ ಜೊತೆ ಕಳೆದ ಕ್ಷಣಗಳು, ಕೂಡಿ ಆಡಿದ ಮಾತುಗಳು,ನಕ್ಕು ನಲಿದ ದೃಶ್ಯಗಳು ಮತ್ತೆ ಮತ್ತೆ ನೆನಪಾಗಿ ಮನಸ್ಸನ್ನು ಘಾಸಿಗೊಳಿಸುತ್ತದೆ. ಆಗ ಮನಸ್ಸಿಗೆ ಎನಿಸುತ್ತದೆ ಅವರಿಗಾಗಿ ನಾನು ಏನೆಲ್ಲ ತ್ಯಾಗ ಮಾಡಲಿಲ್ಲ, ಆದರೂ ತಿರುಗಿಸಿ ನನಗೆ ಅನ್ಯಾಯವನ್ನೇ ಮಾಡಿದರು. ಯಾರನ್ನು ಎಷ್ಟೇ ಪ್ರೀತಿಸಿದರೆ ಕೊನೆಗೆ ಸಿಗುವುದು ಮೋಸವೇ!! ಅನುಕೂಲಕ್ಕೆ ತಕ್ಕಂತೆ ಬಳಸಿಕೊಂಡು ಒರಸು ಹಾಳೆಯಂತೆ ಬೀಸಿ ಒಗೆದುಬಿಟ್ಟರಲ್ಲ ನನ್ನ! ಎಂದು. ಮನಸ್ಸಿನೊಳಗೆ ದುಃಖ ಆಗುತ್ತದೆ, ಪದೇ ಪದೇ ಆ ವ್ಯಕ್ತಿಯ ಸಂಗವನ್ನು ಮನಸ್ಸು ಬಯಸುತ್ತದೆ. ಅವರಿಗಾಗಿ ನಾವು ಮಾಡಿದ ಸೇವೆ ಪ್ರೀತಿ ತ್ಯಾಗ ಎಲ್ಲವನ್ನು ಹಪಹಪಿಸುತ್ತದೆ. ಆದರೆ ಇಲ್ಲಿ ಒಂದು ಯೋಚಿಸಬೇಕಾದ ವಿಷಯವಿದೆ ಅದೇನು ಎಂದರೆ ಪ್ರತಿಯೊಂದು ವಸ್ತುವಿಗೆ "ಎಕ್ಸಪಾಯರಿ ಡೇಟ್" ಇದೆ ಅದು ವಸ್ತುವಾಗಲಿ ಸಂಬಂಧವಾಗಲಿ ಜೀವನವಾಗಲಿ , ಈಗ ಚೆನ್ನಾಗಿದ್ದವರು ಯಾವಾಗಲೂ ನಮ್ಮ ಜೊತೆ ಚೆನ್ನಾಗಿ ಇರುತ್ತಾರೆ ಎಂದು ಹೇಳಲು ಸಾಧ್ಯವಿಲ್ಲ ಇಂದು ಅತಿ ಆತ್ಮೀಯ ಸ್ನೇಹಿತರಾಗಿದ್ದವರು ಮುಂದೆ ಒಂದು ದಿನ ಕಡುವೈರಿಯಾಗಬಹುದು. ಯಾಕೆ ಹೀಗೆ ಯಾಕೆ ಜನ ಯಾವಾಗಲೂ ನಮ್ಮನ್ನು ನೋಯಿಸುತ್ತಾರೆ ಎಂದು ಪದೇಪದೇ ಅನಿಸುತ್ತದೆ. ಅದಕ್ಕೆ ಕಾರಣ ಇಷ್ಟೇ, ಅಪಾತ್ರರಲ್ಲಿ ಅತಿಯಾದ ವಿಶ್ವಾಸವನ್ನು ಇಡುವುದು ನಮ್ಮದೇ ತಪ್ಪು , ಪ್ರತಿಯೊಬ್ಬ ವ್ಯಕ್ತಿಯಲ್ಲಿ ಆದರ್ಶವಾದವನ್ನು ಹುಡುಕುವುದು ಅಸಾಧ್ಯ. ಅದು ಕೆಲಸದವರೇ ಆಗಲಿ, ಸ್ನೇಹಿತರೇ ಆಗಲಿ,ಅಕ್ಕ ಪಕ್ಕದವರಿರಲಿ, ಸಂಬಂಧಿಕರಲ್ಲಿ ಸಹ. ಬದಲಾವಣೆ ಎಂಬುದು ಸಹಜ. ನಾನು ಇವರಿಗೆ ಎಂದೂ ನೋಯಿಸಿಲ್ಲ, ಮೋಸ ಮಾಡಿಲ್ಲ ಆದರೆ ನನಗೆ ಕಷ್ಟ ಎಂದಾಗ ಯಾರು ಬರಲಿಲ್ಲ ಎಂದು ಹಲವು ಸಾರಿ ತುಂಬಾ ಹಳಹಳಿಸುತ್ತೇವೆ. ಆದರೆ ಅದು ಅವರ ಗುಣ. ಹೀಗೆ ಬದುಕುವುದು ನಮ್ಮ ಗುಣ.



ನಮ್ಮಂತೆ ಎಲ್ಲರೂ ಬದುಕಲಿ ಎಂದು ಯೋಚಿಸುವುದು ಶುದ್ಧ ತಪ್ಪು. "ಹುಲಿ ನನ್ನನ್ನು ತಿನ್ನಬಾರದು ಏಕೆಂದರೆ ನಾನು ಹುಲಿಯನ್ನು ತಿನ್ನುವುದಿಲ್ಲ "ಎಂಬ ನಮ್ಮ ಸಮರ್ಥನೆ ಎಷ್ಟು ಅಪಪ್ರಭುದ್ಧವು ಅಷ್ಟೇ ನಾನು ಒಳ್ಳೆಯದರಲ್ಲಿದ್ದೆ ಅವರು ನನ್ನ ಜೊತೆ ಒಳ್ಳೆಯದರಲ್ಲಿ ಇರಬೇಕಾಗಿತ್ತು ಎನ್ನುವ ಧೋರಣೆ ಕೂಡ. ಕೆಲವರು ಅವಕಾಶವಾದಿಗಳಿರುತ್ತಾರೆ, ಕೆಲವರು ಸ್ನೇಹಮಯಿ ಯಾಗುತ್ತಾರೆ. ಕೆಲವರು ಸಂದರ್ಭದಲ್ಲಿ ವಿವಶವಾಗಿಯೂ ಬದಲಾಗುತ್ತಾರೆ. ಹೀಗಾಗಿ ಈ ಬದಲಾವಣೆಯನ್ನು ಒಪ್ಪಿಕೊಳ್ಳಬೇಕು ಜೀವನದಲ್ಲಿ. ಮದುವೆಯಾದ ಮೇಲೆ ಮಗನ ವರ್ತನೆಯಲಿ ಬದಲಾವಣೆ ಬರುವುದು ಸಹಜ. ಮದುವೆಯಾದ ನಂತರ ಮಕ್ಕಳ ವರ್ತನೆಯಲ್ಲಿ ಬದಲಾವಣೆ ಏಕೆಂದರೆ ಹೆಚ್ಚಿದ ಜವಾಬ್ದಾರಿಗಳು ಹೆಚ್ಚಿನ ಸಮಯವನ್ನು ಕೇಳುತ್ತವೆ. ಅದನ್ನು ದೂರುವದಕ್ಕಿಂತ ಅರ್ಥ ಮಾಡಿಕೊಳ್ಳ ಬೇಕು. ಯಾರಾದರೂ ನಮ್ಮ ಮನಸ್ಸನ್ನು ನೋಯಿಸಿದರೆ ನಮಗೆ ಮೋಸ ಮಾಡಿದರೆ ಸ್ನೇಹದಲ್ಲಿ ವಂಚನೆಯಾದಾಗ ನಾವು ಮನಸ್ಸನ್ನು ಸ್ಥಿರ ಮತ್ತು ಸಮಾಧಾನವಾಗಿಟ್ಟುಕೊಳ್ಳುವುದು ಬಹಳ ಮುಖ್ಯ. ಮನಸ್ಸನ್ನು ಸಮಾಧಾನವಾಗಿಟ್ಟುಕೊಳ್ಳಲು ಕೆಲವು ಸೂತ್ರಗಳನ್ನು ಪಾಲಿಸಲೇಬೇಕು.

*ಮೊದಲನೆಯದು ಅವರು ಅತಿಯಾಗಿ ಪ್ರೀತಿ ಪಾತ್ರರಾಗಿದ್ದರೆ ತಪ್ಪು ಯಾರದೇ ಇರಲಿ, ಕ್ಷಮಿಸು ಬಿಡುವ ದೊಡ್ಡ ಮನಸ್ಸನ್ನು ಹೊಂದಿರಬೇಕು. ಕೆಲವು ಸಾರಿ ಅಪಾರ್ಥದಿಂದ ವೈಮನಸುಗಳು ಉಂಟಾಗಿರುತ್ತವೆ . ಹೀಗಾಗಿ ನೇರವಾಗಿ ಮಾತನಾಡಿ ಬಗೆಹರಿಸಿಕೊಳ್ಳಬೇಕು

*ಯಾವದೇ ಗಾಯ ಗುಣವಾಗಲು ಸಮಯ ಬೇಕು. ಹಾಗೆ ಮನಸ್ಸುಗಳಿಗೆ ಗಾಯವಾದಾಗ ಸ್ವಲ್ಪ ಕಾಲಾವಕಾಶ ಕೊಡಿ ತಾನೇ ಗುಣಮುಖವಾಗುತ್ತವೆ.

*ವೈಮನಸ್ಸುಗಳು ಬಂದಾಗ ಹಿಂದೆ ಮಾಡಿದ ಉಪಕಾರಗಳನ್ನು ಸ್ಮರಿಸಿ ಅಂದು ಆಡಿ ತೋರಿಸುವ ಸಣ್ಣತನ ಇರಬಾರದ. ಆಗ ಅವರು ಬೇಕಾಗಿದ್ದರು ಅದಕ್ಕೆ ಅವರಿಗೆ ಸಹಾಯ ಮಾಡಿದ್ದು ನಿಜ. ಆಗ ಸರಿಯನಿಸಿದ್ದು ಆಗ ಮಾಡಬೇಕು. ಈಗ ಸರಿಯನಿಸಿದ್ದು ಈಗ ಮಾಡಬೇಕು.

* ನಾವು ಒಬ್ಬರಿಗೆ ಆತ್ಮೀಯರಾದಾಗ ನಮಗಿಂತ ಅವರಿಗೆ ಬೇರೆ ಯಾರೋ ಹೆಚ್ಚು ಇಷ್ಟವಾದರೆ ಅವರಲ್ಲಿ ಅವರು ತನ್ಮಯರಾಗುವುದು ಸಹಜ. ಆ ಬದಲಾವಣೆಯನ್ನು ನಾವು ಒಪ್ಪಿಕೊಳ್ಳಬೇಕು.

* ಅತಿ ಹೆಚ್ಚಾಗಿ ಯಾರಿಗೂ ಅವಲಂಬಿತರಾಗಬಾರದು ಕೆಲವು ಸಮಯ ಒಂಟಿಯಾಗಿ ಬದುಕುವುದನ್ನು ರೂಢಿ ಮಾಡಿಕೊಳ್ಳಬೇಕು..

* ಆಗಿರುವ ಜಗಳ ಮನಸ್ತಾಪಗಳ ಬಗ್ಗೆ ಅವರಿವರ ಮುಂದೆ ದೂರು ಸಲ್ಲಿಸುವುದಾಗಲಿ ನಾವು ಸರಿ ಅವರು ತಪ್ಪು ಎಂದು ಎತ್ತಿ ತೋರಿಸುವುದಾಗಲಿ, ಮಾಡಲೇಬಾರದು.


* ವಿಶ್ವಾಸವೆನ್ನುವುದು ಬಹು ಅಮೂಲ್ಯವಾದ ವಸ್ತು ಅದನ್ನು ಯಾರದೇ ಕೈಯಲ್ಲಿ ಇರಿಸಬೇಕಾದರೆ ನಾವು ಹಲವು ಬಾರಿ ಯೋಚಿಸಬೇಕು. ಹೀಗೆ ಯಾವುದೇ ಸಂಬಂಧಗಳು ಋಣ ಇದ್ದಷ್ಟು ಸಮಯ ಮಾತ್ರ ನಮ್ಮ ಜೊತೆಗೆ ಇರುತ್ತವೆ.ಋಣ ಮುಗಿದ ನಂತರ ದೂರವಾಗುತ್ತವೆ.

*ಮನಸ್ಸಿಗೆ ತುಂಬಾ ಘಾಸಿಯಾದಾಗ ಧ್ಯಾನ ಮತ್ತು ಪುಸ್ತಕಗಳ ಓದುವಿಕೆ ಅಧ್ಯಾತ್ಮ ಇಂತಹ ಸಂಗತಿಗಳು ಧೈರ್ಯವನ್ನು ಒದಗಿಸುತ್ತವೆ.

ಇನ್ನು ಕೆಲವು ಸಾರಿ ವ್ಯಕ್ತಿ ಕಾರಣಾಂತರಗಳಿಂದ ಅಡಚಣೆ ಗಳಿಂದ ನಮ್ಮಿಂದ ದೂರವಾಗಿರುತ್ತಾರೆ . ಕೆಲವು ಸಾರಿ ತಪ್ಪು ಕಲ್ಪನೆಯಿಂದ ಕೂಡ ಜಗಳಗಳು ಆಗಿರುತ್ತವೆ , ಸಾಧ್ಯವಾದಷ್ಟು ಸಮಾಧಾನದಿಂದ ಇದ್ದಾಗ ಸಮಯ ಸರಿದಂತೆ ಅವು ತಾನೇ ಬಗೆಹರಿದುಕೊಂಡು ಹೋಗುತ್ತವೆ. ಇನ್ನು ಪ್ರಕೃತಿ ಕ್ರಿಯೆಯಿಂದ ಕೆಲವರು ತಮ್ಮ ಭೂಮಿ ಋಣವನ್ನು ಮುಗಿಸಿ ದೂರ ಹೋದಾಗ ಮನಸ್ಸಿಗೆ ತಾಳಲಾಗದಷ್ಟು ನೋವಾಗುತ್ತದೆ. ಆಗ ಪ್ರಾರ್ಥನೆಯ ಹೊರತು ನಮ್ಮ ಕೈಯಲ್ಲಿ ಬೇರೆ ಏನೂ ಇರುವುದಿಲ್ಲ ಅದನ್ನು ಒಪ್ಪಿಕೊಳ್ಳಬೇಕು. ಜೀವನದಲ್ಲಿ ಒಂಟಿ ಭಾವ ಎನಿಸಬಾರದೆಂದರೆ ಸಾಹಿತ್ಯ, ಸಂಗೀತ, ಚಿತ್ರಕಲೆಗಳಂತಹ ಹವ್ಯಾಸವನ್ನು ರೂಢಿಸಿಕೊಳ್ಳಬೇಕು.

ಇಷ್ಟವಾದ ಪುಸ್ತಕವನ್ನು ಓದುವುದು,ಸಂಗೀತವನ್ನು ಕೇಳುವುದು, ಚಿತ್ರ ಬಿಡಿಸುವುದರಿಂದ ಮನಸ್ಸು ಹಗುರಾಗುತ್ತದೆ. ಕೆಲವು ಕಾಲ ಒಂಟಿಯಾಗಿದ್ದು ನಮ್ಮೊಟ್ಟಿಗೆ ನಾವು ಸಮಯವನ್ನು ಕಳೆಯಬೇಕು ಆಗ ನಮಗೆ ಏನು ಬೇಕು ನಮ್ಮಲ್ಲಿ ಆಗಿರುವಂತಹ ಬದಲಾವಣೆ ಏನು, ಅಂತರಂಗದ ಅರಿವು ಬಹಿರಂಗದ ಮೋಹದ ಸಪ್ತ ಚತನ್ಯದ ಪ್ರಾಜ್ಞತೆ ಅರ್ಥವಾಗುತ್ತದೆ. ಮನೋಬಲ ಹೆಚ್ಚಾದಷ್ಟು ಆತ್ಮ ಸ್ಥೈರ್ಯ ಕೂಡ ಹೆಚ್ಚಾಗುತ್ತದೆ.

ಹೀಗೆ ಯಾರದೋ ಒಬ್ಬರಿಂದ ಮೋಸ ಅನ್ಯಾಯ ಆದಾಗ ಜನರಲ್ಲಿ ವಿಶ್ವಾಸ ಕಳೆದುಕೊಂಡು ಬದುಕುವುದು ಜೀವನ ಅಲ್ಲ. ಬಿಸಿಲಿಗೆ ಒಣಗಿದ ಹುಲ್ಲು ಕೂಡ ಮಳೆಗೆ ಮತ್ತೆ ಚಿಗುರುತ್ತವೆ. ಹಾಗೆಂದು ಕಣ್ಣು ಮುಚ್ಚಿಕೊಂಡು ಎಲ್ಲರನ್ನೂ ನಂಬುವದು ಸಲ್ಲದು. ಸರಿಯಾಗಿ ಅರ್ಥಮಾಡಿಕೊಂಡ ನಂತರ ವಿಶ್ವಾಸ ಇಡುವುದು ಒಳ್ಳೆಯದು. ಆದರೂ ವ್ಯಕ್ತಿ ಅನ್ನುವುದು ವಸ್ತುವಲ್ಲ ಎಷ್ಟೇ ಅರ್ಥ ಮಾಡಿಕೊಂಡರು ಕೆಲವೊಮ್ಮೆ ಕ್ಲಿಷ್ಟತೆಗಳು ಉಂಟಾಗುತ್ತವೆ. ಮಗನನ್ನು ತುಂಬಾ ಪ್ರೀತಿಯಿಂದ ಸಾಕಿರುತ್ತಾಳೆ ತಾಯಿ. ಹೆಂಡತಿ ಬಂದ ಮೇಲೆ ಬದಲಾದ ಎಂಬ ಭಾವನೆ ಬರುತ್ತದೆ ಆದರೆ ಬೆಳೆದ ಮಗ ಸುಖವಾಗಿರಲಿ ಎಂದು ತಾಯಿ ತಾನೆ ಅವನಿಗೆ ಸಂಗಾತಿ ಹುಡುಕಿ ಮದುವೆ ಮಾಡಿದ್ದು ಹೀಗಾಗಿ ಅವರ ಸಮಯ ಅವರಿಗೆ ಬಿಟ್ಟು ಪುಸ್ತಕ ಓದುವುದು ಸಂಗೀತ ಕೇಳುವುದು ಇಂತಹ ವಿಷಯಗಳಲ್ಲಿ ಮನಸ್ಸನ್ನು ತೊಡಗಿಸುವುದರಿಂದ ಮನೋವಿಕಾಸವು ಆಗುತ್ತದೆ. ಕೆಲವು ಸಾರಿ ನಾವು ಪಕ್ಷಿಗಳಿಂದ ಕೂಡ ಕಲಿಯುವದು ಬಹಳ.. ಗೂಡು ಕಟ್ಟಿ, ಮೊಟ್ಟೆ ಇಟ್ಟು ಮರಿ ಮಾಡಿ ಗುಟುಕು ಕೊಟ್ಟು ಸಾಕುತ್ತವೆ. ರೆಕ್ಕೆ ಬಂದ ಮೇಲೆ ಮರಿ ಹಾರಿ ಹೋಗುತ್ತವೆ. ಅವಶ್ಯಕತೆ ಮುಗಿದಮೇಲೆ ಗೂಡು ಬಿಟ್ಟು ಪಕ್ಷಿಗಳು ಕೂಡ ಹಾರಿ ಹೋಗುತ್ತವೆ. ಹೀಗೆ ಬದಲಾವಣೆಯನು ಅಪ್ಪಿಕೊಂಡು ಬದಲಾದವರನು ಒಪ್ಪಿಕೊಂಡು ಬದುಕುವದೇ ಜೀವನ.



ಸಾಕ್ಷಿ ಶ್ರೀಕಾಂತ ತಿಕೋಟಿಕರ.

# ಕೈಗಡ

ಸ್ನೇಹಲೋಕ

ಈವತ್ತು ಆದಿತ್ಯವಾರ, ಸ್ವಲ್ಪ ಆರಾಮ ಆಗಿ ಪೇಪರ್ ನೋಡಿಕೋತ ಕೂತಿದ್ದೆ, ಒಳಗಿಂದ ಲತಾನ ಧನಿ ಕೇಳಿಸ್ತು, 'ರೀ, ವಿಂಕಿಟ್ ನಾಗ ಮೊಸರು ಆರ್ಡರ್ ಮಾಡ್ರಿ, 15 ನಿಮಿಷದಾಗ ಬರ್ತದ ಊಟ ಮಾಡಣ' ಅಂತ. ಸರಿ ಅಂದು ಆರ್ಡರ್ ಮಾಡಿದೆ. ಒಂದೇ ಸರೆ ನೆನಪು ಭಾಳ ಹಿಂದಕ್ಕ ಹೋಯ್ತು. ನನಗ 8/9 ವರ್ಷ ಇರಬೇಕು. ಅಮ್ಮ ಅಡಗಿ ಮಾಡ್ತಿದ್ಲು, ಅಡಗಿಮನಿಯಿಂದನೇ ಹೇಳಿದ್ಲು, 'ಪುಟ್ಟಾ, ರಾಚಮ್ಮ ಅವರ ಮನೀಗೆ ಹೋಗಿ ಸ್ವಲ್ಪ ಖಾರಪುಡಿ ಇಸ್ಕೊಂಡು ಬಾ , ಹುಳೀಗೆ ಹಾಕ್ಲಿಕ್ಕೆ ಬೇಕಾಗ್ಯದ, ಮನ್ಯಾಗ ಮುಗದು ಹೋಗ್ಯದ, ಹಂಗ, ಅಳತಿ ನೋಡ್ಕೋ' ಅಂತ. ನಾನು ಒಂದು ಸಣ್ಣ ಬಟ್ಲ ತೊಗೊಂಡು ರಾಚಮ್ಮಕ್ಕ ಅವರ ಮನೀಗೆ ಹೋಗಿ ಖಾರಪುಡಿ ಇಸ್ಕೊಂಡು ಬಂದೆ. ಈ ವಿಷಯ ಪೂರ್ತಿ ಆಗsದು ನಾವು ಕಿರಾಣಿ ತಂದು, ಅದೇ ಅಳತಿ ಖಾರಪುಡಿನ ವಾಪಸ್ ಕೊಟ್ಟ ಮ್ಯಾಲೆ!!

ನನಗ ಅನಸ್ತದ, ಇದು ಇಂದಿನ ಯಾವ ಆನ್ಲೈನ್, ಇನ್ಸ್ಟಾ ಮಾರ್ಟ ಖರೀದಿಗೆ ಕಡಿಮಿ ಅದ ಅಂತ, 5 ನಿಮಿಷದೊಳಗ ಆರ್ಡರ್, ಡೆಲವರಿ ಮುಗದs ಹೋಯ್ತು, ಮತ್ತ ಈ ವ್ಯವಹಾರದೊಳಗ ರೊಕ್ಕದ ಪಾತ್ರನ ಇಲ್ಲ!!!

ಹಿಂಗs ಸಕ್ರಿ, ಹಾಲು, ಭಾ ಪುಡಿ, ಎಣ್ಣಿ, ಅಕ್ಕಿ, ಬ್ಯಾಳಿ ಗಳ ವಿನಿಮಯ ನಿರಂತರ ನಡೀತಿತ್ತು!!

ಈ ಆನ್ಲೈನ್ ವ್ಯವಸ್ಥಾಕ್ಕ "ಕೈಗಡ" ಅಂತ ಹೆಸರು.

ಕೆಲವು ಸರೇ ಯಾರರ ಮನೀಗೆ ಬಂದಾಗ ಸಕ್ರಿನೋ, ಛಾಪುಡಿನೋ ಕೈಗಡ ತರಸದು ಒಂದು ಕಲೇನೇ ಸರಿ, ಯಾಕಂದ್ರ, ಬಂದವರಿಗೆ ಗೊತ್ತಾಗ್ಧಂಗ ತರಿಸಬೇಕು, ತರೋ ಪಾತ್ರಿ ಮುಚ್ಚಿ ಇಟಗೊಂಡೋ, ಹಿತ್ತಲ ಬಾಗ್ಲೆನೋ ವ್ಯವಸ್ಥಾ ಆಗಬೇಕು!!

ಇನ್ನು ಕೆಲವು ಕೈಗಡದ ವಸ್ತುಗಳನ್ನ ವಾಪಸ್ ಕೊಡೋ ಅಗತ್ಯ ಇರ್ತಿರಲಿಲ್ಲ, ಉದಾಹರಣೆ, ಹೆಪ್ಪಿಗೆ ಅಂತ ತೊಗೊಂಡ ಮೊಸರು, 2 ಮೆಣಸಿನಕಾಯಿ, ಅರ್ಧ ನಿಂಬಿ ಹಣ್ಣು ಇತ್ಯಾದಿ.

ಕೆಲವು ವಿಶೇಷ ಸಂದರ್ಭದೊಳಗ ಕೇಳಲಾರದೇ ವಸ್ತುಗಳ ವಿನಿಮಯ ಆಗ್ತಿದ್ವು!! ಹೆಂಗಂದ್ರ, ಬಾಜು ಮನಿ ಮಂಗಳಾ ಬಂದು, 'ವೈನಿ, ನಿನ್ನೆ ಹುಣಸೀಕಾಯಿ ಭಾಳ ಸೋವಿ ಇದ್ವಂತ, ನಮ್ಮನಿಯವರು ಚೀಲದ ತುಂಬ ತಂದು ಬಿಟ್ಟಾರ ನೋಡ್ರಿ, ಅದಕ್ಕ ನಿಮಗಿಷ್ಟು ಕಮಲಕ್ಕಗಿಷ್ಟು ಕೊಟ್ಟು ಹೋಗಣ ಅಂತ ಬಂದೆ' ಅಂತ ಕೊಟ್ಟಾಗ ಅದು ವಾಪಸ್ ಕೊಡೋದು ಅಲ್ಲ ಅಂತ ಇಬ್ರಿಗೂ ಗೊತ್ತು!!!

ಈ ಕೈಗಡದ ಸುದ್ದಿ ಇಷ್ಟಕ್ಕ ಮುಗಿಯsದಲ್ಲ!

ದಿನಾ ಸಂಜೀಮುಂದ ಅಕ್ಕಪಕ್ಕದ ಮನಿ ಹೆಂಗಸರು ಯಾರದರ ಒಬ್ರ ಮನಿ ಕಟ್ಟಿಮ್ಯಾಲೆ ಕೂತು ಹರಟಿ ಹೊಡಿಯsದೇ ಒಂದು ಸಂಭ್ರಮ ಮತ್ತ ಟೈಂ ಪಾಸ್ ನ ರೀತಿ.

ಹರಟಿ ಮುಗಿಯಹೊತ್ತಿಗೆ ಯಾರರ ಒಬ್ರು 'ಮಧ್ಯಾಣ ಮಾಡಿದ ಹುಳಿ ಭಾಳ ಉಳಕೊಂಡದ, ಯಾರಿಗರ ಬೇಕೇನು' ಅಂತಾಗ್ಲಿ ಅಥವಾ 'ಯಾರಮನ್ಯಾಗರ ಸಾರು ಮಿಕ್ಯದೇನು, ನಮ್ಮನ್ಯಾಗ ಅನ್ನ ಒಂದs ಉಳದದ' ಅಂತ ಕೇಳದ್ರೊಳಗ ಯಾವ ಮಜುಗರನೂ ಇರ್ತಿರಲಿಲ್ಲ!!

ಒಂದು ಮಾತ್ರ ಖರೇ, ಈ ವ್ಯವಹಾರದಾಗ ಶಿಸ್ತುನೂ ಅಷ್ಟೇ ಮುಖ್ಯ, ಇಸ್ಕೊಳದು, ವಾಪಸ್ ಕೊಡೋದ್ರಾಗ.

ಇಲ್ಲಾ ಅಂದ್ರ ಅದರ ಪರಿಣಾಮ ಬ್ಯಾರೇ ಇರ್ತದ!!!

ಹೆಂಗಂದ್ರ, 'ಉಷಕ್ಕಾ, ಸ್ವಲ್ಪ ಸಕ್ರೀ ಕೊಡ್ತೀರೇನು' ಅಂದ್ರ 'ಅಯ್ಯ, ನಮ್ಮನ್ಯಾಗೂ ಮುಗದು ಹೋಗ್ಯದ ನೋಡ್ರಿ, ನಾನs ನಿಮ್ಮನ್ನ ಕೇಳಣ ಅಂತಿದ್ದೆ' ಅನ್ನೋ ಉತ್ತರ ಸಿಗ್ತದ!!!



ಸ್ನೇಹಾ ಆನಂದ್

ಮತ್ತೇ ಲತಾನ ಧನಿ ಕೇಳಿ ನೆನಪಿಂದ ಹೊರಗ ಬಂದೆ!!ಈಕಿ 'ರೀ... ಮೊಸರು ಬಂತೇನು ನೋಡ್ರಿ' ಅನ್ನೋದಕ್ಕೂ, ವಿಂಕಿಟ್ ನ ಡೆಲೆವರಿಯವ್ರು ಬೆಲ್ ಮಾಡದಕ್ಕೂ ಸರಿ ಆತು.



# ಪೋಕ್ಸೋ: ಲಿಂಗ ಭೇದವಿಲ್ಲದ ಕಾಯ್ದೆ

ಇಂದಿನ ನಾವೀನ್ಯ ತಂತ್ರಜ್ಞಾನ ಯುಗದಲ್ಲಿ ಯಾರೊಬ್ಬರೂ ಸುರಕ್ಷಿತರಲ್ಲ ಎನ್ನುವುದು ನಿತ್ಯಸತ್ಯ. ಮನೆಯಿಂದ ಹೊರಹೋದವ ಮತ್ತೆ ವಾಪಸ್ ಬರುತ್ತಾನೆ ಎನ್ನುವ ಭರವಸೆ ಇಲ್ಲ. ಇತ್ತ ಮನೆಯಲ್ಲೇ ಇದ್ದವರೂ ಸುರಕ್ಷಿತವಾಗಿರುತ್ತಾರೆ ಅಂತ ನಂಬುವುದಕ್ಕೂ ಆಗುವುದಿಲ್ಲ. ಇನ್ನು ಮಕ್ಕಳ ಸ್ಥಿತಿಯಂತೂ ಹೇಳಿಕೊಳ್ಳುವುದೇ ಬೇಡ. ಮಕ್ಕಳು ಹೊರಗಿನ ಅಪರಿಚಿತ ವ್ಯಕ್ತಿಗಳಿಂದಷ್ಟೇ ಅಲ್ಲ, ಮನೆಯೊಳಗೇ ಇರುವ ಪರಿಚಿತ ವ್ಯಕ್ತಿಗಳಿಂದಲೂ ವಿವಿಧ ರೀತಿಯ ದೌರ್ಜನ್ಯಕ್ಕೆ ಮಾನಸಿಕ, ದೈಹಿಕ ಕಿರುಕುಳಕ್ಕೆ ಒಳಗಾಗುತ್ತಾರೆ. ಹೀಗೆ ಮಕ್ಕಳ ಮೇಲೆ ನಡೆಯುವ ಲೈಂಗಿಕ ಹಾಗೂ ಇತರೇ ಪ್ರಕಾರದ ದೌರ್ಜನ್ಯಗಳನ್ನು ತಡೆಯುವ ನಿಟ್ಟಿನಲ್ಲಿ 2012ರಲ್ಲಿ ಜಾರಿಗೆ ಬಂದಿದ್ದೇ ಪೋಕ್ಸೋ ಕಾಯ್ದೆ (ಕಔಅಖಔ ಂಛಿಣ).

ಮಕ್ಕಳು ಲೈಂಗಿಕ ದೌರ್ಜನ್ಯಕ್ಕೆ ಗುರಿಯಾಗುವುದನ್ನು ತಡೆಯಲು ವಿಶೇಷ ಕಾಯ್ದೆಯೊಂದರ ಅಗತ್ಯ ಇದೆ ಎಂಬ ಉದ್ದೇಶದಿಂದ ಪೋಕ್ಸೊ ಕಾಯ್ದೆಯನ್ನು ರೂಪಿಸಲಾಗಿದೆ. ಈ ಕಾಯ್ದೆಯ ಉದ್ದೇಶವು ಒಂದು ಹಂತದವರೆಗೆ ಈಡೇರಿದೆ ಕೂಡ.ಆದರೆ ನಮ್ಮ

ಕರ್ನಾಟಕದ ರಾಜ್ಯದಲ್ಲಿ ಅಪ್ರಾಪ್ತ ವಯಸ್ಸಿನ ಬಾಲಕಿಯರ ಮೇಲೆ ಲೈಂಗಿಕ ದೌರ್ಜನ್ಯ , ಕಿರುಕುಳದಂತಹ ಪ್ರಕರಣಗಳು ವರದಿಯಾಗುತ್ತಿವೆ. ಅಘಾತಕಾರಿ ಸಂಗತಿ ಏನಂದರೆ, ರಾಜ್ಯದಲ್ಲಿ ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣಾ ಕಾಯ್ದೆ ಅಡಿಯಲ್ಲಿ ಪ್ರಕರಣಗಳ ಅಡಿಯಲ್ಲಿ ಕಳೆದ 5 ವರ್ಷಗಳಲ್ಲಿ 12,943 ಪ್ರಕರಣಗಳು ದಾಖಲಾಗಿವೆ.ಕರ್ನಾಟಕವು 2023 ರಲ್ಲಿ 3,902 ಮತ್ತು 2024 ರಲ್ಲಿ 4,064 ಪೋಕ್ಸೊ ಪ್ರಕರಣಗಳನ್ನು ದಾಖಲಿಸಿದೆ ಎಂದು ದತ್ತಾಂಶಗಳು ತೋರಿಸುತ್ತವೆ. ಈ ವರ್ಷದ ಜುಲೈ ವೇಳೆಗೆ, 2,544 ಪ್ರಕರಣಗಳು ದಾಖಲಾಗಿದ್ದು, ಅವುಗಳಲ್ಲಿ 1,927 ಪ್ರಕರಣಗಳಲ್ಲಿ ತೀರ್ಪು ನೀಡಲಾಗಿದೆ ಹೀಗಾಗಿ ಪೋಕ್ಸೋ ಪ್ರಕರಣಗಳಲ್ಲಿ ಶಿಕ್ಷೆಯ ಪ್ರಮಾಣ ಕಡಿಮೆಯಾಗುತ್ತಿದೆ. ಇನ್ನೂ ನಮ್ಮ ದೇಶದ ಭಾರತದಲ್ಲಿ 'ಇನ್‌ಟು ದಿ ಲೈಟ್ ಇಂಡೆಕ್ಸ್ 2025' ವರದಿಯ ಯಂತೆ 2017 ಮತ್ತು 2022ರ ನಡುವೆ ಪೋಕ್ಸೊ ಕಾಯ್ದೆಯಡಿ ದಾಖಲಾದ ಮಕ್ಕಳ ಲೈಂಗಿಕ ದೌರ್ಜನ್ಯ ಪ್ರಕರಣಗಳ ಸಂಖ್ಯೆ ಶೇ 94ರಷ್ಟು ಏರಿಕೆಯಾಗಿದೆ. ಇದು 33,210 ರಿಂದ 64,469ಕ್ಕೆ ಹೆಚ್ಚಳವಾಗಿದೆ.

ಭಾರತ, ನೇಪಾಳ ಮತ್ತು ಶ್ರೀಲಂಕಾದಲ್ಲಿ ನಡೆಸಿದ ಸಮೀಕ್ಷೆಯ ದತ್ತಾಂಶದ ಪ್ರಕಾರ, ಈ ದೇಶಗಳಲ್ಲಿ ಎಂಟು ಮಕ್ಕಳ ಪೈಕಿ ಒಬ್ಬರು (ಶೇ 12.5) 18 ವರ್ಷ ತುಂಬುವ ಮೊದಲೇ ಲೈಂಗಿಕ ದೌರ್ಜನ್ಯ ಅಥವಾ ಅತ್ಯಾಚಾರಕ್ಕೆ ಒಳಗಾಗುತ್ತಿದ್ದಾರೆ. ಇದು ಮೂರು ರಾಷ್ಟ್ರಗಳಲ್ಲಿ ಸುಮಾರು 54 ಮಿಲಿಯನ್ (5.4 ಕೋಟಿ) ಮಕ್ಕಳ ಮೇಲೆ ಪರಿಣಾಮ ಬೀರುತ್ತದೆ.

ಈ ಕಾಯ್ದೆಯ ಅರಿವಿದ್ದರೂ ಅತ್ಯಾಚಾರದಂತಹ ಪ್ರಕರಣಗಳು ನಿರಂತರವಾಗಿ ನಡೆಯುತ್ತಲೇ ಇವೆ ಎನ್ನುವುದು ತೀವ್ರ ಕಳವಳಕಾರಿ ಸಂಗತಿ.


ಈ ಕಾಯ್ದೆಯ ಕಾರಣದಿಂದಾಗಿ ಹಲವು ಅಪರಾಧಿಗಳು ಶಿಕ್ಷೆಗೆ ಗುರಿಯಾಗಿದ್ದಾರೆ. ಆದರೆ ರಕ್ಷಣೆಗೆ ಅಗತ್ಯವಾದ ಕ್ರಮ ಎಂದು ಕಾಣಲಾದ ಈ ಕಾಯ್ದೆಯು ಅನುಷ್ಠಾನದ ಹಂತದಲ್ಲಿ ಹಲವು ಸಮಸ್ಯೆಗಳನ್ನೂ ಸೃಷ್ಟಿಸಿದೆ. ಸಹಜವಾದ ಸಂಬಂಧಗಳಿಗೆ ಶಿಕ್ಷೆ ವಿಧಿಸಲು ಈ ಕಾಯ್ದೆಯನ್ನು ಒಂದು ಅಸ್ತ್ರವನ್ನಾಗಿ ಬಳಕೆ ಮಾಡಿಕೊಂಡ ನಿದರ್ಶನಗಳಿವೆ. ಈ ಕಾಯ್ದೆಯ ಪ್ರಕಾರ, 18 ವರ್ಷಕ್ಕಿಂತ ಕಡಿಮೆ ವಯಸ್ಸಿನ ಹೆಣ್ಣು ಯಾವುದೇ ಸಂದರ್ಭದಲ್ಲಿಯೂ ಲೈಂಗಿಕ ಸಂಪರ್ಕಕ್ಕೆ ಸಮ್ಮತಿ ನೀಡುವಂತಿಲ್ಲ. ಅಂದರೆ, 18 ವರ್ಷಕ್ಕಿಂತ ಕಡಿಮೆ ವಯಸ್ಸಿನ ಹೆಣ್ಣಿನ ಜೊತೆ ಲೈಂಗಿಕ ಸಂಬಂಧ ಬೆಳೆಸುವುದು ಅಪರಾಧವಾಗುತ್ತದೆ. ಆದರೆ, ಕಳೆದ ಕೆಲವು ವರ್ಷಗಳಲ್ಲಿ ಸಾಮಾಜಿಕ ಕಟ್ಟುಪಾಡುಗಳು, ಯುವಜನರ ನಡುವಿನ ಸಂಬಂಧಗಳ ಸ್ವರೂಪ ಬಹಳಷ್ಟು ಬದಲಾಗಿದೆ. ಹದಿಹರೆಯದವರು ಪರಸ್ಪರರನ್ನು ಪ್ರೀತಿಸುತ್ತಾರೆ, ತಮ್ಮ ಸಂಬಂಧದ ಆಳ ಎಷ್ಟೆಂಬುದನ್ನು ಅನ್ವೇಷಿಸಲು ಮುಂದಾಗುತ್ತಾರೆ. ಆದರೆ, ಸಹಮತದ ಸಂಬಂಧವು ಕೆಲವು ಸಂದರ್ಭಗಳಲ್ಲಿ ಯುವಕನನ್ನು ಮಾತ್ರ ಕಾನೂನಿನ ಸುಳಿಗೆ ಸಿಲುಕಿಸಿ, ಜೈಲಿಗೆ ತಳ್ಳುತ್ತದೆ.

ಪೋಕ್ಸೋ ಕಾಯ್ದೆಯಡಿ ದಾಖಲಾದ ಎಫ್‌ಐಆರ್ ರದ್ದಾಗುವುದಿಲ್ಲ.

ಐಪಿಸಿಯ ಸೆಕ್ಷನ್ 354 ಮತ್ತು ಪೋಕ್ಸೊ ಕಾಯಿದೆಯ ಸೆಕ್ಷನ್ 8 ಹೊರತುಪಡಿಸಿ, ಉಳಿದೆಲ್ಲ ಸೆಕ್ಷನ್‌ಗಳು ಜಾಮೀನು ಪಡೆಯುತ್ತವೆ. ಅದರ ಹೊರತಾಗಿ ಪೋಕ್ಸೊ ಕಾಯ್ದೆಯಡಿ ಶಿಕ್ಷಾರ್ಹ ಅಪರಾಧಗಳಿಗೆ ದಾಖಲಿಸಲಾದ ಎಫ್‌ಐಆರ್ ಅನ್ನು ರಾಜಿ ಆಧಾರದ ಮೇಲೆ ರದ್ದುಗೊಳಿಸಲು ಆಗುವುದಿಲ್ಲ ಎಂದು ನ್ಯಾಯಾಲಯ ಹೇಳಿದೆ. ಆದರೆ ತಡವಾಗುವ ಮೊದಲು ಎಫ್‌ಐಆರ್ ರದ್ದುಗೊಳಿಸುವ ಅರ್ಜಿಯನ್ನು ಸಲ್ಲಿಸಬಹುದು. ಹೈಕೋರ್ಟ್‌ನ ರದ್ದುಗೊಳಿಸುವ ಅಧಿಕಾರವು ನ್ಯಾಯಾಲಯದ ವಿವೇಚನಾ ಅಧಿಕಾರವಾಗಿದೆ. ದಂಡ ವಿಧಿಸುವ ಮತ್ತು ಎಫ್‌ಐಆರ್ ರದ್ದುಗೊಳಿಸುವ ಅಧಿಕಾರ ಹೈಕೋರ್ಟ್‌ಗೆ ಇದೆ.

ಅತ್ಯಾಚಾರ ಪ್ರಕರಣದಲ್ಲಿ ಕಾನೂನು ಸಂಘರ್ಷಕ್ಕೆ ಒಳಗಾದ ಮಕ್ಕಳ ಹೇಳಿಕೆ ಅತಿ ಮುಖ್ಯ. ಕೆಲವು ಪ್ರಕರಣಗಳಲ್ಲಿ ಕುಟುಂಬ ಅಥವಾ ಬೇರೆಯವರ ಒತ್ತಡದಿಂದ ಅಥವಾ ಸಾಮಾಜಿಕ ಕಳಂಕದ ಭೀತಿಯಿಂದ ತಮ್ಮ ಹೇಳಿಕೆಗಳನ್ನು ಬದಲಿಸಿಬಿಡುತ್ತಾರೆ. ಸ್ವಯಂ ಪ್ರೇರಣೆಯಿಂದ ಹೇಳಿಕೆ ದಾಖಲಿಸುವಂತೆ ಮನವಿ ಮಾಡುತ್ತೇವೆ. ಅನೇಕ ಮಕ್ಕಳು ಸ್ವಯಂಪ್ರೇರಿತ ಹೇಳಿಕೆ ನೀಡಲು ನಿರಾಕರಿಸುತ್ತಾರೆ .

ಅತ್ಯಾಚಾರ ಆದ 24 ಗಂಟೆಗಳ ಒಳಗಾಗಿ ಸಂತ್ರಸ್ತೆಯ ವೈದ್ಯಕೀಯ ಪರೀಕ್ಷೆ ಆಗಬೇಕು. ಘಟನೆ ಸ್ಥಳದಲ್ಲಿ ವಿಧಿವಿಜ್ಞಾನ ತಂಡ ಸಾಕ್ಷ್ಯಾಧಾರ ಸಂಗ್ರಹಿಸಬೇಕು. ಕೆಲವು ಪ್ರಕರಣಗಳಲ್ಲಿ ಆರೋಪಿಯನ್ನು ಮದುವೆಯಾಗುವಂತೆ ಅನ್ಯಾಯಕ್ಕೊಳಗಾದ ಅಪ್ರಾಪ್ತೆಗೆ ಒತ್ತಾಯಿಸಲಾಗುತ್ತದೆ. ಇದರಿಂದ ನ್ಯಾಯ ಮರೀಚಿಕೆಯಾಗುತ್ತದೆ. ಹೀಗಾಗಿ, ಉಪ–ಕಂದಾಯ ವಿಭಾಗಕ್ಕೆ ಒಂದು ಮಕ್ಕಳ ಕಲ್ಯಾಣ ಸಮಿತಿ ರಚಿಸಬೇಕು. ಬಹುತೇಕ ಪ್ರಕರಣಗಳಲ್ಲಿ ತನಿಖಾ ತಂಡಗಳು ಸೂಕ್ತ ಸಾಕ್ಷ್ಯಾಧಾರಗಳನ್ನು ಕಲೆ ಹಾಕಿದರೆ




ಆರೋಪಿಗಳಿಗೆ ಶಿಕ್ಷೆ ಆಗಬಹುದು.

ಕೆಲ ಪ್ರಕರಣಗಳಲ್ಲಿ ತಾನು ಪ್ರೀತಿಸುತ್ತಿದ್ದ ಯುವಕನಿಂದ ಬಾಲಕಿ ಮೇಲೆ ಅತ್ಯಾಚಾರ ನಡೆಯುತ್ತದೆ. ಇನ್ನೂ ಕೆಲ ಪ್ರಕರಣಗಳಲ್ಲಿ ಅತ್ಯಾಚಾರ ಮಾಡಿದವನು ಪ್ರಬಲ ಆಗಿರುತ್ತಾನೆ. ಬಡ ಕುಟುಂಬಸ್ಥರು ಅವರ ವಿರುದ್ಧ ದೂರು ದಾಖಲಿಸಿ, ನ್ಯಾಯಾಲಯಕ್ಕೆ ಅಲೆದಾಡುವುದು ಬೇಡವೆಂದು ಪಾಲಕರು ಪ್ರಕರಣವನ್ನು ಗಂಭೀರವಾಗಿ ಪರಿಗಣಿಸುತ್ತಿಲ್ಲ. ಪೋಕ್ಸೋ ಕಾಯ್ದೆಯಡಿ ದಾಖಲಾದ ಹೆಚ್ಚಿನ ಪ್ರಕರಣಗಳಲ್ಲಿ ಪರಿಚಯಸ್ಥರು, ಅಪರಿಚಿತರು ಮತ್ತು ನೆರೆಹೊರೆಯವರೇ ಬಾಲಕಿಯರ ಮೇಲೆ ಲೈಂಗಿಕ ದೌರ್ಜನ್ಯ ಎಸಗಿರುವುದು ಕಂಡುಬರುತ್ತದೆ.

ಹೆಚ್ಚಿನ ಪೋಕ್ಸೋ ಪ್ರಕರಣಗಳು ಪ್ರೇಮ ಪ್ರಕರಣಗಳಿಂದಾಗಿ ದಾಖಲಾಗುತ್ತಿದೆ. ಆದರೆ ಶಿಕ್ಷೆಯ ಪ್ರಮಾಣವೂ ಇಂತಹ ಪ್ರಕರಣಗಳಲ್ಲಿ ಕಡಿಮೆ ಆಗುತ್ತಿರುವುದು ಆತಂಕಕ್ಕೆ ಕಾರಣವಾಗಿದೆ. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಮಾಹಿತಿಯ ಪ್ರಕಾರ, ಸಾರ್ವಜನಿಕ ಜೀವನದಲ್ಲಿ ಪೋಷಕರು ಅಥವಾ ಸಂತ್ರಸ್ತ ಕುಟುಂಬಸ್ಥರು ತಮ್ಮ ಘನತೆಗೆ ಪ್ರತಿಕೂಲ ಪರಿಣಾಮ ಉಂಟಾಗುತ್ತದೆ ಎಂಬ ಕಾರಣಕ್ಕಾಗಿ ಕಾನೂನು ಪ್ರಕ್ರಿಯೆಗಳಿಗೆ ಸೂಕ್ತ ರೀತಿಯಲ್ಲಿ ಸ್ಪಂದಿಸುತ್ತಿಲ್ಲ.ಹೆಚ್ಚಿನ ಪ್ರಕರಣಗಳಲ್ಲಿ ಆರೋಪಿಗಳು ಮತ್ತು ನೊಂದವರು ಸಂಧಾನಗಳ ಮೂಲಕ ರಾಜಿ ಮಾಡಿಕೊಳ್ಳುವುದು. ನ್ಯಾಯಾಲಯದ ವಿಚಾರಣೆ ವೇಳೆಯಲ್ಲಿ ಪ್ರತಿಕೂಲ ಸಾಕ್ಷಿ ನುಡಿಯುವುದು. ಅತ್ಯಾಚಾರ ಪ್ರಕರಣಗಳಲ್ಲಿ ನ್ಯಾಯಾಲಯ ವಿಚಾರಗಳಿಗೆ ಹಾಜರಾಗಲು ನಿರಾಸಕ್ತಿ ವಹಿಸುವ ಕಾರಣ ಶಿಕ್ಷೆಯ ಪ್ರಮಾಣ ಕಡಿಮೆಯಾಗಿದೆ. ಆದರೆ, ಅತ್ಯಾಚಾರ ಪ್ರಕರಣಗಳಲ್ಲಿ ಶಿಕ್ಷೆ ಪ್ರಮಾಣವನ್ನು ಹೆಚ್ಚಿಸುವ ನಿಟ್ಟಿನಲ್ಲಿ ನಿರ್ಭಯ ಕೇಂದ್ರ (ಖಟಣಜರಡಿಚಣಜಜ ಣಠಿಠಿಂಡಿಣ ಛಿಜಟಣಡಿಜ ಜಿಂಡಿ ತಿಂಟಜಟ ಚಿಟಜ ಛಿಟಜಡಿಜಟ) ದಲ್ಲಿ ಶೋಷಣೆಗೊಳಗಾದ ಮಹಿಳೆಗೆ ಒಂದೇ ಸೂರಿನಡಿಯಲ್ಲಿ ವೈದ್ಯಕೀಯ ಚಿಕಿತ್ಸೆ, ಆಪ್ತ ಸಮಾಲೋಚನೆ ಕಾನೂನು ನೆರವು ಒದಗಿಸಲಾಗುತ್ತಿದೆ

'ಲಿಂಗ ಭೇದವಿಲ್ಲದ ಕಾಯಿದೆ

ಲೈಂಗಿಕ ಅಪರಾಧಗಳಿಂದ ಮಕ್ಕಳನ್ನು ರಕ್ಷಿಸುವ(ಪೋಕ್ಸೋ)ಕಾಯ್ದೆಗೆ 'ಲಿಂಗ ಭೇದವಿಲ್ಲ', ಪುರುಷರಿಗೂ, ಮಹಿಳೆಯರಿಗೂ ಸಮಾನ ಅನ್ವಯ ಎಂದು ಅಭಿಪ್ರಾಯ ಪಟ್ಟಿರುವ ಹೈಕೋರ್ಟ್, ಅಪ್ರಾಪ್ತ ವಯಸ್ಸಿನ ಬಾಲಕನೊಬ್ಬನ ಮೇಲೆ ಲೈಂಗಿಕ ದೌರ್ಜನ್ಯವೆಸಗಿದ ಆರೋಪದಲ್ಲಿ 52 ವರ್ಷದ ಮಹಿಳೆಯ ವಿರುದ್ಧ ದಾಖಲಾಗಿದ್ದ ಪ್ರಕರಣವನ್ನು ರದ್ದುಪಡಿಸಲು ನಿರಾಕರಿಸಿದೆ.

ಪೋಕ್ಸೋ ಕಾಯ್ದೆಯಡಿ ತನ್ನ ವಿರುದ್ಧ ಹೆಚ್‌ಎಎಲ್ ಠಾಣೆಯಲ್ಲಿ ದಾಖಲಾಗಿರುವ ಎಫ್‌ಐಆರ್ ಮತ್ತು ಪ್ರಕರಣದ ಅಧೀನ ನ್ಯಾಯಾಲಯದ ವಿಚಾರಣೆ ರದ್ದುಪಡಿಸುವಂತೆ ಕೋರಿ ಚಿತ್ರ ಕಲಾವಿದೆಯಾಗಿರುವ ಅರ್ಚನಾ ಪಾಟೀಲ್ ಎಂಬುವರು ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ನ್ಯಾಯಪೀಠ ಈ ಆದೇಶ ನೀಡಿದೆ.

ಅಲ್ಲದೆ, ಪ್ರಗತಿ ಪರ ಕಾಯ್ದೆಯಾಗಿರುವ ಪೋಕ್ಸೋ ಅಪ್ರಾಪ್ತರ ಪಾವಿತ್ರ್ಯ ಕಾಪಾಡುವ ಉದ್ದೇಶದಿಂದ ರಚನೆ ಮಾಡಲಾಗಿದೆ. ಈ ಕಾಯ್ದೆಯಲ್ಲಿ ಲಿಂಗ ಭೇದವಿಲ್ಲ. ಲಿಂಗ ಅಸಮಾನತೆ ಪರಿಗಣಿಸದೆ ಮಕ್ಕಳ ರಕ್ಷಣೆ ಮಾಡುವುದು ಕಾಯ್ದೆ ಮುಖ್ಯ ಉದ್ದೇಶವಾಗಿದೆ ಎಂದು ತಿಳಿಸಿದೆ. ಪೋಕ್ಸೋ ಕಾಯ್ದೆ ಸೆಕ್ಷನ್‌ಗಳ 4 ಮತ್ತು 6ರ ಅಡಿಯಲ್ಲಿ ಶಿಕ್ಷೆ ವಿಧಿಸುವ ಸಂಬಂಧ ಸೆಕ್ಷನ್ 3 ಮತ್ತು 5ರಲ್ಲಿ ಸವಿವರವಾಗಿ ವಿವರಿಸಿದ್ದು, ಕೆಲವು ನಿಯಮಗಳಲ್ಲಿ ಲಿಂಗ ಆಧಾರಿತ ಸರ್ವನಾಮಗಳನ್ನು ಬಳಕೆ ಮಾಡಲಾಗಿದ್ದು, ಮಕ್ಕಳ ಮೇಲೆ ನಡೆಯುವ ದೌರ್ಜನ್ಯವನ್ನು ವಿವರಿಸಲಾಗಿದೆ. ಸೆಕ್ಷನ್ 4 ರಲ್ಲಿ ವಿವರಿಸಿರುವ ಅಂಶಗಳು ಪುರುಷ ಮತ್ತು ಮಹಿಳೆ ಇಬ್ಬರಿಗೂ ಅನ್ವಯವಾಗಲಿವೆ. ಈ ಪ್ರಕರಣದಲ್ಲಿ ಸೆಕ್ಷನ್ 4 ಮತ್ತು 6ರಲ್ಲಿ ವಿವರಿಸಿರುವಂತೆ ಅರ್ಜಿದಾರರ ವಿರುದ್ಧದ ಆರೋಪಗಳು ಸ್ಪಷ್ಟವಾಗಿವೆ ಎಂದು ಪೀಠ ತನ್ನ ಆದೇಶದಲ್ಲಿ ವಿವರಿಸಿದೆ.

ಲೈಂಗಿಕ ಪ್ರಕರಣಗಳಲ್ಲಿ ಮಹಿಳೆ ಮೃದು ಸ್ವಭಾವದವರಾಗಿದ್ದು ನಿಷ್ಕ್ರಿಯವಾಗಿ ಭಾಗಿಯಾಗುತ್ತಾರೆ. ಪುರುಷರು ಸಕ್ರಿಯವಾಗಿ ಭಾಗವಹಿಸುತ್ತಾರೆ ಎಂಬುದು ಪುರಾತನ ಪರಿಕಲ್ಪನೆಯಾಗಿದ್ದು, ತಿರಸ್ಕರಿಸಬೇಕಾಗಿದೆ ಎಂದು ಅಭಿಪ್ರಾಯ ಪಟ್ಟಿರುವ ನ್ಯಾಯಪೀಠ, ಮಹಿಳೆಯ ವಿರುದ್ಧದ ಪ್ರಕರಣ ರದ್ದುಪಡಿಸುವುದಕ್ಕೆ ಸಾಧ್ಯವಿಲ್ಲ ಎಂದು ಪೀಠ ತಿಳಿಸಿದೆ.

ಘಟನೆಯಿಂದ ಸಂತ್ರಸ್ತ ಅನುಭವಿಸಿರುವ ಮಾನಸಿಕ ಆಘಾತ ಗಮನಿಸಿದರೆ, ಸಂಭೋಗದ ಸಾಧ್ಯತೆ ಇರುವುದಿಲ್ಲ. ಹೆಚ್ಚಿನ ವಯಸ್ಸಿನ ಅಂತರ ಇರುವುದರಿಂದ ಆರೋಪಿ ಮಹಿಳೆ ಸಂತ್ರಸ್ತನೊಂದಿಗೆ ಲೈಂಗಿಕ ಕ್ರಿಯೆಯಲ್ಲಿ ಅದೂ ಬಲವಂತದ ಸಂಭೋಗದಲ್ಲಿ ತೊಡಗುತ್ತಾರೆಂದು ಹೇಳಲಾಗದು. ಮಾನಸಿಕ ಆಘಾತವು ಯಾವಾಗಲೂ ಶಾರೀರಿಕ ಅಥವಾ ಜೈವಿಕ ಪ್ರತಿಕ್ರಿಯೆಗಳಿಗೆ, ವಿಶೇಷವಾಗಿ ಬಲವಂತ ಮತ್ತು ಭಯದ ಪ್ರತಿಕ್ರಿಯೆಗಳಿಗೆ ಮುನ್ನುಡಿ ಬರೆಯುವುದಿಲ್ಲ. ಮಾನಸಿಕ ಅಸಾಧ್ಯತೆ ಮತ್ತು ಸಾಮರ್ಥ್ಯ ಅಂಶ ಕುರಿತ ಅರ್ಜಿದಾರರ ಪರ ವಕೀಲರ ವಾದ ಪರಿಗಣಿಸಲಾಗದು ಎಂದು ಪೀಠ ತೀಕ್ಷ್ಣವಾಗಿ ನುಡಿದಿದೆ.

ಮಾನವೀಯ ಕಾಳಜಿಯಿರುವ ,ಹದಿನೆಂಟು ವರ್ಷದೊಳಗಿನ ಮಕ್ಕಳ ರಕ್ಷಣೆಯ ಉದ್ದೇಶದಿಂದ ಜಾರಿಗೆ ತಂದಿರುವ ಪೋಕ್ಸೋ (ಲೈಂಗಿಕ ಅಪರಾಧಿಗಳಿಂದ ಮಕ್ಕಳ ರಕ್ಷಣೆ) ಕಾಯ್ದೆಯಡಿ ಮಕ್ಕಳ ಮೇಲೆ ಅತ್ಯಾಚಾರ, ಶೋಷಣೆ ತಡೆಯುವುದು, ದೌರ್ಜನ್ಯ ಎಸಗಿದವರಿಗೆ ಶಿಕ್ಷೆ ವಿಧಿಸಲಾಗುತ್ತಿದೆ. ಬಾಲಕಿಯರ ಮೇಲೆ ಅತ್ಯಾಚಾರವೆಸಗಿದ ಅಪರಾಧಿಗೆ ಪೋಕ್ಸೋ ಕಾಯ್ದೆಯಡಿ ದಂಡ ಹಾಗೂ ಜೀವಾವಧಿ ಶಿಕ್ಷೆಗೆ ಗುರಿಪಡಿಸಲಾಗುತ್ತಿದೆ. ಈ ಕಾಯ್ದೆಯಡಿ ನೂರಾರು ಅಪ್ರಾಪ್ತ ಮಕ್ಕಳ ಬಾಲಕರು ಜೈಲಿಗೆ ಹೋಗಿದ್ದಾರೆ .

ಎಷ್ಟೇ ಪ್ರಭಾವಿಗಳಾಗಿದ್ದರೂ ಸೂಕ್ತ ಸಾಕ್ಷ್ಯಾಧಾರ ಇದ್ದರೆ ಅವರುಗಳು ಶಿಕ್ಷೆಯನ್ನು ಅನುಭವಿಸಬೇಕಾಗುತ್ತದೆ.

ಕಾಮುಕರಿಗೆ ಪೋಕ್ಸೋ ಕಾಯ್ದೆಯಡಿ ಶಿಕ್ಷೆ ಆಗಬಹುದು. ಆದರೆ ಮಕ್ಕಳ ಮೇಲಾಗುವ ಮಾನಸಿಕ ಆಘಾತ, ಹೆತ್ತವರು ನಿರಂತರ ಅನುಭವಿಸುವ ಸಂಕಟಕ್ಕೆ ಮದ್ದು ಯಾವುದಿದೆ. ತನ್ನ ದೈಹಿಕ ರಚನೆ, ಅಂಗಾಂಗಗಳ ಬಗ್ಗೆ, ಲೈಂಗಿಕತೆಯ ಬಗ್ಗೆ ಅರಿವೇ ಇಲ್ಲ, ಮಕ್ಕಳ ಮೇಲೆ ಬಲಾತ್ಕಾರದ ಲೈಂಗಿಕ ಕ್ರಿಯೆಯಿಂದ ಆಗುವ ದೈಹಿಕ, ಮಾನಸಿಕ ಗಾಯವನ್ನು ಅಪರಾಧಿಯ ಶಿಕ್ಷೆ ಗುಣಪಡಿಸುವುದೇ .... ಎಂಬುದು ಪ್ರಜ್ಞಾವಂತರ ಪ್ರಶ್ನೆ.



ಡಾ.ಗುರುಪ್ರಸಾದ ರಾವ್ ಹವಲ್ದಾರ್

## ತುಳುನಾಡ ರಾಣಿ "ಅಬ್ಬಕ್ಕ"

ಭಾರತದ ಸ್ವಾತಂತ್ರ್ಯ ಹೋರಾಟದ ಇತಿಹಾಸದಲ್ಲಿ ಹಲವಾರು ವೀರರು ಮತ್ತು ವೀರರಾಣಿಯರು ಆದರ್ಶ, ಭಾರತದ ಸ್ವಾತಂತ್ರ್ಯ ಹೋರಾಟವು 1857ರ ಮೊದಲ ಸ್ವಾತಂತ್ರ್ಯ ಸಂಗ್ರಾಮದಿಂದ ಆರಂಭವಾಯಿತೆಂದು. ಆದರೆ, ಶತಮಾನಗಳ ಮೊದಲೇ ಭಾರತೀಯ ಜನಾಂಗ ವಿದೇಶಿ ಆಕ್ರಮಣಕಾರರ ವಿರುದ್ಧ ಪ್ರಬಲವಾದ ಪ್ರತಿರೋಧಗಳನ್ನು ನಿರ್ಮಿಸಿತ್ತು ಎಂಬುದು ಇತಿಹಾಸದ ಸತ್ಯ.

ಕರ್ನಾಟಕದ ಕರಾವಳಿ ನಾಡು ಹಲವಾರು ಸಮರಗಳಿಗೆ ಸಾಕ್ಷಿಯಾಗಿದ್ದು, ಗೋವಾದಿಂದ ಉಳ್ಳಾಲದ ತನಕ ಕರಾವಳಿಯನ್ನು ಸಂಪೂರ್ಣವಾಗಿ ತಮ್ಮ ಹಿಡಿತದಲ್ಲಿರಿಸಿಕೊಂಡು, ಸಮುದ್ರದಲ್ಲಿನ ಯಾವುದೇ ಚಟುವಟಿಕೆಗೆ ಪೋರ್ಚುಗೀಸರಿಂದ ಅನುಮತಿ ಪಡೆಯಬೇಕಾದ ಅನಿವಾರ್ಯತೆ ನಮ್ಮವರದ್ದಾಗಿತ್ತು. ಉಳಿದ ಆಳರಸರು ಆಕ್ರಮಣಗಳಿಗೆ ತಲೆಬಾಗಿ ಭಾರತೀಯರ ಮೇಲೆ ನಡೆದ ದೌರ್ಜನ್ಯಗಳನ್ನು ಕಂಡೂ ಕಾಣದಂತಿದ್ದು, ಕಾಲಕಾಲಕ್ಕೆ ಕಪ್ಪವನ್ನು ತಪ್ಪದೆ ನೀಡುತ್ತಾ ತೆಪ್ಪಗಿದ್ದ ಸಂದರ್ಭದಲ್ಲಿ, ಬೆಂಕಿಯ ಚೆಂಡಿನಂತೆ ಪೋರ್ಚುಗೀಸರ ಹಡಗುಗಳಿಗೆ ಬೆಂಕಿ ಹಚ್ಚಿ ಅಧರ್ಮಿಗಳ ಎದೆಯಲ್ಲಿ ನಡುಕ ಹುಟ್ಟಿಸಿದ ಭಾರತದ ಮೊದಲ ಸ್ವಾತಂತ್ರ್ಯ ಹೋರಾಟಗಾರ್ತಿ ಉಳ್ಳಾಲದ ವೀರರಾಣಿ ಅಬ್ಬಕ್ಕ ಅಥವಾ ಅಬ್ಬಕ್ಕ ಮಹಾದೇವಿ ತುಳುನಾಡನ್ನು ಆಳಿದ ವೀರ ಮಹಿಳೆ. ಅಬ್ಬಕ್ಕಳ ಆ ಪರಾಕ್ರಮವನ್ನು ಈ ನಾಡು ಕಂಡಿದ್ದು, ಹಿಂದವಿ ಸ್ವರಾಜ್ಯದ ನಿರ್ಮಾತೃ ಛತ್ರಪತಿ ಶಿವಾಜಿ ಮಹಾರಾಜರು ಜನಿಸುವುದಕ್ಕಿಂತ ಬರೋಬ್ಬರಿ ನೂರು ವರ್ಷಗಳ ಪೂರ್ವದಲ್ಲಿ.ಆ ಸಮರಗಳಲ್ಲಿ ಅತ್ಯಂತ ಪ್ರಭಾವಶಾಲಿ ಹಾಗೂ ಸ್ಫೂರ್ತಿದಾಯಕ ಹೋರಾಟಗಾರ್ತಿಯೆಂದರೆ ರಾಣಿ ಅಬ್ಬಕ್ಕ ದೇವಿಯದ್ದು. ಇವಳ ರಾಜಧಾನಿ ಮೂಡುಬಿದಿರೆ. ರೇವುಪಟ್ಟಣ ಉಲ್ಲಾಳ ಉಪಾಂಗ ರಾಜಧಾನಿಯಾಗಿತ್ತು.



ಅಬ್ಬಕ್ಕ ಅವರು ಹುಟ್ಟಿದ ಚೌಟ ರಾಜವಂಶವು ತುಳು ಪ್ರದೇಶದಲ್ಲಿ ಜೈನ ಪರಂಪರೆಯನ್ನು ಅನುಸರಿಸುತ್ತಿತ್ತು. 'ಅಹಿಂಸಾ ಪರಮೋ ಧರ್ಮಃ' ಎನ್ನುವ ಜೈನ ಮತವನ್ನು ಅನುಸರಿಸುವವಳಾಗಿದ್ದರೂ, 'ಧರ್ಮ ಹಿಂಸಾ ತಥೈವಚ' ಎನ್ನುತ್ತಾ ರಾಷ್ಟ್ರರಕ್ಷಣೆಗಾಗಿ ಕತ್ತಿಯನ್ನು ಹಿಡಿದು ಭಾರತೀಯ ಸಂಸ್ಕೃತಿಯನ್ನು ಮೆರೆದವಳು ಅಬ್ಬಕ್ಕ. ಈ ವಂಶವು ಉಳ್ಳಾಲ ಮತ್ತು ಬಂಗಾಡಿ ಪ್ರದೇಶಗಳನ್ನು ಆಳುತ್ತಿದ್ದು, ಅಲ್ಲಿನ ಜನರ ಧಾರ್ಮಿಕ, ಸಾಂಸ್ಕೃತಿಕ, ಸಾಮಾಜಿಕ ಅಭಿವೃದ್ಧಿಗೆ ಮಹತ್ವ ನೀಡುತ್ತಿದ್ದ ಪ್ರಗತಿಪರ ವಂಶವಾಗಿತ್ತು. ಪಾಶ್ಚಾತ್ಯ ಇತಿಹಾಸಕರ್ತರೂ ಚೌಟ ವಂಶವನ್ನು ಕರಾವಳಿ ಪ್ರದೇಶದ ಶಾಂತ ಮತ್ತು ನ್ಯಾಯಬದ್ಧ ಆಡಳಿತದ ಪ್ರತಿರೂಪವೆಂದು ದಾಖಲಿಸಿದ್ದಾರೆ.

ರಾಣಿ ಅಬ್ಬಕ್ಕರಿಗೆ ಬಾಲ್ಯದಿಂದಲೇ ರಾಜಕೀಯ ಮತ್ತು ಯುದ್ಧ ವಿಭಾಗಗಳ ತರಬೇತಿಯನ್ನು ನೀಡಲಾಯಿತು. ಜೈನ ಧರ್ಮದ ಮೌಲ್ಯಗಳನ್ನು ಒತ್ತಿಹೇಳಿದರೂ, ದೇಶ ಮತ್ತು ಪ್ರಜೆಗಳ ರಕ್ಷಣೆಯಲ್ಲಿ ಅಗತ್ಯವಾದ ತೀವ್ರಪ್ರತಿರೋಧವನ್ನು ನೈತಿಕವಾಗಿ ಮಾನ್ಯತೆ ನೀಡುವ ಮನೋಭಾವವನ್ನು ಅವರು ಬೆಳೆಸಿಕೊಂಡರು. ಅವರ ಬಾಲ್ಯದ ಬೆಳವಣಿಗೆಯಲ್ಲಿ ಜೈನ ಮಠಗಳ ಅಧ್ಯಯನ, ಅವರ ಪರಂಪರೆಯ ವಿಚಾರಗಳು ಮತ್ತು ಆಡಳಿತಗಾರ್ತಿಯೊಬ್ಬಳಿಗೆ ಅಗತ್ಯವಿರುವ ಸಂಸ್ಕಾರಗಳನ್ನು ಪಡೆಯುತ್ತಾರೆ. ಅಬ್ಬಕ್ಕ ಪಟ್ಟಕ್ಕೆ ಬರುವ ಮೊದಲೇ ಯುದ್ಧ ಕೌಶಲ್ಯಗಳು, ಆಡಳಿತ ತರಬೇತಿಯನ್ನು ಹೊಂದಿದ್ದಳು. ಜೊತೆಗೆ ಉತ್ತಮ ರೀತಿಯಲ್ಲಿ ಶಾಸ್ತ್ರಾಭ್ಯಾಸವನ್ನು ಮಾಡಿದ್ದಳು. ಜೊತೆಯಲ್ಲಿ ಸಂಗೀತ ಹಾಗೂ ಸಾಹಿತ್ಯಗಳಲ್ಲಿ ಅಬ್ಬಕ್ಕಳಿಗೆ ಅಪಾರ ಅಭಿರುಚಿ ಇತ್ತು ಎಂದು ಇತಿಹಾಸಕಾರರು ದಾಖಲಿಸುತ್ತಾರೆ.

ರಾಣಿ ಅಬ್ಬಕ್ಕ ಉಳ್ಳಾಲವನ್ನು ಅಳಿದ್ದು 1554 ರಿಂದ 1588 ರವರೆಗೆ. ಅದೇ ಸಮಯದಲ್ಲಿ ಅರಬ್ಬರು, ಕಲ್ಲಿಕೋಟೆಯ ಸಾಮುದ್ರಿ ಅರಸ ಅಂದರೆ ಜಾಮೋರಿನ್ ಮತ್ತು ಇನ್ನಿತರ ರಾಜರ ಜೊತೆ ವ್ಯಾವಹಾರಿಕ ಒಪ್ಪಂದವನ್ನು ಮಾಡಿಕೊಂಡಿದ್ದ ರಾಣಿ ಅಬ್ಬಕ್ಕ ಆ ಕಾಲದಲ್ಲಿಯೇ ಸಾಗರೋತ್ತರ ವ್ಯವಹಾರಗಳನ್ನು ನಡೆಸಿದ್ದಳು. ಆದರೆ ಕರ್ನಾಟಕ ಕರಾವಳಿಯಲ್ಲಿ ಅವರದ್ದೇ ಅಧಿಪತ್ಯವಿರುವುದರಿಂದ ತಮ್ಮ ಅನುಮತಿ ಇಲ್ಲದೆ ಉಳ್ಳಾಲದ ರಾಣಿ ನಡೆಸುತ್ತಿರುವ ವ್ಯವಹಾರ ಪೋರ್ಚುಗೀಸರನ್ನು ಕೆರಳಿಸಿದ್ದರಿಂದ ಅಬ್ಬಕ್ಕಳಿಗೆ ಎಚ್ಚರಿಕೆ ನೀಡಿದರು. ಭಾರತದಲ್ಲಿ ಮಸಾಲೆ ವ್ಯಾಪಾರದ ಏಕಾಧಿಪತ್ಯವನ್ನು ಸಾಧಿಸಲು ಪ್ರಯತ್ನಿಸುತ್ತಿದ್ದ ಪೋರ್ಚುಗೀಸರು, ಗೋವಾ, ಡಾಮಾನ, ಡಿಯು ಮುಂತಾದ ಪ್ರದೇಶಗಳನ್ನು ಕೈಗೆತ್ತಿಕೊಂಡು ಅರಸರನ್ನು ಬಲವಂತವಾಗಿ ತೆರಿಗೆ ಮತ್ತು ವ್ಯಾಪಾರ ಶುಲ್ಕ ವಿಧಿಸತೊಡಗಿದರು. ಕರಾವಳಿಯ ಬಹುಪಾಲು ರಾಜರಿಗೆ ಅವರು ಹಡಗುಗಳ ಸಂಚಾರಕ್ಕೆ ಕಾರ್ಟಾಜ್ ಎಂಬ ತೆರಿಗೆಯನ್ನು ವಿಧಿಸಿದ್ದರು.

ಅವರ ಕಾನೂನೂಗಳಿಗೆ ಕ್ಯಾರೇ ಅನ್ನದ ಅಬ್ಬಕ್ಕ 'ಬೆಳೆ ನನ್ನ ದೇಶದ್ದು, ಬೆಳೆದವರು ನನ್ನ ದೇಶದ ರೈತರು, ಸಮುದ್ರ ನನ್ನ ದೇಶದ್ದು. ಇಲ್ಲಿ ವ್ಯವಹಾರ ಮಾಡುವುದಕ್ಕೆ ಎಲ್ಲಿಂದಲೋ ಬಂದ ದರೋಡೆಕೋರರ ಅನುಮತಿ ನಾನು ಪಡೆದುಕೊಳ್ಳಬೇಕೇ ಸಾಧ್ಯವಿಲ್ಲ' ಎಂದು ದಿಟ್ಟತನದಿಂದ ಉತ್ತರ ನೀಡಿದ್ದಳು.

ಶ್ರೀ ಮದ್ವೀರ ನರಸಿಂಗ ಲಕ್ಷ್ಮಪ್ಪರಸ ಬಂಗರಾಜನ ಜೊತೆಯಲ್ಲಿ ಮೂಡುಬಿದಿರೆಯ ಚೌಟ ರಾಣಿಯಾದ ಅಬ್ಬಕ್ಕದೇವಿಗೆ ಮದುವೆಯಾಗುತ್ತದೆ. ಚೌಟರಾಣಿಗೆ ಉಳ್ಳಾಲದಲ್ಲಿ ಅರಮನೆ ಇದ್ದು ಅಲ್ಲಿಂದಲೇ ರಾಜ್ಯಭಾರ ಮಾಡುತ್ತಿದ್ದಳು. ಬಂಗರಾಜನು ಮಂಗಳೂರಿನ ಅರಮನೆಯಿಂದ ಆಳ್ವಿಕೆ ನಡೆಸುತ್ತಿದ್ದನು. ಲಕ್ಷ್ಮಪ್ಪರಸ ಬಂಗರಾಜನು ಸ್ವರ್ಗಸ್ಥನಾದೊಡನೆ ಅಳಿಯನಾದ ಕಾಮರಾಯ ಬಂಗನು ತನ್ನ ಅತ್ತೆಯಾದ ಅಬ್ಬಕ್ಕದೇವಿಯಲ್ಲಿ ದ್ವೇಷ ಸಾಧಿಸಿಕೊಂಡು ಉಳ್ಳಾಲವನ್ನು ತನ್ನ ಸ್ವಾಧೀನ ಪಡಿಸಿಕೊಳ್ಳಬೇಕೆಂಬ ದುರಾಲೋಚನೆಯಿಂದ ಪೋರ್ಚುಗೀಸರೊಂದಿಗೆ ಸ್ನೇಹವನ್ನು ಬೆಳೆಸಿದನು. ಪೋರ್ಚುಗೀಸ್ ವೈಸ್‌ರಾಯಿಯಾಗಿದ್ದ ಡೊನ್ ಫ್ರಾನ್ಸಿಸ್ ಮಸ್ಕರೇಂಞಾನು ತನ್ನ ದೊಡ್ಡ ಸೈನ್ಯದೊಂದಿಗೆ ಹಡಗುಗಳಲ್ಲಿ ಬಂದು ಉಳ್ಳಾಲದ ಹೊಳೆಯಲ್ಲಿ ಲಂಗರು ಹಾಕಿದಾಗ ಅಬ್ಬಕ್ಕ ದೇವಿಯು ತನ್ನ ಸೈನಿಕರೊಂದಿಗೆ ಮುತ್ತಿಗೆ ಹಾಕಿ ಪೋರ್ಚುಗೀಸರನ್ನು ಓಡಿಸಿದ್ದರು. ಪೋರ್ಚುಗೀಸರು ಪುನಃ ದೊಡ್ಡ ಸೈನ್ಯದೊಡನೆ ಬಂದು ರಾಣಿ ಅಬ್ಬಕ್ಕದೇವಿಯನ್ನು ಸೋಲಿಸಿ ಉಳ್ಳಾಲವನ್ನು ಧ್ವಂಸಗೊಳಿಸಿದಾಗ ಇಕ್ಕೇರಿ ವೆಂಕಟಪ್ಪ ನಾಯಕನು ಪೋರ್ಚುಗೀಸರಿಂದ ಮಂಗಳೂರನ್ನು ಸ್ವಾಧೀನಪಡಿಸಿದನು. ಪೋರ್ಚುಗೀಸರಿಗೂ ಇಕ್ಕೇರಿಯ ನಾಯಕನಿಗೂ ಒಪ್ಪಂದವಾಗಿ, ಪುನಃ ಕಾಮರಾಯ ಬಂಗನಿಗೆ ಮಂಗಳೂರು ಪಟ್ಟಣವನ್ನು ಬಿಟ್ಟುಕೊಟ್ಟರು.

ಪೋರ್ಚುಗೀಸರಿಂದ ಬರಬಹುದಾದ ಅಪಾಯವನ್ನು ಮೊದಲೇ ಯೋಚಿಸಿ ಅವರನ್ನು ಸಂಪೂರ್ಣ ಮಟ್ಟ ಹಾಕಲು ಅಬ್ಬಕ್ಕ ಮೀನುಗಾರ ಸಮಾಜದ ಉಳ್ಳಾಲದ ಚನ್ನಪ್ಪ ಗುರಿಕಾರರನ್ನು ನೌಕಾದಳದ ಮುಖ್ಯ ಅಧಿಕಾರಿಯಾಗಿಸುತ್ತಾರೆ . ಇದರಿಂದ ಅಪಾರ ಸಂಖ್ಯೆಯಲ್ಲಿ ಮೀನುಗಾರ ಸಮಾಜದವರು ಸೈನ್ಯವನ್ನು ಸೇರಿಕೊಳ್ಳುವುದರ ಜೊತೆಗೆ ಕರಾವಳಿಯ ಬಿಲ್ಲವರು, ಬಂಟರು, ಮಾಪಿಳ್ಳೆಗಳು ಅಬ್ಬಕ್ಕನ ಸೈನ್ಯವನ್ನು ಸೇರಿ ಆಕೆಯ ಸೈನ್ಯದ ಶಕ್ತಿಯನ್ನು ಮತ್ತಷ್ಟು ಸಮರ್ಥವಾಗಿಸಿದ್ದರು. ಅಬ್ಬಕ್ಕ ಉಳ್ಳಾಲದಲ್ಲಿ ಅಭೇದ್ಯವಾದ ಕೋಟೆಯನ್ನು ನಿರ್ಮಿಸಿ ಅದರ ಮೇಲೆ ಫಿರಂಗಿಗಳನ್ನು ಸನ್ನದ್ಧವಾಗಿರಿಸಿದ್ದಳು. ರಾಣಿ ಅಬ್ಬಕ್ಕ ಅಷ್ಟು ಸುಲಭದಲ್ಲಿ ಬಗ್ಗುವವಳಲ್ಲವೆಂದು ಮೊದಲೇ ಅರಿತಿದ್ದ ಆಗಿನ ಪೋರ್ಚುಗೀಸ್ ವೈಸರಾಯ್ 1555 ರಲ್ಲಿ ತನ್ನ ಅತ್ಯಂತ ಸಮರ್ಥನಾದ ಅಡ್ಮಿರಲ್ಲೋಮ್ ಅಲ್ವೇರೋಡ ಸಿಲ್ವೇರನ ನೇತೃತ್ವದಲ್ಲಿ 21 ಯುದ್ಧ ನೌಕೆಗಳನ್ನು ಮಂಗಳೂರಿಗೆ ಕಳುಹಿಸುತ್ತಾನೆ. ಆರಂಭವಾಯಿತು ಮಂಗಳೂರಿನಲ್ಲಿ ಪೋರ್ಚುಗೀಸರಿಂದ ನರಮೇಧ. ಉಳ್ಳಾಲದ ಸೋಮೇಶ್ವರ ದೇವಸ್ಥಾನದ ಮೇಲೂ ಬರ್ಬರ ದಾಳಿಯಾಯಿತು. ಅಬ್ಬಕ್ಕ ತಡ ಮಾಡಲಿಲ್ಲ. ಪೋರ್ಚುಗೀಸರೇ ಬೆಚ್ಚಿ ಬೀಳುವಂತಹ ಪ್ರತ್ಯಾಘಾತಗಳು ಆರಂಭವಾದವು. ಅನೇಕರು ಪ್ರಾಣ ಕಳೆದುಕೊಂಡರು, ಪ್ರಾಣ ಉಳಿಸಿಕೊಂಡವರ ಮುಖಮೂತಿಗಳು ಸುಟ್ಟುಹೋದವು. ಯುದ್ಧಕ್ಕೆ ಬಂದಿದ್ದ ಆ 21 ಹಡಗುಗಳು ಕೂಡ ಸಂಪೂರ್ಣ ಸುಟ್ಟು ಬೂದಿಯಾದವು. ಸಾಕಷ್ಟು ಸಾವು ನೋವುಗಳು ಆಗುತ್ತಿರುವುದನ್ನು ಕಂಡು ಕಲ್ಲಿಕೋಟೆಯ ದೊರೆ ಸಾಮುದ್ರಿ ಅರಸ ಮಧ್ಯಸ್ಥಿಕೆ ವಹಿಸಿ ಸಂಧಾನ ಮಾಡಿ ಯುದ್ಧವನ್ನು ನಿಲ್ಲಿಸಿದ.

ಅದರಿಂದ ಸುಧಾರಿಸಿಕೊಳ್ಳಲು ಪೋರ್ಚುಗೀಸರಿಗೆ ಬರೋಬ್ಬರಿ ಎರಡು ವರ್ಷಗಳೇ ಬೇಕಾಯಿತು. ಆದರೆ ಹೊನ್ನು, ಮಣ್ಣು ಮತ್ತು ಅಧಿಕಾರದ ಆಸೆಯಿಂದ ಮತ್ತೆ 1557ರಲ್ಲಿ ಮತ್ತೊಮ್ಮೆ ಕಾಲುಕೆರೆದು ಯುದ್ಧಕ್ಕೆ ಬಂದರು. ಆದರೆ, ಈ ಬಾರಿಯೂ ಬಂದ ದಾರಿಗೆ ಸುಂಕವಿಲ್ಲವೆಂಬಂತೆ ಸೋತು ಗೋವಕ್ಕೆ ಪಲಾಯನ ಮಾಡಿದರು.

ಮುಂದೆ ಹತ್ತು ವರ್ಷಗಳ ಕಾಲ ಉಳ್ಳಾಲದ ಕಡೆ ತಲೆಯೂ ಹಾಕಲಿಲ್ಲ.

10 ವರ್ಷಗಳ ಕಾಲ ಸುಧಾರಿಸಿಕೊಂಡು ಪೋರ್ಚುಗೀಸರ ಸೇನಾಧಿಕಾರಿಯಾಗಿದ್ದವ ಜಾವೋ ಪಿಕ್ಸಿವೋಟೋ, ರಾಣಿ ಅಬ್ಬಕ್ಕರ ವಿರುದ್ಧ ಮತ್ತೆ ಮೂರನೇ ಕದನವನ್ನು ಆರಂಭಿಸಿದ. ಉಳ್ಳಾಲವನ್ನು ಆಕ್ರಮಿಸಿದರು. ಕಂಡ ಕಂಡವರನ್ನು ಸುಟ್ಟರು.

ಕ್ರೂರವಾಗಿ ಜನರನ್ನು ಹಿಂಸಿಸ ತೊಡಗಿದರು. ಈ ನಡುವೆ 'ಉಳ್ಳಾಲದ ಕ್ರೈಸ್ತ ಜೆಸ್ಯೂಟ್ ಪಾದ್ರಿಗಳು ಶಿಲುಬೆ ಹಿಡಿದುಕೊಂಡು ಪೋರ್ಚುಗೀಸ್ ಸೈನಿಕರಿಗೆ ಯುದ್ಧ ನಡೆಸುವಂತೆ ಪ್ರೋತಾಹಿಸುತ್ತಿದ್ದರು' ಎಂಬ ಕರಾಳಸತ್ಯವನ್ನು ಖ್ಯಾತ ಇತಿಹಾಸಕಾರರೊಬ್ಬರೂ ತಮ್ಮ ಸಂಶೋಧನಾ ಗ್ರಂಥದಲ್ಲಿ ಅನಾವರಣಗೊಳಿಸುತ್ತಾರೆ.

ಅಪಾರವಾದ ಸಾವು ನೋವುಗಳು ಉಳ್ಳಾಲದಲ್ಲಿ ಸಂಭವಿಸುತ್ತಿರುವುದನ್ನು ಕಂಡು ಅಬ್ಬಕ್ಕ ತನ್ನ ಸೈನಿಕರ ಜೊತೆ ಅಲ್ಲಿಂದ ತಪ್ಪಿಸಿಕೊಂಡು ಪಕ್ಕದ ಬೆಟ್ಟಗಳಲ್ಲಿ ತಲೆಮರಿಸಿಕೊಂಡಳು. ಪೋರ್ಚುಗೀಸ್ ಸೈನಿಕರು ಅಬ್ಬಕ್ಕ ಓಡಿ ಹೋದಳೆಂದು ವಿಜಯೋನ್ಮಾದದಿಂದ ಕಂಠಪೂರ್ತಿ ಕುಡಿದು ತೂರಾಡುತ್ತಿದ್ದಾಗ ರಾತ್ರಿಯ ಹೊತ್ತು ಇದ್ದಕ್ಕಿದ್ದಂತೆ ಅಬ್ಬಕ್ಕ ತನ್ನ ಸೈನಿಕರೊಂದಿಗೆ ಸಿಂಹಿಣಿಯಂತೆ ಎರಗುತ್ತಾಳೆ. ಸೇನಾಧಿಕಾರಿ ಜಾವೋ ಪಿಕ್ಸಿವೋಟೋ ಆಕೆಯ ಅಬ್ಬರಕ್ಕೆ ಸಿಲುಕಿ ಇಹಲೋಕವನ್ನೇ ತ್ಯಜಿಸುತ್ತಾನೆ. ಆ ಸುದ್ದಿ ತಿಳಿಯುತ್ತಿದ್ದಂತೆ ಪೋರ್ಚುಗೀಸ್ ಸೈನಿಕರು ಅರ್ಧ ದಾರಿಯಲ್ಲಿ ತಮ್ಮ ನೌಕೆಗಳನ್ನು ಗೋವೆಯತ್ತ ತಿರುಗಿಸಿ ಓಡಿದರು.

ಒಮ್ಮೆ ತಮ್ಮ ಮನೆದೇವರಾದ ಸೋಮನಾಥೇಶ್ವರನ ಗುಡಿಯಿಂದ ಮರಳಿ ಬರುತ್ತಿರುತ್ತಾಳೆ. ಹಾದಿಯಲ್ಲಿ ಆಕ್ರಮಣದ ಸುದ್ದಿ ತಿಳಿದೊಡನೆಯೇ ಯುದ್ಧ ಉಡಪನ್ನು ಧರಿಸಿ, ಕುದುರೆ ಏರಿ, "ತಾಯ ನಾಡನ್ನು ರಕ್ಷಿಸಿ, ವೈರಿಗಳನ್ನು ನೆಲದ ಮೇಲಾಗಲಿ ಸಮುದ್ರದಲ್ಲಾಗಲಿ ಹೋರಾಡಿ ನಮ್ಮ ದಡದಿಂದಾಚೆ ಓಡಿಸಿ" ಎಂದು ಘರ್ಜಿಸುತ್ತ, ಸೈನ್ಯವನ್ನು ಹುರಿದುಂಬಿಸುತ್ತಾ ಶತ್ರು ಪಡೆಯನ್ನು ಎದುರಿಸುತ್ತಾಳೆ.

ದುರಾದೃಷ್ಟಕರವೆಂದರೆ ಈ ಯುದ್ಧವೆ ಅಬ್ಬಕ್ಕಳ ಕಡೆಯ ಕದನವಾಯಿತು. ಈ ಯುದ್ಧದಲ್ಲಿ ಅಬ್ಬಕ್ಕಳ ಮೇಲೆ ಗುಂಡಿನ ಮಳೆಯನ್ನೇ ಹಾರಿಸಿದರು. ಗಾಯಗೊಂಡು ಬಿದ್ದ ಇವಳನ್ನು ರಣರಂಗದಿಂದ ದೂರ ತರುತ್ತಾರೆ. ಕೊನೆಯ ಉಸಿರೆಳೆಯುತ್ತಿದ್ದರೂ ತನ್ನ ಸೈನಿಕರಿಗೆ ನಾಡಿನ ಸ್ವಾತಂತ್ರಕ್ಕಾಗಿ ಪ್ರಾಣಭಯವನ್ನೂ ಬಿಟ್ಟು ಹೋರಾಡಿ ಎಂದು ಘರ್ಜಿಸುತ್ತಾ, ಉತ್ತೇಜಿಸುತ್ತಾನೇ ವೀರಮರಣ ಹೊಂದಿದಳು ಅಬ್ಬಕ್ಕ.

'ಪುರುಷರು ಮಾತ್ರ ರಾಜ್ಯವಾಳಬೇಕಾದವರು, ಅಕಸ್ಮಾತ್ ಗಂಡು ಸಂತಾನವಿಲ್ಲದಿದ್ದರೆ ಆ ರಾಜ್ಯಕ್ಕೆ ಭವಿಷ್ಯವೇ ಇಲ್ಲ' ಅನ್ನುವ ಮಾನಸಿಕತೆಯಲ್ಲಿ ಯುರೋಪಿನಂತಹ ಮುಂದುವರಿದ ದೇಶಗಳಿದ್ದಾಗ, ಆ ಕಾಲದಲ್ಲೇ ತನ್ನ ಪುಟ್ಟ ಸಂಸ್ಥಾನದ ಮೂಲಕ ಪೋರ್ಚುಗೀಸರಿಗೆ ನಡುಕ ಹುಟ್ಟಿಸಿ, ಅವರನ್ನು ಮುಂದೆಂದೂ ತುಳುನಾಡಿಗೆ ಕಾಲಿಡಲು ಬಿಡದಂತೆ ಹೋರಾಡಿದ ವೀರಾಗ್ರಣಿ ರಾಣಿ ಅಬ್ಬಕ್ಕ ಈ ದೇಶದ ಶಕ್ತಿ ಪರಂಪರೆಯ ಪ್ರತೀಕ. ಬೇರೆಲ್ಲ ರಾಜರು ಪೋರ್ಚುಗೀಸರ ಆಜ್ಞೆಗಳಿಗೆ ತಲೆಯಾಡಿಸುತ್ತಿದ್ದ ಸಂದರ್ಭದಲ್ಲಿ ಸುಮಾರು ಮೂರು ದಶಕಗಳಿಗೂ ಹೆಚ್ಚು ಕಾಲ ಪೋರ್ಚುಗೀಸರಿಗೆ ಸಿಂಹಸ್ವಪ್ನವಾಗಿ ಕಾಡಿದ್ದ ವೀರಮಾತೆ ಅಬ್ಬಕ್ಕ. ಗಂಡನ ಆಸರೆ ಇಲ್ಲದಿದ್ದಾಗಲೂ ತನ್ನಂತೆಯೇ ತನ್ನ ಮಗಳನ್ನೂ ಬೆಳೆಸಿದಳು. ಆ ಮಹಾಮಾತೆಯನ್ನು ತಾಯಿ ಭಾರತಿ ಪುತ್ರಿಯಾಗಿ ಪಡೆದು ಇಂದಿಗೆ ಐನೂರು ಸಂವತ್ಸರಗಳು.



ಬ್ರಿಜೇಶ್ ಕುಮಾರ್.
ಬಿ. ಟಿ.

## ಸಂಚಲನ ಮೂಡಿಸಿದ ಕನ್ನಡ ಚಿತ್ರರಂಗ

ಕನ್ನಡಿಗರನ್ನು ರಂಜಿಸಿದ, ಐವತ್ತು ಕೋಟಿಗಿಂತ ಹೆಚ್ಚು ಬಾಚಿದ ಸೂ ಫ್ರಮ್ ಸೋ ಚಿತ್ರ ಅಜಯ್ ದೇವಗನ್ ನಿರ್ಮಾಣ ಸಂಸ್ಥೆಯಿಂದ ಹಿಂದಿಯಲ್ಲಿ ರಿಮೇಕ್ ಮಾಡುವ ಸಂಭವವಿದೆ ಎಂದು ತಿಳಿದು ಮನ ಅರಳಿತು. ಕನ್ನಡ ಚಿತ್ರರಂಗಕ್ಕೆ ಕವಿದ ಮೋಡ ಕರಗಿ ದೇಶ ವಿದೇಶದ ವೀಕ್ಷಕರು ಕನ್ನಡ ಪ್ರತಿಭೆಗಳನ್ನು ಗುರುತಿಸಿ, ಅವರನ್ನು ಮೆಚ್ಚುತ್ತಿದ್ದಾರೆ ಎನ್ನುವ ವಿಷಯವೇ ನೆಮ್ಮದಿ ತಂದಿದೆ.

ಕನ್ನಡ ಸಿನಿಮಾಗಳಿಗೆ ಇಲ್ಲಿಯವರೆಗೂ ಒಂದು ಡಜನ್ ಕಿಂತ ಹೆಚ್ಚು ರಾಷ್ಟ್ರ ಪ್ರಶಸ್ತಿ ಪಡೆದ ಇತಿಹಾಸವಿದೆ, ಗಿರೀಶ್ ಕಾರನಾಡ್, ಗಿರೀಶ್ ಕಾಸರವಳ್ಳಿ, ನಾಗಾಭರಣ, ಬಿ ವಿ ಕಾರಂತ್, ಪುಟ್ಟಣ್ಣ ಕಣಗಾಲ್ ಮುಂತಾದ ದಿಗ್ಗಜ ನಿರ್ದೇಶಕರ ದಂಡು ಕನ್ನಡ ಸಿನಿಮಾದ ಖ್ಯಾತಿಯನ್ನು ದೇಶದಾದ್ಯಂತ ಪಸರಿಸಿತ್ತು.

ಈಗ ಮತ್ತೆ ಆ ಸುವರ್ಣ ಯುಗ ಪ್ಯಾನ್ ಇಂಡಿಯಾ ಮೂವೀ ಎಂಬ ಹೊಸ ಪ್ರಯೋಗದಡಿಯಲ್ಲಿ ಹೊಸ ಭರವಸೆ ಮೂಡಿಸುತ್ತದೆ.

**ಏನಿದು ಪ್ಯಾನ್ ಇಂಡಿಯಾ:** ಪಾನ್ – ಪ್ರೆಸೆಂನ್ಸ್ ಅಕ್ರಾಸ್ ನ್ಯಾಷನ್, ಒಂದು ಚಿತ್ರವನ್ನು ವಿವಿಧ ಭಾಷೆಗಳಲ್ಲಿ ದೇಶದಾದಂತ್ಯ ವೀಕ್ಷಕರ ಅಭಿರುಚಿಗೆ ಹೊಂದುವಂತೆ ನಿರ್ಮಿಸಿ, ಏಕಕಾಲಕ್ಕೆ ಬಿಡುಗಡೆ ಮಾಡುವುದಕ್ಕೆ ಪ್ಯಾನ್ ಇಂಡಿಯಾ ಸಿನಿಮಾ ಎಂದು ಹೇಳುತ್ತಾರೆ. ಇದು ಆಕಸ್ಮಿಕವಲ್ಲದ ಅತ್ಯಂತ ಸುದೀರ್ಘ ಯೋಜನೆಯ ಫಲವಾಗಿರುತ್ತದೆ, ನಿರ್ಮಾಣ ಹಂತದಲ್ಲೇ, ಚಿತ್ರಕಥೆ, ಸಂಭಾಷಣೆ, ಸಾಹಿತ್ಯ ಮುಂತಾದವುಗಳನ್ನು ಆಯಾ ಭಾಷೆಯ ತಕ್ಕಂತೆ ತಯಾರಿಸುತ್ತಾರೆ. ಇದರಿಂದಾಗಿ ಚಿತ್ರ ಏಕಕಾಲಕ್ಕೆ ದೇಶದೆಲ್ಲಡೆ ದೊಡ್ಡ ಸಂಖ್ಯೆಯ ವೀಕ್ಷಕರನ್ನು ತಲುಪುತ್ತದೆ, ಚಿತ್ರ ತಂಡಕ್ಕೆ ದೊಡ್ಡ ಮೊತ್ತದ ಲಾಭ ಜೊತೆಗೆ ಪ್ರಖ್ಯಾತಿಯು ಒಲಿಯುತ್ತದೆ. ನಮ್ಮಲ್ಲಿ, ಹಿಂದಿ, ತೆಲುಗು, ಕನ್ನಡ, ಮಲಯಾಳಂ, ಬೆಂಗಾಲಿ ಭಾಷೆಗಳಲ್ಲಿ ಕೂಡ ತೆರೆಗೆ ಬರುತ್ತವೆ.

ಈ ಪ್ಯಾನ್ ಇಂಡಿಯಾ ಚಿತ್ರದ ನೂತನ ಪದ್ಧತಿ ಜಾರಿಗೆ ಬಂದಿದ್ದು, 2015 ರಲ್ಲಿ ಆರ್ಕ ಮೀಡಿಯಾ ವರ್ಕ್ಸ್ ಎಂಬ ಫ್ರಾಂಚಯ್ಸ್ ಅಡಿಯಲ್ಲಿ ತೆಲಗು ನಿರ್ದೇಶಕ ರಾಜಮೌಳಿಯ ನಿರ್ದೇಶಿಸಿದ, ಪ್ರಭಾಸ್ ನಟಿಸಿದ ಎರಡು ಭಾಗಗಳಲ್ಲಿ ವಿಂಗಡಿಸಿದ ಫ್ಯಾಂಟಸಿ ಚಿತ್ರ ಬಾಹುಬಲಿ ಬಂದಿತ್ತು. ನಂತರ ಬಂದು ಸದ್ದು ಮಾಡಿದ ಪ್ಯಾನ್ ಸಿನಿಮಾ ಕನ್ನಡದ ಕೆಜಿಎಫ್, ಇದನ್ನು ಹೊಂಬಾಳೆ ಸಂಸ್ಥೆ ನಿರ್ಮಿಸಿ, ಪ್ರಶಾಂತ್ ನೀಲ್ ನಿರ್ದೇಶಸಿದರು, ಇದು 2018 ರಲ್ಲಿ ಭಾರತ, ಕ್ಯಾನಡ ಹಾಗೂ ಅಮೇರಿಕಾದಲ್ಲಿ ಏಕಕಾಲಕ್ಕೆ ಬಿಡುಗಡೆಯಾಗಿತ್ತು.

ಈ ಸಿನಿಮಾಕ್ಕೆ ಮೊದಲ ದಿನವೇ ಇಪತ್ತೈದು ಕೋಟಿಗಳಷ್ಟು ಹಣವನ್ನು ಗಲ್ಲಾ ಪೆಟ್ಟಿಗೆ ತುಂಬಿಸಿದ ಕೀರ್ತಿ ಇದೆ. ಕರ್ನಾಟಕದಲ್ಲಿ ನೂರು ದಿನ ಓಡಿದ ಈ ಚಿತ್ರ, ಎರಡನೂರು ಕೋಟಿ ಹಣ ಗಳಿಸಿ ದಾಖಲೆ ನಿರ್ಮಿಸಿತ್ತು. ಮುಂದೆ ಕೆಜಿಎಫ್ 2 ಕೂಡ ಯಶಸ್ವಿ ಪ್ಯಾನ್ ಇಂಡಿಯಾ ಚಿತ್ರವಾಗಿ ಕನ್ನಡದ ಪತಾಕೆಯನ್ನು ಜಗತ್ತಿನಾದ್ಯಂತ ಹಾರಿಸಿತು. ಕನ್ನಡ ಚಿತ್ರರಂಗವನ್ನು ಹಗುರವಾಗಿ ಕಂಡ ಹಲವರಿಗೆ ಚಿತ್ರದ ಯಶಸ್ಸು, ನಟ ಯಶ್ ಅವರ ಪ್ರಭಾವ, ಅವರ ಫ್ಯಾನ್ ಫಾಲೋಯಿಂಗ್ ನೋಡಿ ಮೂಗಿನ ಮೇಲೆ ಬೆರಳಿಡುವಂತೆ ಮಾಡಿತು.

2022 ರಲ್ಲಿ ಈಡಿ ದೇಶದಲ್ಲಿ ತನ್ನದೇ ಹವಾ ಎಬ್ಬಿಸಿ, ಬೂದಿಯಿಂದ ಎದ್ದ ಫಿನಿಕ್ಸ್ ಪಕ್ಷಿಯಂತೆ ಸ್ಯಾಂಡಲ್ ವುಡ್ ಹೆಸರನ್ನು ಮನೆ ಮಾತಾಗಿಸಿದ ಚಿತ್ರ, ರಿಷಬ್ ಶೆಟ್ಟಿ ಅವರ ಕಾಂತಾರ, ಇದನ್ನು ಕೂಡ ಹೊಂಬಾಳೆ ಫಿಲ್ಮ ಅವರು ಬೃಹತ್ ಬಿಜೆಟನೊಂದಿಗೆ ನಿರ್ಮಿಸಿ, ಗೆದ್ದರು. ತುಳುನಾಡಿನ ಭೋತ ಕೋಲದ ಸಂಪ್ರದಾಯವನ್ನು ಜಗತ್ತಿಗೆ ಪರಿಚಯಿಸಿದರು, ನಮ್ಮಲ್ಲಿದ್ದ ಜಾನಪದ ಕಲೆಯನ್ನು, ಪರಿಸರವನ್ನು ಆರಾಧಿಸುವ ಪರಿಯನ್ನು ವೀಕ್ಷಿಸಿ ನೋಡುಗರು ಮಂತ್ರಮುಗ್ಧರಾದರು.

ಅದೇ ರೀತಿ ಇತ್ತೀಚಿಗೆ ಬಿಡುಗಡೆಯಾದ ಕಾಂತಾರಾ 2 ಕೂಡ ಅಭೂತಪೂರ್ವ ಯಶಸ್ಸನ್ನು ಕಂಡಿತು. ಕೋಟಿ ಕೋಟಿ ಲಾಭವನ್ನು ಪಡೆಯುವುದಲ್ಲದೆ, ಕನ್ನಡದ ಮಣ್ಣಿನ ಘಮವನ್ನು ಜಗತ್ತಿನುದ್ದಗಲಕ್ಕೂ ಪಸರಿಸಿತು. ಕನ್ನಡಿತಿ ರಶ್ಮಿಕಾ ಮಂದಣ್ಣ ಜೊತೆಗೆ ಕಾಂತಾರದಲ್ಲಿ ನಟಿಸಿದ ರುಕ್ಮಿಣಿ ವಸಂತ್ ಕೂಡ ಹೊಸ ನ್ಯಾಷನಲ್ ಕ್ರಶ್ ಸಾಲಿನಲ್ಲಿ ನಿಂತಿದ್ದಾರೆ. ನಟ – ನಿರ್ದೇಶಕ ರಿಷಿಬ್ ಶೆಟ್ಟಿಗೆ ಹಿಂದಿ ಚಿತ್ರರಂಗದಿಂದ ಹಲವು ಹೊಸ ಅವಕಾಶಗಳು ಹರಿದು ಬರುತ್ತಿವೆ, ನಟ ಯಶ್, ರಿಷಿಬ್ ಶೆಟ್ಟಿ, ಸು ಫ್ರಮ್ ಸೋ ಖ್ಯಾತಿಯ ರಾಜ್ ಬಿ ಶೆಟ್ಟಿ ಬಾಲಿವುಡ್ ಪತ್ರಕರ್ತರರಿಗೆ ಸಂದರ್ಶನ ಕೊಡುತ್ತಿದ್ದಾರೆ, ತಮ್ಮ ಯಶಸ್ಸಿನ ಗಾಥೆಯನ್ನು ವರ್ಣಿಸುತ್ತಿದ್ದಾರೆ. ದೊಡ್ಡ ಬಿಜೆಟ್, ಸುಧಾರಿತ ವಿ ಎಫ್ ಎಕ್ಸ್, ಪ್ರಮೋಷನ್ ತಂತ್ರಗಳು, ಅತ್ಯುತ್ತಮ ಆಕ್ಷನ್, ನೃತ್ಯ ಸಂಯೋಜನೆ, ಸಾರ್ವತ್ರಿಕ ಅಭಿರುಚಿಯ ತಕ್ಕಂಥಾ ಚಿತ್ರಕಥೆ ಪ್ಯಾನ್ ಸಿನಿಮಾಗಳಿಗೆ ಅಗತ್ಯವಾದ ಅಂಶಗಳು, ಇದರ ಜೊತೆ ಪ್ರತಿಭಾನ್ವಿತ ಕಲಾವಿದರೆ ಜೊತೆಗೂಡಿದರೆ ಮುಂಬರುವ ದಿನಗಳಲ್ಲಿ ಕನ್ನಡ ಸಿನಿಮಾರಂಗ ವಿಶ್ವವಿಖ್ಯಾತಿ ಪಡೆಯುವದರಲ್ಲಿ ಸಂಶಯವಿಲ್ಲ.



ಮೃಣಾಲಿನಿ. ಪಿ. ಅಗರಖೇಡ್,



## ತ್ರಿಭುವನಮಲ್ಲ ನೆಂಬಗ್ಗಳಿಕೆಯ ಕನ್ನಡದ ಸುಪುತ್ರ

**ತಾಯೆ ಬಾರ ಮೊಗವ ತೋರ ಕನ್ನಡಿಗರ ಮಾತೆಯೆ**
**ಹರಸು ತಾಯೆ ಸುತರ ಕಾಯೆ ನಮ್ಮ ಜನ್ಮದಾತೆಯೆ**
**ನಮ್ಮ ತಪ್ಪನೆನಿತೊ ತಾಳ್ವೆ ಅಕ್ಕರೆಯಿಂದೆಮ್ಮನಾಳ್ವೆ**
**ನೀನೆ ಕಣಾ ನಮ್ಮ ಬಾಳ್ವೆ ನಿನ್ನ ಮರೆಯಲಮ್ಮೆವು**
**ತನು ಕನ್ನಡ ಮನ ಕನ್ನಡ ನುಡಿ ಕನ್ನಡವೆಮ್ಮವು.**
**ಶಕವಿಜೀತನಮರ ಶಾತವಾಹನಾಖ್ಯನೀ ಶಕಂ,**
**ನಿನ್ನೊಳಂದು ತೊಡಗಿ ಸಂದುದರ್ಧ ಭರತದೇಶಕಂ**
**ಚಳುಕ್ಯರಾಷ್ಟ್ರಕೂಟರೆಲ್ಲ ಗಂಗರಾ ಕದಂಬರೆಲ್ಲಿ**
**ಹೊಯ್ಸಳ ಕಲಚುರ್ಯರೆಲ್ಲ ವಿಜಯನಗರ ಭೂಪರು**
**ಆಳ್ದರಿಲ್ಲಿಯಲ್ಲದೆಲ್ಲಿ ತಾಯೆ ಮೇಣಲೂಪರು.**

ಕಲ್ಯಾಣ ಚಾಲುಕ್ಯರ ಇತಿಹಾಸದ ಕಿರೀಟಪ್ರಾಯ ದೊರೆ, ಆರನೆಯ ವಿಕ್ರಮಾದಿತ್ಯ( ಆಡಳಿತ: ಕ್ರಿ.ಶ. 10761126) ಕುರಿತು ನೀವು ಕೇಳಿರುವಂತೆ ಸಮಗ್ರವಾದ ಮತ್ತು ರೋಚಕವಾದ ಹೆಚ್ಚಿನ ವಿವರಗಳನ್ನು ಕೆಳಗೆ ನೀಡಲಾಗಿದೆ. ಇವನು ಕರ್ನಾಟಕ ಇತಿಹಾಸದ ಸಾರ್ವಕಾಲಿಕ ಶ್ರೇಷ್ಠ ದೊರೆಗಳಲ್ಲಿ ಒಬ್ಬ.

ಕಲ್ಯಾಣ ಚಾಲುಕ್ಯ: ಆರನೆಯ ವಿಕ್ರಮಾದಿತ್ಯ (ವಿಕ್ರಮಾರ್ಕ) ಆರನೆಯ ವಿಕ್ರಮಾದಿತ್ಯನ 50 ವರ್ಷಗಳ ದೀರ್ಘ ಆಳ್ವಿಕೆಯು ಸ್ಥಿರತೆ, ಮಿಲಿಟರಿ ಶಕ್ತಿ ಮತ್ತು ಸಾಂಸ್ಕೃತಿಕ ಉನ್ನತಿಯ ಒಂದು ಅನನ್ಯ ಮಿಶ್ರಣವಾಗಿತ್ತು. ಇವನು ತನ್ನ ಪೂರ್ವಜರಿಗಿಂತಲೂ ಹೆಚ್ಚಿನ ಪ್ರತಿಷ್ಠೆಯನ್ನು ಗಳಿಸಿ, ಚಾಲುಕ್ಯರ ಗತ ವೈಭವವನ್ನು ಮರಳಿ ತಂದನು.

**ಮಿಲಿಟರಿ ಮತ್ತು ರಾಜಕೀಯ ಪರಾಕ್ರಮ (ಕದನ ಕಲಿತನ)**

ವಿಕ್ರಮಾದಿತ್ಯನು ಸಿಂಹಾಸನ ಏರುವುದಕ್ಕೂ ಮುನ್ನ ಮತ್ತು ನಂತರವೂ ಹಲವು ಪ್ರಮುಖ ಯುದ್ಧಗಳಲ್ಲಿ ಗೆದ್ದು, ತನ್ನ ಸಾಮ್ರಾಜ್ಯವನ್ನು ಭದ್ರಪಡಿಸಿದನು.

* ರಾಜ್ಯಾಧಿಕಾರಕ್ಕಾಗಿ ಹೋರಾಟ: ಇವನು ತನ್ನ ಅಣ್ಣ ಎರಡನೆಯ ಸೋಮೇಶ್ವರನ ಆಳ್ವಿಕೆಯ ಅವಧಿಯಲ್ಲಿಯೇ ಸೇನಾಪತಿಯಾಗಿ ಕಾರ್ಯನಿರ್ವಹಿಸಿ ಪ್ರಸಿದ್ಧಿ ಗಳಿಸಿದ್ದನು. ಆದರೆ, ಸಿಂಹಾಸನಕ್ಕಾಗಿ ಅಣ್ಣನ ವಿರುದ್ಧವೇ ಯುದ್ಧ ಮಾಡಿ (ತಮ್ಮನಾದ ಜಯಸಿಂಹನ ಬೆಂಬಲದೊಂದಿಗೆ), ಆತನನ್ನು ಸೋಲಿಸಿ ತಾನೇ ಚಕ್ರವರ್ತಿಯಾದನು.
* ಪರಮ ವೈರಿ ಚೋಳರ ನಿಗ್ರಹ (ಸಾರ್ವಕಾಲಿಕ ಶತ್ರು): ಕಲ್ಯಾಣ ಚಾಲುಕ್ಯರ ಪ್ರಮುಖ ವೈರಿ ಚೋಳರಾಗಿದ್ದರು. ಚೋಳ ದೊರೆ ಮೊದಲನೆಯ ಕುಲೋತ್ತುಂಗನ ವಿರುದ್ಧ ಹಲವು ವರ್ಷಗಳ ಕಾಲ ಸತತವಾಗಿ ಹೋರಾಡಿದನು. 1083ರ ಸುಮಾರಿಗೆ ಕುಲೋತ್ತುಂಗನನ್ನು ಸೋಲಿಸಿ, ವೇಂಗಿ ಪ್ರದೇಶದ ಮೇಲಿನ ಚೋಳರ ಹಿಡಿತವನ್ನು ಸಂಪೂರ್ಣವಾಗಿ ಮುರಿದರು. ಈ ವಿಜಯವು, ಕೃಷ್ಣ ಮತ್ತು ಗೋದಾವರಿ ನದಿಗಳ ನಡುವಿನ ಪ್ರಮುಖ ಕರಾವಳಿ ಪ್ರದೇಶವನ್ನು ಚಾಲುಕ್ಯರ ನೇರ ಆಳ್ವಿಕೆಗೆ ತಂದಿತು.
* ಇತರ ಸ್ಥಳೀಯ ಶಕ್ತಿಗಳ ನಿಯಂತ್ರಣ:
* ಹೊಯ್ಸಳರ ಮೇಲಿನ ಪ್ರಭುತ್ವ: ಆರಂಭದಲ್ಲಿ ಚಿಕ್ಕ ಪಾಳೇಗಾರರಾಗಿದ್ದ ಹೊಯ್ಸಳ ವಿಷ್ಣುವರ್ಧನನಂತಹವರನ್ನು ನಿಯಂತ್ರಣದಲ್ಲಿಟ್ಟುಕೊಂಡಿದ್ದನು.
* ಉತ್ತರ ಭಾರತದ ಗಡಿಗಳು: ಉತ್ತರದ ಭೋಜ್ ಪರಮಾರನ ವಂಶಸ್ಥರನ್ನು ಯಶಸ್ವಿಯಾಗಿ ಸೋಲಿಸಿ, ನರ್ಮದಾ ನದಿಯನ್ನು ಸಾಮ್ರಾಜ್ಯದ ಉತ್ತರದ ಗಡಿಯಾಗಿ ಸುರಕ್ಷಿತಗೊಳಿಸಿದನು.

**ಆಡಳಿತಾತ್ಮಕ ದೂರದೃಷ್ಟಿ ಮತ್ತು 'ವಿಕ್ರಮ ಶಕೆ'**

**ಇವನ ಆಳ್ವಿಕೆಯು ರಾಜಕೀಯ ಸ್ಥಿರತೆಯಿಂದಾಗಿ, ಆಡಳಿತಾತ್ಮಕ ಮತ್ತು ಸಾಂಸ್ಕೃತಿಕ ಸುಧಾರಣೆಗಳಿಗೆ ಆದ್ಯತೆ ನೀಡಿತು.**



* ಚಾಲುಕ್ಯ ವಿಕ್ರಮ ವರ್ಷದ ಆರಂಭ: ಕ್ರಿ.ಶ. 1076 ರಲ್ಲಿ ಸಿಂಹಾಸನಾರೋಹಣ ಮಾಡಿದ ವಿಕ್ರಮಾದಿತ್ಯನು, ಅಂದಿನಿಂದ ಪ್ರಚಲಿತವಿದ್ದ ಶಕ ವರ್ಷವನ್ನು (Shaka Era) ನಿಲ್ಲಿಸಿ, ಚಾಲುಕ್ಯ ವಿಕ್ರಮ ವರ್ಷ ಎಂಬ ತನ್ನದೇ ಆದ ಹೊಸ ಪಂಚಾಂಗವನ್ನು ಆರಂಭಿಸಿದನು. ಸುಮಾರು 70 ವರ್ಷಗಳ ಕಾಲ ಈ ಪಂಚಾಂಗ ಚಾಲ್ತಿಯಲ್ಲಿತ್ತು. ಈ ಕಾರ್ಯವು ಚಾಲುಕ್ಯರ ಸಾರ್ವಭೌಮತ್ವದ ಶ್ರೇಷ್ಠ ಸಂಕೇತವಾಗಿತ್ತು.
* ಶಾಂತಿ ಮತ್ತು ನ್ಯಾಯ: ವಿಕ್ರಮಾದಿತ್ಯನ 50 ವರ್ಷಗಳ ಆಳ್ವಿಕೆಯಲ್ಲಿ, ಇವನ ಆಡಳಿತವು ನ್ಯಾಯ ಮತ್ತು ಸ್ಥಿರತೆಗೆ ಹೆಸರಾಗಿತ್ತು. ವ್ಯಾಪಾರ ಮತ್ತು ಕೃಷಿಯು ಸಮೃದ್ಧಿಗೊಂಡಿದ್ದವು.
* ಪ್ರಾಂತೀಯ ಆಡಳಿತ: ಇವನು ಸಾಮ್ರಾಜ್ಯವನ್ನು ಉತ್ತಮವಾಗಿ ವಿಭಜಿಸಿ, ತನ್ನ ಆಡಳಿತವನ್ನು ಸರಳಗೊಳಿಸಿದ್ದನು.

**ಸಾಹಿತ್ಯ ಮತ್ತು ಜ್ಞಾನದ ಪೋಷಣೆ (ವಿದ್ಯಾವಿಲಾಸ)**

ವಿಕ್ರಮಾದಿತ್ಯನು ವಿದ್ವಾಂಸರಿಗೆ ಆಶ್ರಯ ನೀಡುವಲ್ಲಿ ಅಪಾರವಾದ ಆಸಕ್ತಿ ಹಾಗೂ ಆನಂದ ಕಂಡಿದ್ದನು. ಇವನ ಕಾಲದ ಸಾಹಿತ್ಯ ಮತ್ತು ಕಾನೂನು ಗ್ರಂಥಗಳು ಇಂದಿಗೂ ಪ್ರಸ್ತುತವಾಗಿವೆ.

* ಬಿಲ್ಹಣ ಮತ್ತು 'ವಿಕ್ರಮಾಂಕದೇವ ಚರಿತ':
* ಕಾಶ್ಮೀರದ ಸಂಸ್ಕೃತ ಕವಿ ಬಿಲ್ಹಣನು ವಿಕ್ರಮಾದಿತ್ಯನ ವೈಭವಕ್ಕೆ ಮಾರುಹೋಗಿ ಕಲ್ಯಾಣಕ್ಕೆ ಬಂದನು.
* ಬಿಲ್ಹಣನು ತನ್ನ ಪೋಷಕನ ಗುಣಗಾನ ಮಾಡುವ 'ವಿಕ್ರಮಾಂಕದೇವ ಚರಿತ' ಎಂಬ ಪ್ರಖ್ಯಾತ ಸಂಸ್ಕೃತ ಕಾವ್ಯವನ್ನು ರಚಿಸಿದನು. ಇದು ವಿಕ್ರಮಾದಿತ್ಯನ ಪರಾಕ್ರಮ, ಬುದ್ಧಿವಂತಿಕೆ ಮತ್ತು ನ್ಯಾಯಪರ ಆಡಳಿತವನ್ನು ವಿವರವಾಗಿ ತಿಳಿಸುತ್ತದೆ.
* ವಿಜ್ಞಾನೇಶ್ವರ ಮತ್ತು 'ಮಿತಾಕ್ಷರ':
* ಹಿಂದೂ ಕಾನೂನು ಇತಿಹಾಸದಲ್ಲಿ ಅತ್ಯಂತ ಪ್ರಭಾವಶಾಲಿ ವ್ಯಕ್ತಿಗಳಲ್ಲಿ ಒಬ್ಬರಾದ ವಿಜ್ಞಾನೇಶ್ವರರು ವಿಕ್ರಮಾದಿತ್ಯನ ಆಸ್ಥಾನದಲ್ಲಿದ್ದರು.
* ಅವರು 'ಮಿತಾಕ್ಷರ' ಎಂಬ ಕಾನೂನು ಗ್ರಂಥವನ್ನು ರಚಿಸಿದರು, ಇದು ಯಜ್ಞವಲ್ಕ್ಯ ಸ್ಮೃತಿಯ ಟೀಕೆಯಾಗಿದೆ. ಈ ಗ್ರಂಥವು ದಕ್ಷಿಣ ಭಾರತದಲ್ಲಿ ಹಿಂದೂ ಉತ್ತರಾಧಿಕಾರ ಮತ್ತು ಕುಟುಂಬ ಕಾನೂನಿನ ಮೇಲೆ ದೀರ್ಘಕಾಲದ ಪ್ರಭಾವ ಬೀರಿತು.
* ಕನ್ನಡದ ಪ್ರೋತ್ಸಾಹ: ವಿಕ್ರಮಾದಿತ್ಯನ ಸಾಮಂತರು ಮತ್ತು ಅಧಿಕಾರಿಗಳು ಕೂಡ ಕನ್ನಡ ಭಾಷೆ ಮತ್ತು ಸಾಹಿತ್ಯಕ್ಕೆ ವಿಶೇಷ ಪ್ರೋತ್ಸಾಹ ನೀಡಿದರು. ಇವನ ಆಳ್ವಿಕೆಯ ಶಾಸನಗಳು, ವಿಶೇಷವಾಗಿ ಕಲ್ಯಾಣದ ಸುತ್ತಮುತ್ತಲಿನ ಪ್ರದೇಶಗಳಲ್ಲಿ, ಇವನ ಆಡಳಿತದಲ್ಲಿ ಕನ್ನಡಕ್ಕೆ ನೀಡಲಾಗಿದ್ದ ಪ್ರಾಮುಖ್ಯತೆಯನ್ನು ತೋರಿಸುತ್ತವೆ.

**ಶಾಸನ ಮತ್ತು ದೇವಾಲಯಗಳ ಕೊಡುಗೆ**

ವಿಕ್ರಮಾದಿತ್ಯನ ಕಾಲದಲ್ಲಿ ಕಲೆ ಮತ್ತು ವಾಸ್ತುಶಿಲ್ಪಕ್ಕೆ ಉತ್ತಮ ಉತ್ತೇಜನ ದೊರೆಯಿತು.

* ದೇವಾಲಯಗಳ ನಿರ್ಮಾಣ: ಇವನ ಆಳ್ವಿಕೆಯಲ್ಲಿ ಅನೇಕ ಹೊಸ ವಾಸ್ತುಶಿಲ್ಪ ಶೈಲಿಗಳು ರೂಪುಗೊಂಡವು. ಇಟಗಿ ಮಹಾದೇವ ದೇವಾಲಯದಂತಹ ದೇವಾಲಯಗಳ ನಿರ್ಮಾಣವು ಚಾಲುಕ್ಯರ ವಾಸ್ತುಶಿಲ್ಪ ಶೈಲಿಯ ಪ್ರಬುದ್ಧತೆಯನ್ನು ತೋರಿಸುತ್ತವೆ.
* ಶಾಸನಗಳ ವೈಭವ: ವಿಕ್ರಮಾದಿತ್ಯನ ಶಾಸನಗಳು ಸುದೀರ್ಘವಾಗಿದ್ದು, ಆತನ ಸಾಧನೆಗಳನ್ನು ವಿವರಿಸುವುದರ ಜೊತೆಗೆ, ಅಂದಿನ ಸಮಾಜ ಮತ್ತು ಆಡಳಿತ ಪದ್ಧತಿಯ ಬಗ್ಗೆ ಅಮೂಲ್ಯ ಮಾಹಿತಿಯನ್ನು ಒದಗಿಸುತ್ತವೆ.

ಆರನೆಯ ವಿಕ್ರಮಾದಿತ್ಯನ ಪ್ರಮುಖ ಬಿರುದುಗಳು:

ತ್ರಿಭುವನಮಲ್ಲ

ಮೂರು ಲೋಕಗಳಲ್ಲಿಯೂ (ಭೂಮಿ, ಸ್ವರ್ಗ, ಪಾತಾಳ) ವಿಜಯಶಾಲಿ ಎಂಬ ಅರ್ಥ.

ಪರ್ಮೇಶ್ವರ

ಪರಮೇಶ್ವರನಂತೆ ಪರಮಾಧಿಕಾರಿಯೆಂದು ಕಾವ್ಯಗಳಲ್ಲಿ ಉಲ್ಲೇಖ.

ಭುವನೇಕಮಲ್ಲ

ಭೂಮಿಯ ಏಕೈಕ ವೀರನಾದ ರಾಜ.

ತ್ರೈಲೋಕ್ಯಮಲ್ಲ

ಮೂರು ಲೋಕಗಳಲ್ಲಿಯೂ ಅಜೇಯನಾದವನು.

ಪಂಚಾಲಕೇಶ್ವರ ಪ್ರಿಯಭಕ್ತ

ಪಂಚಾಲೇಶ್ವರ ದೇವರ (ಶಿವನ) ಆರಾಧಕನಾಗಿದ್ದರಿಂದ ಈ ಬಿರುದು ದೊರಕಿತು.

ಸತ್ಯಾಶ್ರಯ ಕುಲತಿಲಕ

ಸತ್ಯಾಶ್ರಯ ವಂಶದ (ಚಾಲುಕ್ಯ ವಂಶದ) ಆಭರಣ.

ವಿಜಯಾದಿತ್ಯರಾಜ ಪರಮಪೂಜ್ಯ ಪುತ್ರ

ವಿಜಯಾದಿತ್ಯನ ಪುತ್ರನಾಗಿದ್ದುದರಿಂದ ಕೆಲ ಶಾಸನಗಳಲ್ಲಿ ಹೀಗೆ ಉಲ್ಲೇಖವಿದೆ.

ಅವನ ಕಾಲದ ಶಿಲಾಶಾಸನಗಳಲ್ಲಿ ಉಲ್ಲೇಖಿಸಲಾದ ಪೂರ್ಣ ಬಿರುದಾವಳಿ ಉದಾಹರಣೆ ಹೀಗಿದೆ

ಶ್ರೀಮತ್ಪರಮಮಹೇಶ್ವರ ಪರ್ಮಭಟ್ಟಾರಕ ಮಹಾರಾಜಾಧಿರಾಜ ಪರಮೇಶ್ವರ ಶ್ರೀ ತ್ರಿಭುವನಮಲ್ಲ ವಿಕ್ರಮಾದಿತ್ಯ ದೇವ

ಆರನೆಯ ವಿಕ್ರಮಾದಿತ್ಯನು ಕಲ್ಯಾಣದ ಚಾಲುಕ್ಯರ ರಾಜಕೀಯ ಶಕ್ತಿಯನ್ನು ಅತಿ ಉತ್ತುಂಗಕ್ಕೆ ಕೊಂಡೊಯ್ದನು. ಇವನು ಯುದ್ಧಗಳನ್ನು ಗೆಲ್ಲುವುದರ ಜೊತೆಗೆ, ಸಾಹಿತ್ಯ ಮತ್ತು ಜ್ಞಾನದ ಪೋಷಣೆಗೆ ನೀಡಿದ ಕೊಡುಗೆಯಿಂದಾಗಿ, ಇವನ ಆಳ್ವಿಕೆಯು ಕೇವಲ ಸುವರ್ಣಯುಗವಾಗಿರದೆ, ಚಾಲುಕ್ಯರ ಇತಿಹಾಸದ ಅಮರ ಅಧ್ಯಾಯ ಎಂದು ಪರಿಗಣಿಸಲ್ಪಟ್ಟಿದೆ. ಇವನ ನಂತರ ಚಾಲುಕ್ಯ ಸಾಮ್ರಾಜ್ಯವು ನಿಧಾನವಾಗಿ ಪತನವಾಗತೊಡಗಿತು ಎಂದು ಹೇಳಲು ವ್ಯಥೆಯಾಗುತ್ತದೆ. ಕರನಾಡ ತಾಯಿ ಸದಾ ಗರ್ವದಿಂದ ಬಾಳಬೇಕು.ಸಿರಿಗನ್ನಡಂ ಗೆಲ್ಗೆ! ವಂದನೆಗಳು.

ಕನ್ನಡದ ರಾಜ-ಮಹಾರಾಜರು



ರೂಪ ಮಂಜುನಾಥ
ಹೊಳೆನರಸೀಪುರ

Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from Mihir Akash K.R, #78, Daya Marga Near Geetha School, Siddartha Nagar Mysore-570011, Editor K.N Ravi,